SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:1, Pages:56
August - 2025, Price Rs. 20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಆಗಸ್ಟ್ 2025 ಬೆಲೆ ರೂ. 20/-



ಶ್ರೀ ವರಮಹಾಲಕ್ಷ್ಮೀ ವ್ರತ 08-08-2025



# ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

## 24-09-2025 ರಿಂದ 02-10-2025 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 23-09-2025 | ಮಂಗಳವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 24-09-2025 | ಬುಧವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ದೊಡ್ಡಶೇಷವಾಹನ |
| 25-09-2025 | ಗುರುವಾರ | ಚಿಕ್ಕಶೇಷವಾಹನ | ಹಂಸವಾಹನ |
| 26-09-2025 | ಶುಕ್ರವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 27-09-2025 | ಶನಿವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 28-09-2025 | ಭಾನುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 29-09-2025 | ಸೋಮವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 30-09-2025 | ಮಂಗಳವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 01-10-2025 | ಬುಧವಾರ | ರಥೋತ್ಸವ | ಅಶ್ವವಾಹನ |
| 02-10-2025 | ಗುರುವಾರ | ಪಲ್ಲಕಿ ಉತ್ಸವ,ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |



# ಭಗವದ್ಗೀತೆ

ದೇಹೀ ನಿತ್ಯಮವಧ್ಯೋಽಯಂ
ದೇಹೇ ಸರ್ವಸ್ಯ ಭಾರತ।
ತಸ್ಮಾತ್ಸರ್ವಾಣಿ ಭೂತಾನಿ
ನ ತ್ವಂ ಶೋಚಿತುಮರ್ಹಸಿ

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -30)

ಅರ್ಜುನ, ಎಲ್ಲರ ದೇಹದಲ್ಲಿರುವ ಈ ಆತ್ಮತತ್ತ್ವ ಕೊಲ್ಲಬರುವಂಥ ವಸ್ತುವಲ್ಲ. ಆದ್ದರಿಂದ ಯಾವ ಪ್ರಾಣಿಯ ಬಗೆಗೂ ನೀನು ವ್ಯಥೆಪಡುವ ಕಾರಣವಿಲ್ಲ

ಕೃಷ್ಣ ನೀ ಬೇಗನೆ ಬಾರೋ
ಬೇಗನೇ ಬಾರೋ ಮುಕವನ್ನು ತೋರೋ ॥ಅ.ಪ.॥

ಕಾಲಲಂದಿಗೆ ಗೆಜ್ಜೆ ನೀಲದ ಬಾವುಲಿ
ನೀಲವರ್ಣನೆ ನಾಟ್ಯ ವಾಡುತ ಬಾರೋ
ಉಡಿಯಲ್ಲಿ ಉಡಿಗೆಜ್ಜೆ ಬೆರಳಲ್ಲಿ ಉಂಗುರ
ಕೊರಳೊಳು ಹಾಕಿದ ವೈಜಯಂತಿ ಮಾಲೆ ॥1॥

ಕಾಶಿ ಪೀತಾಂಬರ ಕೈಯಲಿ ಕೊಳಲು
ಪೂಶಿದ ಶ್ರೀಗಂಧ ಮೈಯೊಳು ಘಮಘಮ
ತಾಯಿಗೆ ಬಾಯಲ್ಲಿ ಜಗವನ್ನು ತೋರಿದ
ಜಗದೋದ್ಧಾರಕ ನಮ್ಮ ಉಡುಪಿ ಶ್ರೀಕೃಷ್ಣ ॥2॥

# ದಯಾ ಶತಕಮ್



**ಅನವಧಿಮಧಿಕೃತ್ಯ ಶ್ರೀನಿವಾಸಾನುಕಂಪಾ ವವಿತಥವಿಷಯತ್ವಾ ದ್ವಿಶ್ವಮವ್ರೀಡಯಂತೀ ।**

**ವಿವಿಧ ಕುಶಲ ನೀವೀ ವೇಂಕಟೇಶಪ್ರಸೂತಾ ಸ್ತುತಿರಿಯ ಮನವದ್ಯಾ ಶೋಭತೇ ಸತ್ವಭಾಜಾಮ್ ॥ 105॥**

ಹಿಂದಿನ ಶ್ಲೋಕದಲ್ಲಿ ಆಚಾರ್ಯರ ಈ ಶ್ಲೋಕವು ತಾನು ಸ್ವಪ್ರೇರಣೆಯಿಂದ ರಚಿಸಿದ್ದಲ್ಲವೆಂದೂ ಭಗವಂತನ ಪ್ರೇರಣೆಯಿಂದ ರಚಿಸಲ್ಪಟ್ಟದ್ದೆಂದೂ ಸ್ವತಃ ಭಗವಂತನೇ ತನ್ನ ಮೂಲಕ ಹಾಡಿರುವುದೆಂದೂ ಹೇಳಿದ್ದಾರಷ್ಟೆ. ಈ ಶ್ಲೋಕದಲ್ಲಿ ಅವರು ಈ ಸ್ತೋತ್ರದ ಹಿರಿಮೆಯನ್ನು ಸ್ಪಷ್ಟಪಡಿಸಿದ್ದಾರೆ.


ಈ ಸ್ತೋತ್ರವು ಅತ್ಯಂತ ಹಿರಿಮೆಯುಳ್ಳದ್ದಾಗಿ ಪ್ರಕಾಶಿಸುತ್ತದೆ. ಇದರ ಹಿರಿಮೆಯನ್ನು ವಿವಿಧ ರೀತಿಗಳಲ್ಲಿ ನಾವು ಕಾಣಬಹುದು. ಮೊದಲನೆಯದಾಗಿ ಇದು ದಯಾದೇವಿಯನ್ನು ಕುರಿತು, ಲೋಕೇಶ್ವರನಾದ ಶ್ರೀನಿವಾಸನ ದಯೆಯನ್ನು ಕುರಿತು, ರಚಿತವಾಗಿರುವುದು. ಅಂದರೆ ವಸ್ತುವೇ ಹಿರಿದಾದದ್ದು. ಭಗವಂತನ ದಯೆಯನ್ನು ಎಷ್ಟು ವಿಧವಾಗಿ ವರ್ಣಿಸಿದರೂ ಕಡಿಮೆಯೇ. ಈ ಲೋಕದಲ್ಲಿ ಹೆಜ್ಜೆ ಹೆಜ್ಜೆಗೂ ಭಗವಂತನ ದಯೆಯ ಫಲವನ್ನು ಒಂದಲ್ಲ ಒಂದು ರೀತಿಯಿಂದ ನೋಡುತ್ತಿರುತ್ತೇವೆ. ಆದ್ದರಿಂದಲೇ ಭಗವಂತನ ದಯೆಯನ್ನು ಅಪಾರವಾದದ್ದೆನ್ನುವುದು. ಎರಡನೆಯದಾಗಿ ಇಂತಹ ವಿಸ್ತಾರವಾದ ವಸ್ತುವನ್ನೊಳಗೊಂಡ ಈ ಸ್ತೋತ್ರವನ್ನು ರಚಿಸಿರುವವರು ಸ್ವತಃ ವೇಂಕಟೇಶ ಕವಿ. **'ವೇಂಕಟೇಶ ಪ್ರಸೂತಾ'** ಎಂದು ಬರೆದಿರುವುದರಲ್ಲಿ ಬಹಳ ಸ್ವಾರಸ್ಯವಿದೆ. ವೇಂಕಟೇಶನೆಂದರೆ ವೇಂಕಟಾಚಲಾಧೀಶನಾದ ಭಗವಂತನೂ ಹೌದು, ತಾನೂ ಹೌದು, ಇದನ್ನು ರಚಿಸಿರುವವರು ತಾವೇ ಆದರೂ ತಾವು ಸ್ವತಂತ್ರಿಸಿ ಬರೆದದ್ದಲ್ಲವೆಂದೂ, ಭಗವಂತನ ಪ್ರೇರಣೆಯಿಂದ ಬರೆದಿರುವುದೆಂದೂ, ಭಗವಂತನೆ ತನ್ನನ್ನು ಸಾಧನವಾಗಿ ಮಾಡಿಕೊಂಡು ಹಾಡಿದ್ದೆಂದೂ ಆಚಾರ್ಯರು ಈ ಹಿಂದೆಯೆ ತಿಳಿಸಿರುವರಷ್ಟೆ. ಅಲ್ಲದೆ **'ಘಂಟಾವತಾರ'**ರೆಂದು ಪ್ರಸಿದ್ಧರಾದ ಆಚಾರ್ಯರು ದೈವಾಂಶ ಸಂಭೂತರೆಂಬುದೂ ಪ್ರಸಿದ್ಧವಾದ ವಿಷಯ. ಇದರ ವಸ್ತು ಕೇವಲ ಸತ್ಯಾಂಶಗಳಿಂದ ಕೂಡಿದ್ದು, ತಾತ್ವಿಕವಾದದ್ದು. ಇದು ಈ ಸ್ತೋತ್ರದ ಮತ್ತೊಂದು ವೈಶಿಷ್ಟ್ಯ. ಇದರ ವಸ್ತುವು ಜನಸಾಮಾನ್ಯರು ಒಪ್ಪುವಂಥಾದ್ದು. ವಿರೋಧಿಸಿ ನಾನು ಒಪ್ಪಲಾರೆನೆಂದು ಯಾರೇ ಆಗಲಿ ಹೇಳುವಂತಹ ವಿಷಯ ಯಾವುದೂ ಇದರಲ್ಲಿಲ್ಲ **'ಅವಿತಥ ವಿಷಯತ್ವಾದ್ವಿಶ್ವ ಮವೀಡಯಂತೀ'** ಎಂಬುದರಿಂದ ಆಚಾರ್ಯರು ಇದನ್ನು ಸ್ಪಷ್ಟಪಡಿಸಿದ್ದಾರೆ. ಸಮಸ್ತ ವಿಶ್ವವೂ ಇದನ್ನು ಒಪ್ಪುತ್ತದೆಯೆಂಬುದು ಆಚಾರ್ಯರ ನಂಬಿಕೆ. ಇಂತಹ ವಸ್ತುವಾದ್ದರಿಂದ ಇದು ದೋಷರಹಿತವಾಗಿರುತ್ತದೆಂಬುದು ಆಚಾರ್ಯರ ಅಭಿಮತ. ಆದ್ದರಿಂದಲೇ, ದೋಷಗಳಿದ್ದರೆ ಅದು ಪ್ರಥಮಪ್ರಯತ್ನವೆಂದು ತಿಳಿದು ಮನ್ನಿಸಬೇಕೆಂದು ಮೊದಲು ಪ್ರಾರ್ಥಿಸಿದ ಆಚಾರ್ಯರು, ಈ ಶ್ಲೋಕದಲ್ಲಿ ಈ ಸ್ತೋತ್ರವು ಅನವದ್ಯಾ ಎಂದರೆ ದೋಷರಹಿತವಾದದ್ದೆಂದು ಧೈರ್ಯವಾಗಿ ಹೇಳಿದ್ದಾರೆ. ಅಲ್ಲದೆ ವಿವಿಧ ಕುಶಲ ನೀವೀ ಎನ್ನುವುದರಿಂದ ಈ ಸ್ತೋತ್ರದಲ್ಲಿ ತಾವು ತಮ್ಮ ಪಾಂಡಿತ್ಯದ ಕೌಶಲ್ಯಗಳನ್ನೂ ಶಾಸ್ತ್ರೀಯ ವಿಚಾರಗಳನ್ನೂ ಉಪಯೋಗಿಸಿ ವಿದ್ವಜ್ಜನರಂಜಕವಾಗುವಂತೆ ರಚಿಸಿರುವುದಾಗಿಯೂ ಆಚಾರ್ಯರು ಸೂಚಿಸಿದ್ದಾರೆ. ಹೀಗೆ ಹೇಳುವುದರಿಂದ ಆಚಾರ್ಯರಿಗೆ ತಮ್ಮ ಜ್ಞಾನಪರಿಪಾಕ ಮತ್ತೂ ವಿದ್ಯಾ ಪ್ರೌಢಿಮೆಗಳಲ್ಲಿರುವ ದೃಢವಾದ ನಂಬಿಕೆಯೂ ವ್ಯಕ್ತವಾಗುತ್ತದೆ. ಕಡೆಗೆ **"ಶೋಭತೇ ಸತ್ಯಭಾಜಾಂ"** ಎಂದರೆ ಪಂಡಿತರಿಗೂ ಸಾತ್ವಿಕರಿಗೂ ಆಹ್ಲಾದವನ್ನುಂಟು ಮಾಡುತ್ತದೆಂದೂ ತಿಳಿಸಿದ್ದಾರೆ. ಒಟ್ಟಿನಲ್ಲಿ ಆಚಾರ್ಯರು ಈ ರೀತಿಯಾಗಿ ಈ ಸ್ತೋತ್ರವು ಸರ್ವಜನಾದರಣೀಯವಾಗಿ ಶೋಭಿಸುತ್ತದೆಯೆಂದು ಹೇಳಿ ಅದರ ಹಿರಿಮೆಯನ್ನು ವಿಶದಪಡಿಸಿ ಕವಿ ಸಂಪ್ರದಾಯವನ್ನು ಬಳಸಿಕೊಂಡಿದ್ದಾರೆ.

ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ : 05 ಆಗಸ್ಟ್ - 2025 ಸಂಚಿಕೆ : 01

ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಶ್ರೀ ಜೆ.ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಚುರಣೆ,ಸಂಪಾದಕರು ,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್, ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ


# ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ವಂದಿಸುವುದಾದಿಯಲಿ ಗಣನಾಥನ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 07 |
| ಶ್ರೀಹಯಗ್ರೀವ ದೇವರ ಮಹಿಮೆ | -ಡಾ॥ ಎ. ನಿರಂಜನ್ | 10 |
| ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ | -ಶ್ರೀಮತಿ. ಕೆ.ವಿ. ಲತ | 12 |
| ಮುರಾರಿಯ ಮೊದಲ ದಿನಗಳು | -ಬೇಲೂರು ರಾಮಮೂರ್ತಿ | 15 |
| ಸುಂದರ ಮೈದುಂಬುವ ಮಧುಮಾಸ - ಶ್ರಾವಣ | -ಶ್ರೀಮತಿ. ವಾರುಣಿ ಹೊನ್ನಾಳಿ | 18 |
| ಹಿಮವದ್ ಗೋಪಾಲಸ್ವಾಮಿ ಬೆಟ್ಟ | -ಕೆಂಗೇರಿ ಚಕ್ರಪಾಣಿ | 21 |
| ಪುಸ್ತಕ ಪರಿಚಯ - ಶ್ರೀ ಹರಿಯ ದಿವ್ಯ ಲೀಲೆಗಳನ್ನು ನಿರೂಪಿಸುವ ಉದ್ಗ್ರಂಥ | -ಪ್ರಣವ | 24 |
| ಇಭರಾಮಪುರದ ಅಪ್ಪಾವರು | -ಶ್ರೀಮತಿ. ವೃಂದ ಸಂಗಮ್ | 25 |
| ಶ್ರೀ ಸಿದ್ಧಿ ವಿನಾಯಕ ವ್ರತಕಲ್ಪ | - ಎಸ್. ವಾದಿರಾಜ | 27 |
| ವರಮಹಾಲಕ್ಷ್ಮೀ ವ್ರತ | -ಶ್ರೀಮತಿ ಕೆ.ವಿ. ಪದ್ಮಾವತಿ | 36 |
| ಶ್ರೀ ವೆಂಕಟಾಚಲ ಮಹಾತ್ಮ್ಯ | - ಶ್ರೀಮತಿ ಎನ್. ಪಾರ್ವತಿ | 39 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 41 |
| ಆಂಡಾಳ್ | -ಡಾ॥ ಎನ್. ಕೆ.ರಾಮಶೇಷನ್ | 43 |
| ರಾಶಿಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ-ಮಗನನ್ನೇ ಮಾದರಿಯಾಗಿ ಬೆಳೆಸಿದ ವಿಭಾಂಡಕ ಋಷಿ | - ಎ.ಆರ್.ರಘುರಾಮ | 48 |
| ಚಿತ್ರಕಥೆ-ಮೊದಲ ನಮಸ್ಕಾರ ಮಾಡದಿದ್ದರೆ | - ಡಾ॥ ಕೆ. ರವಿಚಂದ್ರನ್ | 52 |


**ಮುಖಚಿತ್ರ -** ಶ್ರೀ ಮಹಾಲಕ್ಷ್ಮೀ ಅಮ್ಮನವರು

**ಹಿಂಬದಿಚಿತ್ರ-** ಶ್ರೀ ವಿನಾಯಕ ಸ್ವಾಮಿ (ಚಿತ್ರಕಲೆ : ಪಿ. ರಮೇಶ್)

# ಸಂಪಾದಕೀಯ...

# ಪ್ರಕೃತಿಯ ರಕ್ಷಣೆಯೇ ಹಬ್ಬದ ಪರಮಾರ್ಥ!

ಲೋಕಕ್ಕೆಲ್ಲಾ ಅತ್ಯುತ್ತಮವಾದ ಸಂದೇಶಗಳನ್ನು ಹಂಚುವಂತಹಾ ಅದ್ಭುತವಾದ ಹಬ್ಬ ಈ ವಿನಾಯಕ ಚರ್ತುರ್ಥಿ! ಈ ಹಬ್ಬವು ಪ್ರಕೃತಿಯ ಪರವಾಗಿ ನಮಗೆ ಸ್ಪಷ್ಟವಾದ ಸಂದೇಶವನ್ನು ನೀಡುತ್ತದೆ. ಕೆಲವು ಹಬ್ಬಗಳು ಭಕ್ತಿಶ್ರದ್ಧೆಗಳೊಂದಿಗೆ ಮನೆಗೆ ಮಾತ್ರ ಪರಿಮಿತವಾಗಿರುತ್ತವೆ. ಆದರೆ ಸಮಾಜದಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಆಚರಿಸುವ ಹಬ್ಬಗಳಲ್ಲಿ ವಿನಾಯಕಚತುರ್ಥಿ ಮುಖ್ಯವಾದುದಾಗಿದೆ.

ಪ್ರಕೃತಿ ಮಾತೆ ಎಂದರೆ ಪಾರ್ವತೀದೇವಿ! ಆಕೆಯ ಪ್ರೀತಿಯ ಪುತ್ರ ವಿನಾಯಕ. ಪ್ರಕೃತಿಮಾತೆಯ ದಿವ್ಯ ಶರೀರಕ್ಕೆ ಮಾಡಿಕೊಂಡಿದ್ದ ಲೇಪನದ ಔಷಧೀಯ ತತ್ವದಲ್ಲಿ ಪ್ರಾಣವನ್ನು ಪಡೆದಂತಹಾ ದೇವರು ಈ ವಿನಾಯಕ! ಹೊಲಗಳಿಗೆ ಬೆಳೆಗಳಿಗೆ ಗೊಬ್ಬರವನ್ನು ಒದಗಿಸುವಂತಹಾ ಮೂಷಿಕವನ್ನು ತನ್ನ ವಾಹನವನ್ನಾಗಿ ಮಾಡಿಕೊಂಡವನು. ಬೆಳೆಗಳನ್ನು ಕತ್ತರಿಸಿದ ನಂತರ ಅವುಗಳನ್ನು ಮರದ ಮೂಲಕ ಕೇರುತ್ತಾರೆ. ಆ ಮರದಂತಹಾ ಕಿವಿಗಳನ್ನು ಹೊಂದಿದವನು! ಬೆಳೆಗಳು ಚೆನ್ನಾಗಿ ಬೆಳೆದಾಗ 'ಗಜದಂತಹಾ ಬೆಳೆ ಬೆಳೆದಿದೆ' ಎನ್ನುತ್ತಾರೆ. ಚೆನ್ನಾಗಿ ಬೆಳೆ ಬೆಳೆದಿರುವುದಕ್ಕೆ ಚಿಹ್ನೆಯಾಗಿ ವಿನಾಯಕನು ಆನೆಯ ತಲೆಯನ್ನು ಧರಿಸಿದ್ದಾನೆ. ಬೆಳೆದ ಬೆಳೆಗಳನ್ನು ದೊಡ್ಡ ದೊಡ್ಡ ಗೋದಾಮುಗಳಲ್ಲಿ ತುಂಬಿಸಿರುತ್ತಾರೆ. ಗೋದಾಮಿನಂತಹಾ ದೊಡ್ಡ ಶರೀರವನ್ನು ವಿನಾಯಕನು ಹೊಂದಿದ್ದಾನೆ. ಏಕದಂತವು ಹೊಲವನ್ನು ಊಳುವುದಕ್ಕೆ ಬಳಸುವ ನೇಗಿಲಿಗೆ ಸಂಕೇತವಾಗಿದೆ. ಮೋದಕ, ಕಡುಬು, ಬೆಳೆಗಳು ಬಂದ ಹೊಸದರಲ್ಲಿ ಭಗವಂತನಿಗೆ ನೈವೇದ್ಯವನ್ನಾಗಿ ಇರಿಸುತ್ತೇವೆ. ಧಾನ್ಯವನ್ನು ಸಂಗ್ರಹಿಸುವಂತಹಾ ಗೋದಾಮಿನ ಸುತ್ತಲೂ ಗೋಣೀದಾರಗಳನ್ನು ಕಟ್ಟುತ್ತಾರೆ. ಹಾಗೇ ಈ ಲಂಬೋದರರನ ಉದರದ ಸುತ್ತಲೂ ನಾಗಪಾಶವು ಬಂಧಿಸಿರುತ್ತದೆ. ರೈತರು ವ್ಯಾಪಾರಸ್ಥರು ಗಣೇಶನನ್ನು ವಿಸರ್ಜನೆ ಮಾಡಿ ಅಲ್ಲಿನ ಮಣ್ಣನ್ನು ಸ್ವಲ್ಪ ತಂದು ಧಾನ್ಯದ ಗೋದಾಮುಗಳಲ್ಲಿ ಹೊಲದಲ್ಲಿ ಅಂಗಡಿಗಳಲ್ಲಿ ಚೆಲ್ಲುತ್ತಾರೆ. ವಿನಾಯಕನು ಬೆಳೆಗಳಿಗೆ, ಪ್ರಕೃತಿಗೆ ಪ್ರತಿರೂಪದಂತೆ ಆರಾಧಿಸಲ್ಪಡುತ್ತಿದ್ದಾನೆ. ಮಳೆಗಾಲವು ಪ್ರಾರಂಭವಾಗಿ ಮರಗಳ ರೆಂಬೆ ಕೊಂಬೆಗಳಲ್ಲಿ ಚಿಗುರುಗಳು ಮೊಳಕೆಯೊಡೆದು ಪರ್ಯಾವರಣವು ಹಸಿರು ಸೀರೆಯನ್ನು ಧರಿಸಿದಂತೆ ಕಂಡು ಬರುವ ಕಾಲದಲ್ಲಿ ಈ ಹಬ್ಬವು ಬರುತ್ತದೆ. ಬೇಸಿಗೆಗಾಲದ ಉರಿಯುವ ಬಿಸಿಲಿಗೆ ಬೋಳಾದ ಮರಗಳೆಲ್ಲವೂ ಪುನಃ ಚಿಗುರಿ ಹೊಸ ಹೊಸ ಎಲೆಗಳಿಂದ ಕಂಗೊಳಿಸುತ್ತಿರುತ್ತವೆ.

ವಿನಾಯಕ ಚತುರ್ಥಿಯು ಅತ್ತ ವ್ಯವಸಾಯಕ್ಷೇತ್ರಕ್ಕೂ, ಇತ್ತ ಪ್ರಕೃತಿಯ ರಕ್ಷಣೆಗೆ ಉಪಯೋಗವಾಗುವಂತೆ ನಮ್ಮ ಹಿರಿಯರು ಆಚರಣೆಯನ್ನು ಮಾಡಿದ್ದಾರೆ. ಮೊದಲ ಮಳೆಯೊಂದಿಗೆ ಕೆರೆಗಳಲ್ಲಿ, ಹಳ್ಳದಲ್ಲಿ ನಿಲ್ಲುವ ನೀರಿನಿಂದಾಗಿ ಭೂಮಿಯು ತೇವಗೊಂಡಿರುತ್ತದೆ. ಆ ಮಣ್ಣನ್ನೇ ಗ್ರಾಮಸ್ಥರು ತಂದು ಅದರಿಂದ ವಿನಾಯಕನ ಪ್ರತಿಮೆಗಳನ್ನು ಮಾಡಿ ಪೂಜೆ ಮಾಡುತ್ತಾರೆ. ಇದರಿಂದ ಗ್ರಾಮದಲ್ಲಿನ ಜನರೆಲ್ಲರೂ ತಮ್ಮ ಸಮೀಪದಲ್ಲಿರುವ ಕೆರೆಗಳು, ಹಳ್ಳಗಳಿಂದ ಮಣ್ಣನ್ನು ತಂದು ಸ್ವಲ್ಪ ಮಣ್ಣನ್ನು ಮನೆಗೆ ತರುತ್ತಿದ್ದರು. ಇದಲ್ಲದೆ ಪ್ರತಿ ಊರಿನಲ್ಲೂ ಬೀದಿಯಲ್ಲಿ ಯುವಕರು ಭಾರೀ ಸಂಖ್ಯೆಯಲ್ಲಿ ಸೇರಿ ಮಣ್ಣನ್ನು ಕೂಡಿಸಿ ದೊಡ್ಡ ದೊಡ್ಡ ವಿನಾಯಕನ ವಿಗ್ರಹಗಳನ್ನು ಪ್ರತಿಷ್ಠಾಪನೆಯನ್ನು ಮಾಡುತ್ತಿದ್ದರು. ಇದರಿಂದ ಕೆರೆಯಲ್ಲಿನ ಹೂಳನ್ನು ತೆಗೆಸಿದಂತೆ ಆಗಿ ನೀರು ನಿಲ್ಲುವುದಕ್ಕೆ ಆಯಾ ಕೆರೆಗಳಿಗೆ ಜೀವವನ್ನು ನೀಡುತ್ತಿದ್ದರು. ವಿನಾಯಕನನ್ನು ಹಲವು ಬಗೆಯ ಪತ್ರಗಳಿಂದ ಪೂಜೆ ಮಾಡುತ್ತಿದ್ದರು ಅದಕ್ಕಾಗಿ ವಿವಿಧ ರೀತಿಯ ಮರಗಳಿಂದ ಎಲೆಗಳನ್ನು ತರುತ್ತಿದ್ದರು. ಇದರಿಂದ ಹೊಸ ಎಲೆಗಳು ಪುನಃ ಚಿಗುರಿ ಮರಕ್ಕೆ ಹೊಸ ಜೀವಕಳೆ ತುಂಬುತ್ತಿದ್ದುವು. ಕಾಲವು ಬದಲಾಗುತ್ತಿರುವುದರಿಂದ ಹೊಸ ಎಳೆಯ ಎಲೆಗಳು ಬರುವುದರಿಂದ ಆ ಎಲೆಗಳಿಗೆ ಹುಳುಗಳು ಹಿಡಿಯುತ್ತಿದ್ದುವು ಈ ಸಮಯದಲ್ಲಿ ಎಲೆಗಳನ್ನು ಕತ್ತರಿಸುವುದರಿಂದ ಹುಳಗಳಿಂದ ಮರಗಳಿಗೆ ವಿಮುಕ್ತಿ ದೊರೆಯುತ್ತಿದ್ದವು. ಇದರಿಂದ ಭಾದ್ರಪದ, ಆಶ್ವಯುಜಗಳಲ್ಲಿ ಬೀಳುವ ಮಳೆಯಿಂದಾಗಿ ಮರಗಳು ಮತ್ತಷ್ಟು ಬೆಳೆದು ಪರ್ಯಾವರಣವನ್ನು ಸಮತೋಲನ ಗೊಳಿಸುವಂತಹಾ ಅವಕಾಶವುಂಟಾಗುತ್ತದೆ.

ಒಂಭತ್ತು ದಿನಗಳ ಕಾಲ ವಿನಾಯಕನ ಪೂಜೆಯನ್ನು ಮುಗಿಸಿ ಎಲ್ಲರೂ ಸೇರಿ ವಿನಾಯಕನ ಪ್ರತಿಮೆಗಳನ್ನು ಸಮೀಪದಲ್ಲಿರುವ ಕೆರೆಗಳಲ್ಲಿ ವಿಸರ್ಜನೆ ಮಾಡುತ್ತಾರೆ. ಇದರಿಂದ ಕೆರೆಗಳಲ್ಲಿನ ಮಣ್ಣೂ ಪುನಃ ಉಪಯೋಗಕ್ಕೆ ಬರುತ್ತಿದ್ದುವು, ಕೆರೆಗಳ ಕಟ್ಟೆ ಬಲವಾಗುವುದಕ್ಕೆ ಅವಕಾಶವುಂಟಾಗುತ್ತದೆ. ವಿನಾಯಕನನ್ನು ಪೂಜಿಸಿದ ಪತ್ರಗಳನ್ನು ಕೆರೆಗಳಲ್ಲಿ ಹಾಕುವುದರಿಂದ ಆಯಾ ಎಲೆಗಳಿಂದ ಬರುವಂತಹಾ ರಸಗಳು ಪ್ರಕೃತಿಯ ಪರವಾಗಿ ನೀರಿಗೆ ಕೆಲವು ಔಷಧೀಯ ಗುಣಗಳನ್ನು ನೀಡುತ್ತಿದ್ದುವು. ನೀರಿನಲ್ಲಿ ಕರಗಿದ ಈ ಎಲೆಗಳ ರಸಗಳು ನೀರನ್ನು ಶುದ್ಧೀಕರಿಸುವುದರೊಂದಿಗೆ ವ್ಯವಸಾಯಕ್ಕೆ ಉಪಯೋಗಿಸುವ ನೀರಿಗೆ ಹೊಸಶಕ್ತಿಯನ್ನು ನೀಡುತ್ತವೆ. ಇವೆಲ್ಲವೂ ಹಿಂದಿನ ಕಾಲದ ವಿಷಯಗಳು. ಪರ್ಯಾವರಣದ ರಕ್ಷಣೆಯ ನಿಟ್ಟಿನಲ್ಲಿ ನಮ್ಮ ಯೋಚನೆಗಳು ಇರಬೇಕು. ಇದು ಅತ್ಯಂತ ಸೂಕ್ಷ್ಮವಾದ ವಿಷಯವಾದ್ದರಿಂದ ನಮ್ಮಲ್ಲೇ ದೊಡ್ಡ ಬದಲಾವಣೆ ಬರಬೇಕು. ವಿನಾಯಕನು ಭಕ್ತರಿಂದ ಬಯಸುವ ಒಳ್ಳೆಯ ಪ್ರಕೃತಿಯನ್ನು ನಾವೂ ಉಳಿಸಿ ಬೆಳೆಸಬೇಕು. ಹಾಗೇ ಗಣಪತಿಯನ್ನು ಭಕ್ತಿ ಶ್ರದ್ಧೆಗಳಿಂದ ಪೂಜಿಸಿ ಗಣೇಶನ ಆಶೀರ್ವಾದವನ್ನು ಹೊಂದುವುದರೊಂದಿಗೆ ಮುಂದಿನ ಪೀಳಿಗೆಗೆ ಪ್ರಕೃತಿಯ ಫಲಗಳು ಸರಿಯಾಗಿ ದೊರೆಯುವಂತೆ ಪ್ರತಿಯೊಬ್ಬರೂ ಆಲೋಚಿಸಬೇಕೆಂಬುದೇ ನಮ್ಮ ಆಕಾಂಕ್ಷೆ!

# ವಂದಿಸುವುದಾದಿಯಲಿ ಗಣನಾಥನ

– ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
90356 18076



**1. ಗಜಮುಖ :** ಗಣಪತಿಯ ದೊಡ್ಡ ತಲೆ, ಅವನು ಮಹಾ ಬುದ್ಧಿಶಾಲಿ ಎಂಬುದನ್ನು ಸೂಚಿಸುತ್ತದೆ. ಆನೆಯು ಜ್ಞಾನಶಕ್ತಿ ಮತ್ತು ಕರ್ಮಶಕ್ತಿ ಎರಡನ್ನೂ ಪ್ರತಿನಿಧಿಸುತ್ತದೆ. ಆನೆಯ ಪ್ರಮುಖ ಗುಣಗಳೆಂದರೆ ವಿವೇಕ ಮತ್ತು ನಿರಾಯಾಸತ್ವ. ಆನೆಯ ಬೃಹತ್ತಾದ ತಲೆಯು ವಿವೇಕ ಮತ್ತು ಜ್ಞಾನವನ್ನು ಗಂಭೀರತೆಯನ್ನು ಸೂಚಿಸುತ್ತದೆ.

**2. ಶೂರ್ಪಕರ್ಣ :** ವಿನಾಯಕನ ಕಿವಿಗಳು ಮೊರಗಳಂತೆ ಅಗಲವಾಗಿವೆ. ಮೊರದಲ್ಲಿ ಧಾನ್ಯವನ್ನು ಕೇರುತ್ತಾರೆ. ಇದರಿಂದ ಹೊಟ್ಟು, ಕಾಳು ಬೇರೆ ಬೇರೆ ಆಗುತ್ತವೆ. ಹಾಗೆಯೇ ಗಣೇಶನು ಸತ್ಯವನ್ನೂ ಸುಳ್ಳನ್ನು ಬೇರೆ ಬೇರೆ ಮಾಡುತ್ತಾನೆ. ಈ ಅಗಲವಾದ ಕಿವಿಗಳು ಭಕ್ತರ ಪ್ರಾರ್ಥನೆಗಳನ್ನು, ಗಮನವಿಟ್ಟು ಕೇಳುತ್ತಾನೆ ಎಂಬುದನ್ನು ತೋರಿಸುತ್ತವೆ. ಯಾವಾಗಲೂ ಆಡುವ ಅವನ ಸೊಂಡಿಲು ಸದಾ ಕ್ರಿಯಾಶೀಲನಾಗಿರು ಎಂದು ಬೋಧಿಸಿದರೆ, ಏಕದಂತ ಒಂದೇ ಮನಸ್ಸಿನಿಂದ ಕೆಲಸ ಮಾಡಬೇಕು ಎಂದು ಸೂಚಿಸುತ್ತದೆ.

**3. ಚತುರ್ಭುಜ :** ಗಣೇಶನಿಗೆ ನಾಲ್ಕು ಕೈಗಳಿವೆ. ಅವನ ಬಲಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಪಾಶವಿದೆ. ಗಣೇಶ ಇದರ ಸಹಾಯದಿಂದ ತನ್ನ ಭಕ್ತರ ಮನಸ್ಸನ್ನು ಆಕರ್ಷಿಸುತ್ತಾನೆ. ಇನ್ನೊಂದು ವರದಹಸ್ತ ಇದು ಗಣೇಶನನ್ನು ಮೊರೆಹೊಕ್ಕವರಿಗೆ ಭಯವಿಲ್ಲ ಎಂಬುದನ್ನು ಸೂಚಿಸುತ್ತದೆ. ಹೀಗೆಯೇ ಎಡಭಾಗದ ಎರಡು ಕೈಗಳಲ್ಲಿ ಒಂದು ಅಂಕುಶವನ್ನು ಹಿಡಿದಿದೆ. ಇದು ನಮ್ಮ ಅಜ್ಞಾನವನ್ನು ನಿವಾರಿಸುವ ಸಂಕೇತ, ಮತ್ತೊಂದು ಕೈಯಲ್ಲಿ ಮೋದಕಗಳಿಂದ ತುಂಬಿದ ಪಾತ್ರೆಯಿದೆ. ಇದು ಗಣೇಶನು ಎಲ್ಲರಿಗೂ ಸಂತೋಷವನ್ನು ಕೊಡುತ್ತಾನೆ ಎಂದು ತೋರಿಸುತ್ತದೆ, ಮತ್ತು ಅವನ ಹೊರಮುಖವಾಗಿರುವ ಕೆಳಗಿನ ಕೈಯು ನಿರಂತರವಾದ ಕೊಡುಗೆಯ ಸಂಕೇತ.

**4. ಲಂಬೋದರ :** ಗಣೇಶನ ದೊಡ್ಡ ಹೊಟ್ಟೆಯು ಔದಾರ್ಯವನ್ನು ಮತ್ತು ಸಂಪೂರ್ಣ ಜಿತಕಾರವನ್ನು ಪ್ರತಿನಿಧಿಸುತ್ತದೆ. ಹೊಟ್ಟೆಯು ಇಡೀ ಬ್ರಹ್ಮಾಂಡವೇ ಗಣಪತಿಯಲ್ಲಿ ಅಡಗಿದೆ ಎಂಬ ಅರ್ಥವನ್ನು ಕೊಡುತ್ತದೆ. ಗಣೇಶನ ಮೇಲ ಮುಖವಾಗಿರುವ ಕೈ ಅಭಯ ಹಸ್ತದ ಸಂಕೇತವಾಗಿದ್ದು, ಹೆದರದಿರು, ನಾನು ನಿನ್ನ ಜೊತೆಗಿದ್ದೇನೆ ಎಂದು ಅರ್ಥ ನೀಡುತ್ತದೆ. ಅವನು ತನ್ನ ಕೈಗಳಲ್ಲಿ ಅಂಕುಶ ಮತ್ತು ಪಾಶವನ್ನು ಹಿಡಿದಿದ್ದಾನೆ. ಸ್ವ-ಜಾಗೃತಿಯಿಂದ ಬಹಳ ಶಕ್ತಿಯು ಹೊರಹೊಮ್ಮುವುದು, ಇದರ ನಿಯಂತ್ರಣವಿಲ್ಲದಿದ್ದಲ್ಲಿ ಆ ಶಕ್ತಿಯು ಕಗ್ಗಂಟಾಗುವುದು.

**5. ಮೂಷಿಕವಾಹನ :** ಗಣೇಶನು ಅಷ್ಟು ಚಿಕ್ಕದಾದ ಇಲಿಯ ಮೇಲೆ ಕುಳಿತು ಏಕೆ ಸಂಚರಿಸುತ್ತಾನೆ? ಕೋಪ, ಅಹಂಕಾರ, ತನಗೇ ಎಲ್ಲಾ ಬೇಕು ಎಂಬ ಸ್ವಾರ್ಥ-ಇಂತಹ ಕೆಟ್ಟ ಗುಣಗಳನ್ನು ಇಲಿ ಸೂಚಿಸುತ್ತದೆ. ಈ ಕೆಟ್ಟ ಗುಣಗಳನ್ನು ಗಣಪತಿ ತಡೆದಿಡುತ್ತಾನೆ ಎಂದು ಇಲಿಯನ್ನು ಸವಾರಿ ಮಾಡುವುದು ತೋರಿಸುತ್ತದೆ.

**6. ದೂರ್ವಾಪ್ರಿಯ ಗಣಪತಿ :** ಗಣಪತಿಯ ಸಂಪೂರ್ಣವಾಗಿ ಮಣ್ಣಿನಿಂದೆದ್ದು ಬಂದ ಪ್ರಕೃತಿದೇವತೆ. ಭೂಮಿತತ್ವದ ಪ್ರತಿಪಾದಕ. ಇಕ್ಷು ದಂಡ, ದೂರ್ವಾ, ತೆಂಗಿನಕಾಯಿ, ಪಂಚಭಕ್ಷ್ಯಗಳೆಲ್ಲ ಪ್ರಕೃತಿಯ ಕೊಡುಗೆಗಳು ಇದರಲ್ಲಿ ದೂರ್ವೆಗೆ ವಿಶೇಷ ಸ್ಥಾನ. ದೂರ್ವೆ ಅರ್ಥಾತ್ ಗರಿಕೆಯು ಒಂದು ವಿಕಸನಶೀಲ ಜಾತಿಯ ಸಸ್ಯ. ಗರಿಕೆಯು ಒಮ್ಮೆ ಮಣ್ಣಿನ ಸಂಪರ್ಕಕ್ಕೆ ಬಂದು ಬೇರೂರಿತೆಂದರೆ ಅದೆಂದಿಗೂ ನಾಶವಾಗದು ಮತ್ತು ಕೆಲವೇ ದಿನಗಳಲ್ಲಿ ಇನ್ನೂ ಹತ್ತಾರು ಕಡೆಗಳಲ್ಲಿ ಕುಡಿಯೊಡೆದು ಬೇರು ಬಿಟ್ಟು ಬಹು ವಿಧವಾಗಿ ಚಿಗುರಬಲ್ಲದು.

**7.ಆದಿಪೂಜ್ಯೋ ಗಣಾಧಿಪಃ:** ಎಲ್ಲ ದೇವತೆಗಳನ್ನೂ ಪೂಜಿಸುವ ವಿವಿಧ ದೇವತಾ ಉಪಾಸಕರು ತಮ್ಮ ಅನುಷ್ಠಾನವು ನಿರ್ವಿಘ್ನವಾಗಿ ನೆರವೇರಲಿ ಎಂದು ಮೊದಲು ಗಣಪತಿಯನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಅದಕ್ಕೆ ಆತನಿಗೆ ವಿಘ್ನೇಶ್ವರ ಎಂಬ ಹೆಸರು ಅತ್ಯಂತ ಸ್ವಾರಸ್ಯಕರವಾದದ್ದು. ಇವನು ಕೇವಲ ವಿಘ್ನಗಳಿಗೆ ಒಡೆಯನು. ವಿಘ್ನಗಳನ್ನು ಉಂಟುಮಾಡಬಲ್ಲ. ಅದನ್ನು ನಿವಾರಿಸಲೂ ಬಲ್ಲ. ಮಾನವ ತಾನು ಸರ್ವತಂತ್ರ ಸ್ವತಂತ್ರ ಎಂಬ ದುರಭಿಮಾನ ಬೆಳೆಸಿಕೊಳ್ಳದಿರಲಿ ಎಂದು ಅವನು ವಿಘ್ನಗಳನ್ನು ಉಂಟು ಮಾಡುತ್ತಾನೆ. ತನಗಿಂತಲೂ ಶಕ್ತಿ ಸಂಪನ್ನವಾದ ದೇವರು ಎಂಬ ವಿಶಿಷ್ಟ ಶಕ್ತಿ ಇದೆ ಎಂಬ ವಿನೀತಭಾವದಿಂದ ಜೀವನವನ್ನು ಎದುರಿಸುವವರ ವಿಘ್ನಗಳನ್ನು ನಿವಾರಿಸುತ್ತಾನೆ.

**8. ಜ್ಞಾನಾಧಿಪ ಗಣಪ :** ಜ್ಞಾನಕ್ಕೆ ಮಿಗಿಲಾದ್ದು ಇನ್ನೊಂದಿಲ್ಲ. ಗಣಪತಿಯು ಅಂತಹ ಪರಮೋತ್ಕೃಷ್ಟವಾದ ಜ್ಞಾನಕ್ಕೆ ಅಧಿದೇವತೆ. ಜ್ಞಾನಕ್ಕೆ ಅತ್ಯಂತ ಅಧಿಪತಿಯಾದ ಗಣಪತಿ ಪ್ರಥಮ ಪೂಜೆ ಸಲ್ಲುವಂಥದ್ದು ಸರ್ವವಿಹಿತ. ಇಹಪರಗಳೆರಡೂ ಸಾಧನೆಗಳಿಗೂ ಎದುರಾಗಬಹುದಾದ ಅನೇಕ ತೊಂದರೆಗಳನ್ನು ಈ ಜ್ಞಾನವು ನಿವಾರಿಸುತ್ತದೆ. ಅದಕ್ಕಾಗಿಯೇ ಗಣಪತಿಯನ್ನು ಪೂಜಿಸಿ ಕೆಲಸ ಆರಂಭಿಸುವುದೆಂದರೆ ಅದು ವಿವೇಕ ಪೂರ್ಣ ಕೆಲಸವೆಂದೇ ಅರ್ಥ.




**9. ದ್ವೈಮಾತುರ ಗಣಾಧಿಪ :** ಗಣೇಶನಿಗೆ ದ್ವೈಮಾತುರ ಎಂಬ ನಾಮಾಂಕಿತವೂ ಇದೆ. ಹಾಗೆಂದರೆ ಇಬ್ಬರು ತಾಯಂದಿರ ಮಗ ಎಂದರ್ಥ. ಪದ್ಮಪುರಾಣದ ಪ್ರಕಾರ, ಒಮ್ಮೆ ಗೌರಿಯು ಗಂಗಾನದಿಯ ತೀರದಲ್ಲಿ ಶಿವನೊಡನೆ ವಿಹರಿಸುತ್ತಿರುವಾಗ, ಮೈಗೆ ಬಳಿದುಕೊಳ್ಳುವಾಗ ನೆಲದ ಮೇಲೆ ಬಿದ್ದಂತಹ ಅಂಗರಾಗಗಳನ್ನು ಒಟ್ಟು ಗೂಡಿಸಿ ಪುರುಷಾಕಾರದ ಗೊಂಬೆಯನ್ನು ಮಾಡಿದಳು. ಅದು ಆನೆಯ ಹಾಗೆ ಇತ್ತು. ಇದು ಇಷ್ಟವಾಗದ್ದರಿಂದ ಗಂಗೆಯಲ್ಲಿ ಎಸೆದಳು. ಆಗ ಆ ಬೊಂಬೆಯು ಜೀವ ತಳೆಯಿತು. ಇದನ್ನು ನೋಡಿದ ಗೌರಿಗೆ ಪುತ್ರ ವಾತ್ಸಲ್ಯವುಂಟಾಯಿತು. ತನ್ನಲ್ಲಿ ಚೈತನ್ಯ ತಳೆಯಿತು ಎಂಬ ಕಾರಣಕ್ಕೆ ಗಂಗೆಯೂ ಸಲಹಿದಳು.

**10.ಗಜಮುಖ :** ಗಣಪತಿಯು ಲೋಕಮಾನ್ಯವಾಗಿರುವ ಸ್ತ್ರೀ-ಪುರುಷ ಸಂಯೋಗದಿಂದ ಹುಟ್ಟಿದವನಲ್ಲ. ಇದು ಗಣಪತಿಯ ಕಾಮಾತೀತ ತತ್ತ್ವವನ್ನು ಸಂಕೇತಿಸುತ್ತದೆ. ಹುಟ್ಟಿದ ಕೂಡಲೇ ಮೂಲ ಮುಖವನ್ನು ಕಳೆದುಕೊಂಡು ಗಜಮುಖನಾದವನು. **'ಗ'** ಎಂದರೆ ಗತಿ; ಇದು ಜ್ಞಾನಕ್ಕೂ ಸಂಕೇತ. ಜೀವನದ ಉದ್ದೇಶವನ್ನು ಸೂಚಿಸುತ್ತದೆ. **'ಜ'** ಎಂದರೆ ಜನ್ಮ, ಯಾರಿಂದ ಇಡಿಯ ಬ್ರಹ್ಮಾಂಡ ಹುಟ್ಟಿ, ಯಾರಲ್ಲಿ ಲಯವಾಗುತ್ತದೆಯೋ ಅವನೇ ಗಜಮುಖ.

**11.ಗಣಪತಿ ಹಾಸ್ಯಕ್ಕೂ ಅಧಿಪತಿ:** ಅವನ ಆಕಾರವೇ ಹಾಸ್ಯವೇ ವಸ್ತುವಾಗುವಂತಿದೆ. ಹಾಸ್ಯ ಎಂದರೆ ಬೇರೆಯವರನ್ನು ನೋಯಿಸುವಂಥದ್ದಲ್ಲ ಹಾಸ್ಯಕ್ಕೆ ಮೊದಲ

ವಸ್ತುವನ್ನಾಗಿಸಿಕೊಳ್ಳ ಬೇಕಾದ್ದು ನಮ್ಮನ್ನೇ ಎನ್ನುವುದನ್ನು ಇದು ಧ್ವನಿಸುತ್ತಿದೆ. ಅಪ ಹಾಸ್ಯವನ್ನು ಮಾಡಿದ ಚಂದ್ರನನ್ನು ಶಪಿಸಿದವನು ಗಣಪತಿ. ಇತರರ ಆಹ್ಲಾದಕ್ಕೆ ನಾವು ಕಾರಣವಾಗ ಬೇಕೇ ವಿನಾ ಇತರರನ್ನು ನೋಯಿಸುವವರಾಗಬಾರದು ಎನ್ನುವುದಕ್ಕೆ ಗಣಪತಿ ಸಂಕೇತವಾಗಿದ್ದಾನೆ.

**12. ಹೆತ್ತವರೇ ದೇವರು :** ಯಾರು ಇಡಿಯ ವಿಶ್ವವನ್ನು ಬೇಗ ಪ್ರದಕ್ಷಿಣೆ ಮಾಡಿ ಬರುತ್ತಾರೆ ಎಂದು ಒಮ್ಮೆ ಗಣೇಶನಿಗೂ ಅವನ ತಮ್ಮ ಸುಬ್ರಹ್ಮಣ್ಯನಿಗೂ ಒಂದು ಸ್ಪರ್ಧೆ ಏರ್ಪಟ್ಟಿತಂತೆ. ಸುಬ್ರಹ್ಮಣ್ಯ ನವಿಲನ್ನು ಏರಿ ಲೋಕ ಪ್ರದಕ್ಷಿಣೆ ಹೊರಟರೆ, ಗಣಪತಿ ಶಿವ-ಪಾರ್ವತಿಯರಿಗೆ ಪ್ರದಕ್ಷಿಣೆ ವಿಶ್ವ ಪ್ರದಕ್ಷಿಣೆಗೂ ಮೀರಿದ್ದು



ಗಣಪತಿ ಸ್ಪರ್ಧೆಯಲ್ಲಿ ಗೆದ್ದ. ಹೆತ್ತವರೇ ದೇವರು. ಜಗತ್ತು ಎಂಬ ಸಂದೇಶ ಲೋಕಕ್ಕೆ ಸಾರಿದ.

**13. ಗಣಪತಿ ಏಕದಂತ :** ಒಂದೇ ದಂತ ಉಳ್ಳವನು. ಪರಶುರಾಮ ನೊಡನೆ ಯುದ್ಧಮಾಡುವಾಗ ಗಣೇಶನ ಒಂದು ದಂತ ಮುರಿದು ಹೋಯಿತಂತೆ, ಮುಂದೆ ವ್ಯಾಸರ ಮಹಾಭಾರತವನ್ನು ಅವನು ಬರೆಯಬೇಕಾಗಿ ಬಂದಾಗ ಈ ಮುರಿದ ದಂತವನ್ನೇ ಲೇಖನಿಯಂತೆ ಉಪಯೋಗಿಸಿ ಕೊಂಡನಂತೆ, ಏಕದಂತವು ಅದ್ವೈತ ತತ್ವವನ್ನು ಸೂಚಿಸುತ್ತದೆ. ಅದ್ವೈತ ಎಂದರೆ ಸತ್ಯ ಒಂದೇ ಎಂದರ್ಥ ಪರಮಾತ್ಮ ತತ್ತ್ವ ಒಂದೇ ಎಂದೂ ಹೌದು.

# ಗಾಯತ್ರಿ ದೇವಿ



**ಓಂ ಭೂರ್ಭುವಃ ಸ್ವಃ।**
**ತತ್ಸವಿತುರ್ವರೇಣಿಯಂ।**
**ಭರ್ಗೋ ದೇವಸ್ಯ ಧೀಮಹಿ।**
**ಧಿಯೋ ಯೋ ನಃ ಪ್ರಚೋದಯಾತ್॥**

**ಭಾವಾರ್ಥ :**

ಓಂಕಾರ ವಾಚ್ಯನೂ, ಗುಣಪೂರ್ಣನೂ, ಅಂತ್ಯವಿಲ್ಲದ ಐಶ್ವರ್ಯವನ್ನು ಹೊಂದಿರುವವನು, ಸುಖಸ್ವರೂಪನೂ, ಭರಣ ಗಮನ ಕರ್ತನೂ ಆಗಿರುವ ಪರಮಾತ್ಮನನ್ನು ನಮ್ಮ ಬುದ್ಧಿಯನ್ನು ಪ್ರೇರಪಿಸುವವನೂ ಆದಂತಹಾ ಸೃಷ್ಟ್ಯಾದಿ ಕರ್ತನಾದ, ಕ್ರೀಡಾದಿ ಗುಣ ವಿಶಿಷ್ಟನಾದ ಪರಮಾತ್ಮನನ್ನು, ಸಕಲರಿಂದಲೂ ಭಜಿಸಲ್ಪಡುತ್ತಿರುವಂತಹಾ ಸ್ವರೂಪವನ್ನು ಧ್ಯಾನಿಸುತ್ತೇನೆ. ಪರಮಾತ್ಮಾ! ನಮ್ಮ ಬುದ್ಧಿಯನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸು.

# ಶ್ರೀ ಹಯಗ್ರೀವ ದೇವರ ಮಹಿಮೆ



ಡಾ।। ಎ. ನಿರಂಜನ್
9986567700


ಭಾರತೀಯ ಪುರಾಣಗಳಲ್ಲಿ ವಿಷ್ಣುವಿನ **'ಹಯಗ್ರೀವ ಅವತಾರ'**ಕ್ಕೆ ವಿಶೇಷ ಮಹತ್ವವಿದೆ. ಹೆಸರೇ ಸೂಚಿಸುವಂತೆ ಈ ಅವತಾರದಲ್ಲಿ ವಿಷ್ಣುವು ಸುಂದರವಾದ ಮನುಷ್ಯನ ದೇಹ ಮತ್ತು ಕುದುರೆಯ ತಲೆಯನ್ನು ಹೊಂದಿದ್ದಾನೆ. ಹಯಗ್ರೀವನು ಬುದ್ಧಿವಂತಿಕೆ ಮತ್ತು ಜ್ಞಾನದ ದೇವರು. ಹೀಗಾಗಿ ಅವನು ಪ್ರಕಾಶ ಮತ್ತು ಪಾಂಡಿತ್ಯವನ್ನು ಪುನಃ ಸ್ಥಾಪಿಸುತ್ತಾನೆ. **"ಪೂರ್ವಕಾಲದಲ್ಲಿ ಶ್ರಾವಣಮಾಸ ಶ್ರವಣ ನಕ್ಷತ್ರದಲ್ಲಿ ಹಯಗ್ರೀವ ದೇವರ ಉತ್ಪತ್ತಿಯಾಗಿತ್ತು ಎಂದು 'ಕಲ್ಪತರು"**ವಿನಲ್ಲಿ ಉಕ್ತವಾಗಿದೆ. ಹಯಗ್ರೀವ ದೇವನೇ ಸಮಸ್ತ ಪಾಪಗಳನ್ನು ನಾಶಮಾಡಬಲ್ಲಂತಹ ಸಾಮವೇದದ ಉಚ್ಚಾರಣೆ ಮಾಡಿದ್ದನು ಎಂಬುದು ಪ್ರತೀತಿ. ಹೀಗಾಗಿ ಶ್ರಾವಣಮಾಸದ ಪೌರ್ಣಮಿಯಂದು ಹಯಗ್ರೀವ ಜಯಂತಿಯನ್ನು ಆಚರಿಸಲಾಗುತ್ತದೆ.


**ಜ್ಞಾನಾನಂದಮಯಂ ದೇವಂ ನಿರ್ಮಲ ಸ್ಫಟಿಕಾಕೃತಿಂ।**
**ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ॥**
**(ಶ್ರೀ ವೇದಾಂತದೇಶಿಕರು)**

**"ಜ್ಞಾನಸ್ವರೂಪನೂ, ಆನಂದಸ್ವರೂಪನೂ, ಪ್ರಕಾಶಯುಕ್ತನೂ, ನಿರ್ಮಲ ಸ್ಫಟಿಕದಂಥ ಆಕೃತಿಯುಳ್ಳವನೂ, ಎಲ್ಲ ವಿದ್ಯೆಗಳಿಗೆ ಅಧಿದೈವನೂ,ಆಧಾರಭೂತನೂ ಆದ ಹಯಗ್ರೀವ ಅವತಾರಿಯಾದ ಸ್ವಾಮಿಯನ್ನು ಅಂದರೆ ಶ್ರೀಮನ್ನಾರಾಯಣನನ್ನು ಉಪಾಸನೆ ಮಾಡುತ್ತೇನೆ"** ಎಂಬುದು ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಮೂಡಿ ಬಂದ ಶ್ರೀ ವೇದಾಂತದೇಶಿಕರ ಪ್ರಸಿದ್ಧ ಉಕ್ತಿ. ಇದನ್ನು ಅತ್ಯಂತ ಪ್ರಾಚೀನ ಕಾಲದಿಂದಲೂ, ವಿದ್ಯಾರಂಭ, ಶಾಸ್ತ್ರಾರಂಭ, ಗ್ರಂಥಾರಂಭದ ಮೊದಲಿನಲ್ಲಿ ಧ್ಯಾನ ಮಾಡುವ ಸತ್ಸಂಪ್ರದಾಯವು ಬೆಳೆದು ಬಂದಿದೆ. ಈ ಮಂತ್ರ ಪಠಣವು ವಿದ್ಯಾರ್ಜನೆಗೆ ತೊಡಗುವವರ ಬುದ್ಧಿಶಕ್ತಿಯನ್ನು ಚುರುಕುಗೊಳಿಸಿ,ವ್ಯಕ್ತಿಯನ್ನು ಅತ್ಯಂತ ಜಾಗ್ರತರನ್ನಾಗಿ ಮಾಡುತ್ತದೆ. ಹಯಗ್ರೀವನು ಭಕ್ತರಿಗೆ ವೇಗ ಮತ್ತು ಬುದ್ಧಿಶಕ್ತಿಯನ್ನು ಅನುಗ್ರಹಿಸುತ್ತಾನೆ ಎಂಬುದು ಜನಜನಿತವಾಗಿದೆ. ಸಾಮಾನ್ಯ ಅರ್ಥದಲ್ಲಿ **'ಜ್ಞಾನ'** ಎಂಬ ಪದವನ್ನು ಅರ್ಥೈಸುವುದಾದರೆ ಅದು ತಿಳಿವಳಿಕೆ, ಮೋಕ್ಷ ವಿಷಯಕವಾದ ಬುದ್ಧಿ, ಪರಮಾತ್ಮನ ಸ್ವರೂಪವನ್ನು ತಿಳಿಯುವ ಸಾಧನ,ಜೀವ-ಈಶ್ವರ-ಜಗತ್ತು- ಈ ರೀತಿಯಾದ ಗ್ರಹಿಕೆಗೆ ಅಧಿಷ್ಠಾನವಾದ ಸ್ವಯಂ ಪ್ರಕಾಶವಾದ ಚೈತನ್ಯ ಎಂದು ಹೇಳಬಹುದು. ಈ ಶ್ಲೋಕವು ಹಯಗ್ರೀವನ ಸಚ್ಚಿದಾನಂದ ಸ್ವರೂಪವನ್ನು ವಿವರಿಸುತ್ತದೆ. ಹಯಗ್ರೀವನು ಸತ್ ಸ್ವರೂಪನು ಎಂದರೆ ಆತನು ಎಲ್ಲೆಲ್ಲಿಯೂ, ಯಾವಾಗಲೂ ಬದಲಾವಣೆಗೆ ಒಳಪಡದೆ, ಒಂದೇ ರೀತಿಯಲ್ಲಿ ಇರುವವನು ಎಂದರ್ಥ. ಆತನು ಇರವಿನ ಸ್ವರೂಪವಷ್ಟೇ ಅಲ್ಲ; ಅರಿವಿನ ಸ್ವರೂಪನೂ ಹೌದು. ಅರಿವಿನ ಎಂದರೆ ಜ್ಞಾನ ಹಾಗೂ ಚಿತ್ ಸ್ವರೂಪನೂ ಹೌದು. ಅರಿವಿಲ್ಲದ ಬರಿಯ ಇರವು ಇದ್ದು ಸತ್ತಂತೆ. ಹಯಗ್ರೀವನು-ಪರಾತ್ಪರ ವಿದ್ಯೆಗಳಿಗೆ ಆಧಾರಭೂತನಾಗಿದ್ದಾನೆ ಎಂದರೆ ಸಾಧಕನ ಒಲವು ಸಂಸ್ಕಾರಗಳಿಗೆ ಅನುಗುಣವಾಗಿ ಹಯಗ್ರೀವನು ಸಾಧಕನಿಗೆ ಆಯಾ ವಿದ್ಯೆಯನ್ನೇ ಕರುಣಿಸಬಲ್ಲನು ಎಂದರ್ಥ.

### ಹಯಗ್ರೀವ ಅವತಾರದ ಕಥೆ :

ಧರ್ಮದ ಹಾನಿ ಮತ್ತು ಅಧರ್ಮದ ವೃದ್ಧಿಯಾದಾಗಲೆಲ್ಲ ಸಾಧುಸತ್ಪುರುಷರ ರಕ್ಷಣೆ ಮತ್ತು ಪಾಪಿಗಳ ವಿನಾಶ ಹಾಗೂ ಧರ್ಮದ ಸುಭದ್ರತೆಗೆ ಯುಗಯುಗಗಳಲ್ಲಿಯೂ ಪ್ರಕಟವಾಗುತ್ತೇನೆಂದು ಸ್ವಯಂ ಶ್ರೀಕೃಷ್ಣನೇ ಭರವಸೆ ನೀಡಿದ್ದಾನೆ. ಮಾನವನ ಸೃಷ್ಟಿಯಾಗುವುದಕ್ಕೆ ಮುಂಚೆ,ಚತುರ್ಮುಖ ಬ್ರಹ್ಮನ ಪ್ರಾದುರ್ಭಾವವಾಗಿ,ಭಗವಂತನು ಅವನಿಗೆ ಸೃಷ್ಟಿಕಾರ್ಯವನ್ನು ವಹಿಸಿ ವೇದೋಪದೇಶ ಮಾಡಿದ ತರುವಾಯ, ಬ್ರಹ್ಮನು ವೇದ ವಾಙ್ಮಯವನ್ನು ವಿಗ್ರಹರೂಪವಾಗಿ ಪರಿವರ್ತಿಸಿದಾಗ ಅವುಗಳ ಅಪಹರಣವಾಯಿತು. ಆಗ ಆ ವಿಗ್ರಹಗಳನ್ನು ತರುವುದಕ್ಕಾಗಿ ಭಗವಂತನು ತಾಳಿದ ಅತಿಶಯವಾದ ರೂಪವೇ ಹಯಶಿರೋರೂಪ. ಅನಿರುದ್ಧ ರೂಪಿಯಾದ ಮಹಾವಿಷ್ಣುವು ತನ್ನ ಕುತ್ತಿಗೆಯ ಮೇಲ್ಗಡೆಯ ಶಿರೋಭಾಗವನ್ನು ಮಾತ್ರ ಕುದುರೆಯದನ್ನಾಗಿ ಪರಿವರ್ತಿಸಿಕೊಂಡು, ಹಯ ಶಿರಸ್ಸಿನ ರೂಪವನ್ನು ತಾಳಿ ಸಮುದ್ರವನ್ನು ಪ್ರವೇಶಿಸಿ, ಹೇಷಾರವವನ್ನು ಮಾಡಿದನು. ಆ ಕೆನೆತದ ಧ್ವನಿ ಅದ್ಭುತವಾಗಿಯೂ, ಗಂಭೀರವಾಗಿಯೂ ಇತ್ತು. ಅದುವೇ ಉದ್ಗೀಥದ ಅಂದರೆ ಪ್ರಣವದ ಸಾಮಗಾನವಾಗಿ ಎಲ್ಲೆಡೆ ವ್ಯಾಪಿಸಿತು. ರಸಾತಲದಲ್ಲಿದ್ದ ಮಧು-ಕೈಟಭರೆಂಬ ಅಪಹರಣಕಾರರು ಹಿಂದೆಂದೂ ಕೇಳರಿಯದ ಆ ಧ್ವನಿಗೆ ಆಕರ್ಷಿತರಾಗಿ ವೇದ ವಿಗ್ರಹವನ್ನು ಅಲ್ಲಿಯೇ ಕೈಬಿಟ್ಟು, ಧ್ವನಿಯ ಮೂಲವನ್ನು ಹುಡುಕಲು ಸಮುದ್ರವನ್ನೆಲ್ಲಾ ಸುತ್ತಾಡಿದರು. ಅಷ್ಟರಲ್ಲಿ ಹಯಗ್ರೀವ ರೂಪಿ ವಿಷ್ಣುವು ವೇದ ವಾಙ್ಮಯವನ್ನು ತಂದು ಬ್ರಹ್ಮನಿಗೆ ಕೊಟ್ಟುಬಿಟ್ಟನು. ಅನಂತರ ನಡೆದ ಯುದ್ಧದಲ್ಲಿ ಮಧು-ಕೈಟಭರು






ಹತರಾದರು. ಅಂದಿನಿಂದ ವಿಷ್ಣುವಿಗೆ ಮಧುಜಿತ್, ಮಧು ಕೈಟ ಭಜಿತ್, ಕೈಟಭಾರಿ ಎಂಬ ಹೆಸರುಗಳು ಬಂದವು. ವೇದವನ್ನು ಪುನಃ ಪಡೆದಿದ್ದ ಬ್ರಹ್ಮನು ಮತ್ತೆ ಸೃಷ್ಟಿ ಕಾರ್ಯದಲ್ಲಿ ನಿರತನಾದನು.

**ಹಯಗ್ರೀವ ಉಪಾಸಕ ಶ್ರೀ ವಾದಿರಾಜರು :**

ಜ್ಞಾನಪ್ರದರಾದ ಹಯಗ್ರೀವರಲ್ಲಿ ಭಕ್ತಿ ಪೂರ್ವಕ ಶ್ರದ್ಧೆಯನ್ನಿಟ್ಟು ಅಂತರಂಗಿಕವಾಗಿ ಹಯಗ್ರೀವ ಉಪಾಸನೆಯನ್ನು ನಿತ್ಯ ದೇವತಾರ್ಚನೆಯಲ್ಲಿ ಅಳವಡಿಸಿಕೊಂಡವರು ಶ್ರೀವಾದಿರಾಜರು. ಆ ದೈವದಲ್ಲಿ, ವಿಶೇಷತಃ ಸುಜ್ಞಾನ ಮತ್ತು ಆನಂದ ಸ್ವರೂಪವನ್ನು ಮನಗಂಡು, ಆ ಸಾಧನೆಯು ಸತ್ಫಲ ನೀಡುವಂತೆ ತಪಸ್ಸನ್ನು ಆಚರಿಸಿ, ಪೂರ್ವಾಶ್ರಮದ **'ಭೂವರಾಹ'** ಮತ್ತು ಯತಿನಾಮವಾದ **'ವಾದಿರಾಜ'** ಎರಡನ್ನೂ ಅನ್ವರ್ಥಗೊಳಿಸಿದ ಮಹಾನುಭಾವರು ಶ್ರೀ ವಾದಿರಾಜರು. ಕೀರ್ತನೆಗಳು ಮತ್ತು ಕಾವ್ಯಗಳ ಮೂಲಕ ಹಯಗ್ರೀವರ ದಿವ್ಯತೆ, ಭವ್ಯತೆ, ಅವತಾರ ಸ್ವರೂಪದ ಹಿರಿಮೆ ಗರಿಮೆಗಳನ್ನು ತಮ್ಮ ಅನೇಕ ಕೃತಿಗಳಲ್ಲಿ ಪ್ರಚುರ ಪಡಿಸಿರುವುದನ್ನು ಗಮನಿಸಬಹುದು.

**ಶ್ರೀ ಹಯಗ್ರೀವರನ್ನು ಕುರಿತು ಸಾಹಿತ್ಯ ಕೀರ್ತನೆಗಳು**

ಶ್ರೀ ವಾದಿರಾಜರು ನಿರಂತರವಾದ ಸಾಧನೆಯಿಂದ ತಮ್ಮ ಆರಾಧ್ಯದೈವವಾದ ಹಯಗ್ರೀವ ಸ್ವಾಮಿಯ ಪೂರ್ವಾನುಗ್ರಹಕ್ಕೆ ಪಾತ್ರರಾಗಿದ್ದರು. ಹಯಗ್ರೀವ ಸ್ವಾಮಿಯ ಸ್ಮರಣೆ ಯಾದೊಡನೆಯೇ ಕಣ್ಮುಂದೆ ಬಂದು ನಿಲ್ಲುವ ಚಿತ್ರ ಶ್ರೀವಾದಿರಾಜರದು. ಇವರ ಆಶ್ರಮ ಜೀವನ ಪ್ರಾರಂಭವಾದದ್ದೇ ಅವರು ತಮ್ಮ ಗುರುಗಳಾದ ಶ್ರೀವಾಗೀಶರಿಂದ ಪಡೆದ ಹಯಗ್ರೀವೋಪದೇಶದಿಂದ. ಅವರ ಬದುಕಿನುದ್ದಕ್ಕೂ ಹಯವದನನದೇ ಲೀಲೆ, ಅವನದೇ ಚಮತ್ಕಾರ. ಪ್ರತಿನಿತ್ಯವೂ ಹಯಗ್ರೀವದೇವರು ಅವರಿಗೆ ಸ್ವತಃ ದರ್ಶನವನ್ನು ನೀಡುತ್ತಿದ್ದರೆಂಬುದಕ್ಕೆ **"ಕುದುರೆ ಬಂದಿದೆ, ಚಲುವ ಕುದುರೆ ಬಂದಿದೆ. ಕುದುರೆ ಬಂದಿದೆ, ವಾದಿರಾಜಗೆ ಮುದದಿ ಜ್ಞಾನ ಭಕುತಿ ಕೊಡುವ"** ಎಂದು ಹಿಗ್ಗಿ ಹಾಡಿರುವ ಕೀರ್ತನೆಯೇ ಸಾಕ್ಷಿ. ಇಲ್ಲಿ ವಾದಿರಾಜರು ಪರಮಾತ್ಮನ ಅನುಗ್ರಹ ಪಡೆದಾಗಿನ ಧನ್ಯ ಭಾವವು ವ್ಯಕ್ತವಾಗಿದೆ.

ಕುದುರೆ ಬಂದಿದೆ ಚೆಲುವ ಕುದುರೆ ಬಂದಿದೆ ॥ಪ॥

ಕುದುರೆ ಬಂದಿದೆ ವಾದಿರಾಜಗೆ
ಮುದದಿ ಜ್ಞಾನಭಕುತಿ ಕೊಡುವ ॥ಅ.ಪ.॥


ಮುಂಗಾಲು ಕೆದರಿ ಕುಣಿವ ಕುದುರೆ,
ಹಿಂಗಾಲಿಲಸುರ ಒದೆವ ಕುದುರೆ
ರಂಗನೆಂದರೆ ಸಲುಹೋ ಕುದುರೆ,
ತುಂಗ ಹಯವದನ ಕುದುರೆ ॥1॥

ಸುತ್ತಮುತ್ತಲಾಡುವ ಕುದುರೆ,
ಮತ್ತವಾದಿಯ ಗೆಲ್ವ ಕುದುರೆ
ಶತ್ರುಗಳೆಲ್ಲರ ಬಡಿದ ಕುದುರೆ,
ತತ್ವ ಹಯವದನ ಕುದುರೆ ॥2॥

ಹಲ್ಲಣದೊಳಗೆ ನಿಲ್ಲದು ಕುದುರೆ,
ಬೆಲ್ಲ ಕಡಲೆ ಮೆಲ್ವ ಕುದುರೆ
ಚೆಲ್ವ ಹಯವದನನೆಂಬೊ ಕುದುರೆ ॥3॥

ಈ ರಚನೆಯಲ್ಲಿ ವಾದಿರಾಜರು ಹಯಗ್ರೀವರೂಪಿಯಾದ, ಬೆಲ್ಲ-ಕಡಲೆ ಮೆಲ್ಲುವ, ಚೆಲುವ ಕುದುರೆಯು ಅಪ್ರಮೇಯ ಸ್ವರೂಪದ,ಬೆಲೆ ಕಟ್ಟಲಾಗದ ಅನುಪಮವಾದ ಜ್ಞಾನ ಮತ್ತು ಭಕುತಿಯನ್ನು ಮುದದಿಂದ ಅನುಗ್ರಹಿಸಿ ತನ್ನನ್ನು ಹರಸಲು ಒಲಿದು ಬಂದಿದೆ ಎಂದು ಬಣ್ಣಿಸಿದ್ದಾರೆ. ಅದು ತನಗೆ ಒದಗಬಹುದಾದ ಅಜ್ಞಾನ, ಅಹಂಕಾರ ಹಾಗೂ ತಾಮಸ ಬುದ್ಧಿಯ ನಿವಾರಣೆಗಾಗಿ ತನ್ನ ಹಿಂಗಾಲನ್ನು ಬಳಸುತ್ತಾ, ಮುಂಗಾಲನ್ನು ತನ್ನ ಸ್ವಾಭಾವಿಕ ಕುಣಿತದಲ್ಲಿ ಅಭಿವ್ಯಕ್ತಗೊಳಿಸುತ್ತಿದೆ.

ಈ ಕೃತಿಯು ಹಯವದನನ ಸಂದರ್ಶನದ ಚಿತ್ರದಂತೆ ಭಾಸವಾಗುತ್ತದೆ. ಮುಂಗಾಲು ಕೆದರಿ, ಬಾಲ ಬೀಸಿ, ತಲೆ ತಗ್ಗಿಸಿ, ಜಿಗಿದು ಹಾರಿ ಹುಂಕರಿಸುತ್ತಿರುವ ಕುದುರೆಯ ಸೊಗಸಾದ ಶಬ್ದ ಚಿತ್ರಣವೆಂದು ವಿಮರ್ಶಕರು ಮೆಚ್ಚಿದ್ದಾರೆ. ಪ್ರತಿಯೊಂದು ಸಾಲಿನ ಕೊನೆಯಲ್ಲಿ ಕುದುರೆ ಎಂಬ ಶಬ್ದ ಪ್ರಯೋಗದ ಮೂಲಕ ವಾದಿರಾಜರು ಹಯಗ್ರೀವ ನಾಮಸ್ಮರಣೆಯಲ್ಲಿನ ಭಕ್ತಿಯ ತಾದಾತ್ಮ್ಯತೆಯನ್ನು ಹೊರಗೆಡವಿದ್ದಾರೆ. ಇದರ ಪರಿಣಾಮವೋ ಎಂಬಂತೆ ಹಯಗ್ರೀವನೆಂದರೆ ಅದು ವಾದಿರಾಜರ ಸ್ಮರಣೆಯೇ ಎಂಬುದಾಗಿ ಭಕ್ತರಿಗೆ ಭಾಸವಾಗುತ್ತದೆ.



# ರಾಘವೇಂದ್ರ ಗುರು ಪಾವನ ಕಾಯ ರಾಘವೇಂದ್ರ ಮಂತ್ರಾಲಯ ನಿಲಯ

**- ಶ್ರೀಮತಿ. ಕೆ.ವಿ. ಲತ**

ಭಕ್ತಿಯೆಂದರೆ ಕೇವಲ ಪೂಜೆಯಲ್ಲ, ಶಂಕು, ಜಾಗಟೆ, ಗಂಟೆಗಳ ಸದ್ದಿನೊಡನೆ ಧೂಪ, ದೀಪ ಬೆಳಗುವುದಲ್ಲ, ಪೂಜೆಯೆಂದರೆ ಮನಸ್ಸಿನ ಏಕಾಗ್ರತೆ,ಏಕಾಗ್ರತೆಯೆಂದರೆ ತದೇಕ ಚಿತ್ತದಿಂದ ಒಂದು ವಿಷಯದಲ್ಲಿ ತಲ್ಲೀನವಾಗುವುದು. ಅಭಿಷೇಕ, ಅಲಂಕಾರ, ಧೂಪ, ದೀಪಗಳ ಮೂಲಕ ಮನಸ್ಸನ್ನು ಧನಾತ್ಮಕ ಶಕ್ತಿಯೆಡೆಗೆ ಹಿಡಿದಿಡುವ ಮಾಧ್ಯಮವಷ್ಟೆ.ಶಂಕು ಜಾಗಟೆ, ಗಂಟೆ ಸದ್ದಿನ ಮೂಲಕ ಚಂಚಲವಾದ ಮನಸ್ಸನ್ನು ಎಚ್ಚರಗೊಳಿಸಿ ಒಂದೆಡೆಗೆ ಕರೆಯುವ ಕರೆಗಂಟೆ, ಧನಾತ್ಮಕ ಶಕ್ತಿ ಪ್ರತಿಷ್ಠಾಪನೆಯ ಮೂಲಗಳಾಗಿವೆ.

ಅಂತೆಯೇ ಶ್ರೀ ಪ್ರಹ್ಲಾದರು ಭಕ್ತಿಯೆಂದರೆ, **"ದೇವರಲ್ಲಿನ ಪೂಜೆ ಪುನಸ್ಕಾರ ಮಾತ್ರವಲ್ಲದೆ, ಎಲ್ಲರಲ್ಲೂ ಪ್ರೀತಿ ಅನುಕಂಪ ತೋರುವುದು"** ಎಂದು ಹೇಳಿದ್ದಾರೆ. ಈ ಮಾತನ್ನು ಶ್ರೀರಾಘವೇಂದ್ರತೀರ್ಥರು ಸಾಧಿಸಿ ತೋರಿಸಿದ್ದಾರೆ. ಮಂತ್ರಾಲಯದ ಶ್ರೀಗುರುರಾಘವೇಂದ್ರ ಸ್ವಾಮಿಗಳು ವೃಂದಾವನದೊಳು ನೆಲೆಸಿ ಭಕ್ತರ ಪಾಲಿನ ಕಾಮಧೇನು ಕಲ್ಪವೃಕ್ಷವಾಗಿ, ಭೌತಿಕ ಕ್ಷೇತ್ರದಲ್ಲೂ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ ಬದುಕಿನ ಹಾದಿಯಲ್ಲಿ ಭರವಸೆ ತುಂಬಿ, ಸುಖ, ಶಾಂತಿ, ನೆಮ್ಮದಿಯನ್ನೀಯುವ ಯತಿವರ್ಯರೆನಿಸಿದ್ದಾರೆ. ನಂಬಿದವರ ಬೆರಳ ಹಿಡಿದು ಮಗುವಂತೆ ನಡೆಸುವರು.

ಆಧ್ಯಾತ್ಮಕವಾಗಿಯೂ ರಾಯರು ತಮ್ಮದೇ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಕಬ್ಬಿಣದ ಕಡಲೆ ಎನಿಸಿದ ಅನೇಕ ವಿಚಾರಗಳು ಎಲ್ಲರಿಗೂ ಅರಿಯುವಂತೆ ಅನೇಕ ಗ್ರಂಥಗಳ ರಚನೆಯಲ್ಲಿ ತಮ್ಮ ಜ್ಞಾನ ಸಂಪತ್ತನ್ನು ಅಕ್ಷರಗಳಾಗಿ ಮೂಡಿಸಿದ್ದಾರೆ. ಉಪನಿಷತ್, ಗೀತೆ, ಬ್ರಹ್ಮ ಸೂತ್ರಗಳಂತಹ ಅನೇಕ ಶ್ರೇಷ್ಠ ಗ್ರಂಥಗಳಿಗೆ ಸರಳ ವ್ಯಾಖ್ಯಾನ ಬರೆದಿದ್ದಾರೆ. ಪಂಡಿತ ಪಾಮರರು ತಲೆದೂಗುವಂತಹ ಹಾಗೂ ಸಾಮಾನ್ಯ ಜನರೂ ವಿಶಿಷ್ಟ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವಂತಹ ಸಾಹಿತ್ಯ ಸೇವೆಯನ್ನು ಕೊಡುಗೆಯಾಗಿ ನೀಡಿದ್ದಾರೆ.

**"ಶ್ರೀರಾಘವೇಂದ್ರ ಗುರುವೇ ನಮೋ ಅತ್ಯಂತ ದಯಾಲವೇ...."**

**"ಮಹಾಭಾರತ"** ಕೇವಲ ಎರಡು ರಾಜ ಕುಟುಂಬಗಳ, ಅಣ್ಣ ತಮ್ಮಂದಿರ ಕಥೆಯಲ್ಲ. **"ಹಸ್ತಿನಾಪುರ"** ವೆಂಬ ಅರಸೊತ್ತಿಗೆಗಾಗಿ ನಡೆದ ಮಹಾಕದನದ ಕಾಲ್ಪನಿಕ ನಿರೂಪಣೆಯಲ್ಲ. ಅದು ಇತಿಹಾಸ. ಭಗವಂತನೆ ಭಾಗವಹಿಸಿ ತನ್ನ ಇರುವಿಕೆಯನ್ನು ತೋರಿದ ಸತ್ಯ ಘಟನೆ. ಇಂದಿಗೂ ಕೂಡಾ ಮಹಾಭಾರತದ ಘಟನೆಗಳು ನಡೆದ ಸ್ಥಳಗಳು ನಮ್ಮ ಕಣ್ಣ ಮುಂದೆಯೇ ಇವೆ. ಸಂಶೋಧನೆಯ ಪ್ರಕಾರ ಅಂತಹ ಸ್ಥಳಗಳು ಇನ್ನೂ ಸಿಗುತ್ತಲೇ ಇವೆ. ಇಂತಹ ಅನೇಕ ಸ್ಥಳಗಳು ಇಂದು ಪುಣ್ಯಕ್ಷೇತ್ರಗಳಾಗಿ, ಹಲವಾರು ಭಕ್ತರ ಶ್ರದ್ಧಾ ಕೇಂದ್ರಗಳಾಗಿ ಕಂಗೊಳಿಸುತ್ತಿವೆ.

ಒಂದು ಸಾರಿ ಅರ್ಜುನನಿಗೂ, ಅನುಸ್ವಾಲ ಎಂಬ ರಾಜನಿಗೂ ಯುದ್ಧ ನಡೆಯಿತು. ಅನುಸ್ವಾಲ ರಾಜನೂ ಮಹಾ ಪರಾಕ್ರಮಿಯಾಗಿದ್ದ. ಆಗ ಯಥಾ ಪ್ರಕಾರ ಅರ್ಜುನನ ಜೊತೆಗೆ ಶ್ರೀಕೃಷ್ಣನೂ ಉಪಸ್ಥಿತನಿದ್ದ. ಅರ್ಜುನ ಎಷ್ಟೇ ಪರಾಕ್ರಮದಿಂದ ಹೋರಾಡಿದರೂ ಅನುಸ್ವಾಲ ಸೋಲಲಿಲ್ಲ. ಗಾಬರಿಗೊಂಡ ಅರ್ಜುನ ಕೃಷ್ಣನ ಮುಖ ನೋಡಿದ. ಆಗ ಕೃಷ್ಣ ಅನುಸ್ವಾಲನ ರಥ ಸ್ವಲ್ಪ ಮುಂದೆ ಚಲಿಸುವವರೆಗೂ ಬಾಣಗಳನ್ನು ಪ್ರಯೋಗಿಸದಂತೆ ಅರ್ಜುನನಿಗೆ ಸೂಚಿಸಿದ. ನಂತರ ಅನು ಸ್ವಾಲನ ರಥ ನಿಂತ ಸ್ಥಳದಿಂದ ಮುಂದೆ ಚಲಿಸಿದಾಗ, ಅರ್ಜುನನ ಬಾಣಗಳ ರಭಸಕ್ಕೆ ಅನುಸ್ವಾಲ ಕುಸಿದು ಬಿದ್ದ. ಕೊನೆಗೂ ಜಯ ಅರ್ಜುನನಿಗೆ ಲಭಿಸಿತು. ಇದು ಹೀಗೇಕಾಯಿತು...ಎಂಬ ಅರ್ಜುನನ ಕುತೂಹಲದ ಪ್ರಶ್ನೆಗೆ ಶ್ರೀಕೃಷ್ಣ "ಯುದ್ಧ ನಡೆದಾಗ ಅನುಸ್ವಾಲನ ರಥ ನಿಂತ ಸ್ಥಳದ ಶಕ್ತಿಯೇ ಇದಕ್ಕೆ ಕಾರಣವಾಗಿತ್ತು, ಅದು ಸಾಮಾನ್ಯ ಸ್ಥಳವಲ್ಲ. ಹಿಂದೆ ಕೃತಯುಗದಲ್ಲಿ ಪ್ರಲ್ಹಾದ ರಾಜರು ಭಗವಂತನ ಕುರಿತಾಗಿ ಯಜ್ಞಯಾಗಾದಿಗಳನ್ನು ಮಾಡಿದ ಪವಿತ್ರಸ್ಥಳ **"ಮುಂದುವರೆದು ಕೃಷ್ಣ.."** ಈಗಲೂ ಆ ಸ್ಥಳದ ಗರ್ಭದಲ್ಲಿ ಯಜ್ಞ ಕುಂಡಗಳ ಕುರುಹುಗಳು ಇವೆ. ಅದೊಂದು ಪವಿತ್ರವಾದ ನೆಲ. ಹೀಗಾಗಿ ಅನುಸ್ವಾಲನಿಗೆ ಸೋಲಾ

ಗಳಿಲ್ಲ ಎಂದು ಆ ಸ್ಥಳದ ಮಹಿಮೆಯನ್ನು ವಿವರಿಸಿದ. ಇಂದು ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ಕಲಿಯುಗದ ಕಾಮಧೇನು ಶ್ರೀರಾಘವೇಂದ್ರ ಸ್ವಾಮಿಗಳ ಮೂಲ **"ಬೃಂದಾವನ"** ಕಂಗೊಳಿಸುತ್ತಿರುವ ಸ್ಥಳವೇ, ಅಂದು ಶ್ರೀಕೃಷ್ಣ ತಿಳಿಸಿದ ಆ ಪವಿತ್ರ ನೆಲ.

ಶ್ರೀರಾಯರು ಅಂದು ಆದವಾನಿ ನವಾಬ ನೀಡಿದ ಫಲವತ್ತಾದ ಭೂಮಿಯನ್ನು ಬಯಸದೇ ಬರಡು ನೆಲವಾಗಿದ್ದ ಮಂಚಾಲೇ ಗ್ರಾಮವನ್ನೇ ಆಯ್ದುಕೊಂಡರು. ಶಿಷ್ಯ ವೆಂಕಣ್ಣ ನಿರ್ಮಿಸಿದ ಬೆಲೆಬಾಳುವ ಬೃಂದಾವನವನ್ನು ಬಯಸದೇ ಸ್ವತಃ ಶ್ರೀರಾಮ ದೇವರ ಸ್ಪರ್ಶದಿಂದ ಪಾವನವಾದ ಮಾಧವಾರದ ಕಲ್ಲನ್ನೇ ಕೇಳಿ ಪಡೆದರು. ಕೊನೆಗೇ ತಮ್ಮ ಪ್ರಥಮ ಅವತಾರದಲ್ಲಿ ತಾವೇ ಯಜ್ಞಗೈದ ಸ್ಥಳದಲ್ಲಿಯೇ ವಾಸವಾಗಿ ಎಲ್ಲ ಭಕ್ತರನ್ನೂ, ಅನುಗ್ರಹಿಸುತ್ತಿದ್ದಾರೆ.

**"ಅಪರೋಕ್ಷ ಜ್ಞಾನಿಗಳ ಅಂತರಂಗ ಬಲ್ಲವರಾರು.."**
**"ಧರೆಗೆ ಮರೆಯಾಗಿ ಬೃಂದಾವನದಿ ನೆಲೆಸಿದೊಡೆ.."**
**"ಚರಣದಾಸರು ನಿನ್ನ ಬಿಡುವರೆನಯ್ಯ..."**

ಸತ್ಯಲೋಕ ವಾಸಿಯಾದ ಶಂಕುಕರ್ಣನೆಂಬ ದೇವತೆಯು ಶ್ರೀಹರಿಯ ಸಂಕಲ್ಪದಂತೆ ಬ್ರಹ್ಮದೇವರಿಂದ ಶಾಪ ರೂಪದ ವರವನ್ನು ಪಡೆದು, ಕೃತಯುಗದಲ್ಲಿ ಪ್ರಹ್ಲಾದನಾಗಿ ಅವತರಿಸಿ, ನೃಸಿಂಹರೂಪಿಯಾದ ಶ್ರೀಹರಿಯನ್ನು ಕಂಭದಿಂದ ಪ್ರಕಟಗೊಳ್ಳುವಂತೆ ಮಾಡಿ, ಭಕ್ತಾಗ್ರೇಸರನೆನಿಸಿ, ಮತ್ತೆ ದ್ವಾಪರಯುಗದಲ್ಲಿ ಬಾಹ್ಲೀಕ ರಾಜನಾಗಿ ಅವತರಿಸಿ, ಶ್ರೀಕೃಷ್ಣ-ಭೀಮಸೇನ ದೇವರನ್ನು ಮೆಚ್ಚಿಸಿ, ಕಲಿಯುಗದಲ್ಲಿ ಪ್ರಥಮವಾಗಿ ಶ್ರೀವ್ಯಾಸತೀರ್ಥರಾಗಿ ಅವತರಿಸಿ, ಶ್ರೀಮೂಲಗೋಪಾಲ ಕೃಷ್ಣನನ್ನು ಮೆಚ್ಚಿಸಿ, ಸುವರ್ಣಯುಗವನ್ನು ಸೃಷ್ಟಿಸಿ, ದಾಸಪಂಥವನ್ನು ಪೋಷಿಸಿ ಬೆಳೆಸಿ, ಅಂತಿಮ ಅವತಾರವಾಗಿ ವೇಂಕಟನಾಥರಾಗಿ ಅವತರಿಸಿ ಶಾಲಿವಾಹನ ಶಕವರ್ಷ ದುರ್ಮತಿ ಸಂವತ್ಸರದ ಫಾಲ್ಗುಣ ಶುಕ್ಲ ಬಿದಿಗೆ ಶ್ರೀಸುಧೀಂದ್ರ ತೀರ್ಥರಿಂದ ಶ್ರೀರಾಘವೇಂದ್ರ ಗುರುಸಾರ್ವಭೌಮರಾಗಿ ದ್ವೈತ ಸಾಮ್ರಾಜ್ಯದ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದರು.

ಅನೇಕ ಗ್ರಂಥಗಳನ್ನು ರಚಿಸಿ, ಲೋಕಕಲ್ಯಾಣಾರ್ಥವಾಗಿ ಅನೇಕ ಪವಾಡಗಳನ್ನು ಮೆರೆದು,ಪರಿಮಳಾಚಾರ್ಯರಾಗಿ ಶ್ರೀಹರಿಯ ಮಹಿಮೆಯನ್ನು ಜಗತ್ತಿನಲ್ಲೆಲ್ಲಾ ಸಾರಿ, ಪರಮಾತ್ಮನ ಇಚ್ಛೆಯಂತೆ 353 ವರ್ಷಗಳ ಹಿಂದೆ ಸಶರೀರವಾಗಿ ಮಂತ್ರಾಲಯದಲ್ಲಿ ಬೃಂದಾವನವನ್ನು ಪ್ರವೇಶಿಸಿದ ಮಹಾನುಭಾವರು ಅಂದಿನಿಂದ ಇಂದಿನವರೆಗೂ ಪ್ರಪಂಚದ ಕೋಟ್ಯಾಂತರ ದೀನದಲಿತರು, ಬಡವರು, ದುಃಖಿತರನ್ನು ಜಾತಿ-ಮತ-ಧರ್ಮ ಭೇದವಿಲ್ಲದೇ ಪೊರೆದು ಪೋಷಿಸುತ್ತಿರುವ ಶ್ರೀಗುರುರಾಯರು ಜಗದ್ವಂದ್ಯ ಜಗದ್ಗುರುವಾಗಿದ್ದಾರೆ. ಮನೆ ಮನೆಗಳಲ್ಲೂ ರಾರಾಜಿಸಿ ಪೂಜೆ ಗೊಳ್ಳುತ್ತಿರುವ ಭಕ್ತರ ಆರಾಧ್ಯ ದೈವವಾಗಿದ್ದಾರೆ." ಕಲಿಯುಗದ ಕಲ್ಪತರು, ಕಾಮಧೇನು ಎಂದು ಭಕ್ತರಿಂದ ಹೊಗಳಿಸಿಕೊಳ್ಳುತ್ತಿದ್ದಾರೆ. ಇಂತಹ ಶ್ರೀಗುರುರಾಯರನ್ನು ಇಂದಿನ ಪವಿತ್ರವಾದ ದಿನ ವಿಶೇಷವಾಗಿ ಪೂಜಿಸಿ ಸೇವಿಸಿ ಕೃತಾರ್ಥರಾಗೋಣ.

ಸಮಾಜವನ್ನು ಸರ್ವರೀತಿಯಿಂದಲೂ ಮೇಲೆತ್ತಿ ಶ್ರೀರುಧಿರೋದ್ಗಾರೀ ಸಂವತ್ಸರದ ಶ್ರಾವಣ ಬಹುಳ ಬಿದಿಗೆ ಸಶರೀರರಾಗಿ ಮಂತ್ರಾಲಯದಲ್ಲಿ ವೃಂದಾವನ ಪ್ರವೇಶ ಮಾಡಿದ ಮಹಾಮಹಿಮರು. ದಿನ ನಿತ್ಯ ಬಂದು ಭಕ್ತಿಯಿಂದ ಬೇಡುವ ಜನಗಳ ಕಾಮಿತಾರ್ಥಪ್ರದರಾಗಿ ಇಹಪರ ಸಾಧಕರಿಗೆ ಅನುಗ್ರಹಿಸುತ್ತಾ ಕರೆದಲ್ಲಿಗೆ ಬರುವ ಸಂತಾಗ್ರಗಣಿಗಳಿಗೆ ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ.

ಶ್ರೀರಾಘವೇಂದ್ರರೆನಿಸುವ ಮುನ್ನ ವೆಂಕಟನಾಥರಾಗಿ ಬಾಲ್ಯದಿಂದಲೂ, ಬದುಕಿನುದ್ದಕ್ಕೂ ಬಡತನದ ಅನುಭವ ಹೊಂದಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದ ಗುರುವರ್ಯರು ಇಂದು ಶ್ರೀರಾಘವೇಂದ್ರರಾಗಿ ಬೇಡಿದ್ದನ್ನು ನೀಡುವ ಕಾಮಧೇನುವಾಗಿದ್ದಾರೆ.

ತಮ್ಮ ಕಷ್ಟದ ದಿನಗಳಲ್ಲಿ ಸೋಲದೆ ಜನಾನುರಾಗಿಯಾಗಿ ಪ್ರೀತಿ ಪ್ರೇಮವನ್ನು ಹಂಚಿ, ಭಗವಂತನನಲ್ಲಿ ನಂಬಿಕೆಯಿಟ್ಟು, ತಮ್ಮ ಜ್ಞಾನ ದಾಹವನ್ನು ಹೆಚ್ಚಿಸಿಕೊಳ್ಳುತ್ತಾ ಜ್ಞಾನದಾಹಿ


**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**



ಗಳಿಗೆ ತಮ್ಮ ಜ್ಞಾನಾಮೃತ ಧಾರೆಯೆರೆದ ಪಾಮರರೆನಿಸಿದ್ದಾರೆ.

ಶ್ರೀರಾಘವೇಂದ್ರರು ವಿದ್ವಾಂಸರು, ದೇವತಾ ಶಾಸ್ತ್ರಜ್ಞರು, ಮಹಾನ್ ಸಂತರಾಗಿ, ಮಹಾ ಸಂಸ್ಥಾನದ ಅಧಿಪತ್ಯವನ್ನು ಸ್ವೀಕರಿಸಿ ಶ್ರೀಮಧ್ವಾಚಾರ್ಯರ ಸಿದ್ಧಾಂತ ಪ್ರಚಾರ, ಶಾಸ್ತ್ರ ಪರಂಪರೆಯ ರಕ್ಷಣೆ, ದಾಸಸಾಹಿತ್ಯ ಪ್ರಚಾರ, ಜನರಲ್ಲಿ ಪ್ರೀತಿ ವಿಶ್ವಾಸ, ಪ್ರಸಿದ್ಧ ವೈಣಿಕರಾಗಿ, ಭಗವಂತನಲ್ಲಿ ನಿಷ್ಕಲ್ಮಷ ನಂಬಿಕೆ ಹೊಂದಿ ಭಕ್ತರ ಪಾಲಿನ ಕಾಮಧೇನುವಾಗಿದ್ದಾರೆ.

ಆಧ್ಯಾತ್ಮಿಕ, ಭೌತಿಕ ಕ್ಷೇತ್ರಗಳಲ್ಲೂ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ.

ಇಂತಹ ಮಹಾಮಹಿಯರು ಮಂತ್ರಾಲಯದಲ್ಲಿ (ಬೃಂದಾವನ ಪ್ರವೇಶಿಸಿದ ದಿನವನ್ನು) ಆರಾಧನಾ ಮಹೋತ್ಸವವಾಗಿ ಶ್ರಾವಣ ಮಾಸದಲ್ಲಿ ಮೂರು ದಿನಗಳು ಪೂರ್ವ ಆರಾಧನೆ, ಮಧ್ಯಾರಾಧನೆ, ಮತ್ತು ಉತ್ತರ ಆರಾಧನೆಯೆಂದು ಆಚರಿಸಲಾಗುತ್ತದೆ.

## ತಿರುಮಲೆ ತಿರುಪತಿ ದೇವಸ್ಥಾನಗಳು

# ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸಲಾಗಿದೆ.**

1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತ ದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.

2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತಬಾರದು.

3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಆಸ್ತಮಾ ಹೆಚ್ಚಾಗಬಹುದು.

4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳಿ. ಅಲಿಪಿರಿ ನಡೆದುಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.

6. ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.

7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.



# ಮುರಾರಿಯ ಮೊದಲ ದಿನಗಳು

– ಬೇಲೂರು ರಾಮಮೂರ್ತಿ
98860 61400

ರುದ್ರಭಟ್ಟನ ಜಗನ್ನಾಥ ವಿಜಯ ಕಾವ್ಯದಲ್ಲಿ ಶ್ರೀಕೃಷ್ಣನ ಜನನದಿಂದ ಪ್ರಾರಂಭಿಸಿ ಅವನ ಬದುಕಿನ ಲೀಲಾ ವಿನೋದ ಗಳನ್ನು ಅತಿ ಸುಂದರವಾಗಿ ಚಿತ್ರಿಸಲಾಗಿದೆ. ಅದರಲ್ಲಿ ಬಹು ಮುಖ್ಯವಾಗಿ ಶ್ರೀಕೃಷ್ಣನ ಜನನದ ಮೊದಲು ದೇವಕಿಗೆ ಆದ ಅನುಭವಗಳು, ವಸುದೇವನಿಗೆ ಮನಸು ತುಂಬಿ ಬಂದ ಭಾವ ಗಳನ್ನು ಕಣ್ಣಿಗೆ ಕಟ್ಟುವಂತೆ ಹೆಣೆದು ಪೋಣಿಸಲಾಗಿದೆ, ಒಂದು ಉದಾಹರಣೆ:

ತನ್ನ ಕಾಂತಿಯಿಂದ ಆಕಾಶವನ್ನು ಬೆಳ್ಳಗೆ ಮಾಡಿದ, ಸೂರ್ಯನನ್ನು, ನಿರ್ಮಲವಾದ ಚಂದ್ರನನ್ನೂ, ದರ್ಪದ ಐರಾವತವನ್ನೂ, ಅತ್ಯುನ್ನತವಾದ ಮೇರುಗಿರಿಯನ್ನೂ, ಶ್ಲಾಘ್ಯವಾದ ಕಮಲವನ್ನೂ, ಉಬ್ಬಿ ಹೊಳೆಯುವ ಸಮುದ್ರವನ್ನೂ, ಸತ್ಫಲ ದಿಂದ ಮನೋಹರವಾದ ಕಲ್ಪವೃಕ್ಷವನ್ನು, ಪರ್ವತ ಶಿಖರ ದಲ್ಲಿದ್ದು ಗರ್ಜಿಸುತ್ತಿರುವ ಸಿಂಹವನ್ನು, ದೇವಕಿ ತನ್ನ ಕನಸಿನಲ್ಲಿ ಕಂಡಳು. ಜೊತೆಗೆ ಆಗಸದಲ್ಲಿ ದೇವತೆಗಳ ನಗಾರಿಯ ಶಬ್ದವು ಹೆಚ್ಚುತ್ತಿರುವಲ್ಲಿ ಶಂಖ, ಚಕ್ರ, ಗದಾಪದ್ಮಧರನೂ, ಪೀತಾಂಬರ ಧಾರಿಯೂ ಆದ ವಿಷ್ಣುವು ಬಂದು ತನ್ನ ಬಾಯಲ್ಲಿ ಪ್ರವೇಶಿಸಿ ಸುವುದನ್ನು ದೇವಕಿ ಕಂಡಳು.ಆಗ ವಿಷ್ಣುವಿನ ದೇಹಕಾಂತಿಯು ಲೋಕವನ್ನು ಬೆಳಗುತ್ತಿತ್ತು. ಹೊಳೆಯುವ ಕರ್ಣಾಭರಣವು ಕೆನ್ನೆ ಗಳಲ್ಲಿ ಚಿತ್ರಿಸುತ್ತಿತ್ತು. ಎದೆಯ ಮೇಲೆ ಕೌಸ್ತುಭಮಣಿ ಹೊಳೆಯುತ್ತಿತ್ತು. ಇಷ್ಟೆಲ್ಲ ಅನುಭವವಾದ ದೇವಕಿಯ ಬಳ್ಳಿಯಂತಿರುವ ದೇಹವು ಸುವಾಸನೆಯನ್ನು ಬೀರುತ್ತಿರಲು, ಮುಂಗುರುಳು ಕೆದರಿತು. ಸಡಿಲವಾಗಿ ಜೋಲುವ ಜಡೆಯೂ, ಸಡಿಲವಾದ ನೆರಿಗೆಯೂ ಚೆನ್ನಾಗಿ ಕಾಣುತ್ತಿರಲು, ಸಂತೋಷಭರಿತಳಾಗಿ ಹಾಸಿಗೆಯಿಂದ ಏಳುತ್ತಾಳೆ. ಅವಳ ನಿತ್ಯಕರ್ಮಗಳು ಮುಗಿಯುವ ಹೊತ್ತಿಗೆ ವಸುದೇವನು ಅವಳ ಎದುರಿಗೆ ಬಂದನು. ಆದರೆ ಆವತ್ತು ಮಾತ್ರ ದೇವಕಿಯು ಅವನ ಕಣ್ಣಿಗೆ ನಯನ ಮನೋಹರವಾಗಿ ಕಂಡಳು. ಈ ದಿನ ಏಕೋ ವಿಚಿತ್ರವಾಗಿದೆಯಲ್ಲ. ಈಕೆ ನಡೆದು ಬರುತ್ತಿರುವ ರೀತಿ, ಅವಳ ಮುಖದಲ್ಲಿ ಉಕ್ಕುತ್ತಿರುವ ಕಾಂತಿ, ಸಂತಸ ತುಂಬಿ ಬಂದಿರುವ ಭಾವ, ಅವಳ ಕಿರುನಗೆ, ಬೆಡಗು ಇವುಗಳನ್ನು ನಾನು ಈ ಹಿಂದೆ ಕಂಡಿರಲೇ ಇಲ್ಲ ಅನಿಸಿತು. ಗಂಡನ ಬೆರಗಿನ ನೋಟಕ್ಕೆ ತನ್ನ ಸಂಭ್ರಮ ತುಂಬಿದ ನೋಟವನ್ನು ಸೇರಿಸಿ ಮೆಲ್ಲನೆ ಅವನೆಡೆಗೆ ಸಾರಿ ವಿಶಾಲವಾದ ತನ್ನ ನಗುವಿನಿಂದ ದಂತ ಪಂಕ್ತಿಗಳೆಲ್ಲವೂ ಕಾಣುವಂತೆ ಮಾಡಿ ಇಗೋ ನಾ ಅನುಭವಿಸಿದ ಸಂಭ್ರಮವನ್ನು ನಿನ್ನ ಅರ್ಧಾಂಗಿಯಾದ ನಾನು ನಿನ್ನೊಂದಿಗೆ ಹಂಚಿಕೊಳ್ಳಲು ಬರುತ್ತಿದ್ದೇನೆ ಎಂದು ಅವನು ಕುಳಿತಿದ್ದ ಆಸನದಲ್ಲಿ ಉಳಿದಿದ್ದ ಜಾಗದಲ್ಲೇ ಕುಳಿತು ಕಣ್ಣಲ್ಲಿ ಕಣ್ಣಿಟ್ಟು ತಾನು ಕಂಡದ್ದನ್ನು ವಿವರಿಸಿದಳು. ನಲ್ಲೆಯ ಮಧುರ ಮಾತನ್ನು ಕೇಳಿ ವಸುದೇವ ಹೊಸದೊಂದು ಲೋಕಕ್ಕೆ ಪ್ರವೇಶ ಪಡೆದ ಅವನ ಅಂತರಂಗಕ್ಕೆ ನಲ್ಲೆಯ ಮಾತಿನ ಅರ್ಥವು ವೇದ್ಯವಾಯಿತು. ಅವಳ ಗಲ್ಲ ಹಿಡಿದೆತ್ತಿ ಕೆನ್ನೆಗೆ ಕೆನ್ನೆ ತಗುಲಿಸಿ ಹೀಗೆ ನುಡಿದ. "ಇದರರ್ಥ ಇಷ್ಟೇ ಪ್ರಿಯೆ, ಸೂರ್ಯನಂತೆ ಹೊಳೆಯುವ ದೇಹವುಳ್ಳವನೂ, ಪೂರ್ಣಚಂದ್ರನಂತೆ ಸದ್ವೃತ್ತನೂ, ಐರಾವತದಿಂದ ಭೂಪತಿಯೂ, ಮೇರುವಿನಿಂದ ಸ್ಥಿರತರನೂ, ಕಮಲದಿಂದ ಶ್ರೀಕಾಂತನು, ಸಮುದ್ರದಿಂದ ಅಪಾರ ಮಹಿಮನೂ, ಕಲ್ಪವೃಕ್ಷದಿಂದ ಸತ್ತ್ವಗೌರವಯುತನೂ, ಸಿಂಹದಿಂದ ಪುರುಷೋತ್ತಮನೂ ಆದ ಮಗ ಹುಟ್ಟುತ್ತಾನೆ. ನಾವು ಧನ್ಯರಾದ ಮಾತಾಪಿತರಾಗುತ್ತೇವೆ. ನೀನೂ ನಾನೂ ಕೂಡಿ ಹಿಂದಿನ ಜನ್ಮಗಳಲ್ಲಿ ಮಾಡಿದ ತಪಸ್ಸು ಇಂದು

ನಿನ್ನಲ್ಲಿ, ನಿನ್ನ ಗರ್ಭದಲ್ಲಿ ಫಲಿಸಿದೆ. ಆ ವಿಷ್ಣುವು ಬಂದು ನಿನ್ನ ಮುಖದಲ್ಲಿ ಹೊಕ್ಕಿದ್ದನ್ನು ಕಂಡ ಪುಣ್ಯೋದಯದಿಂದ ಆ ಚತುರ್ಭುಜನೇ ಹುಟ್ಟುವನು. ಅವನು ಯದುವಂಶಕ್ಕೆ ರಾಜ್ಯವನ್ನು ಸಂಪಾದಿಸಿ ಕೊಡುವನು. ಉಗ್ರಸೇನನ ಭಯವನ್ನು ನಿವಾರಿಸುವನು. ಉದ್ಧಟನಾದ ಕಂಸನನ್ನು ಕೊಲ್ಲುವನು, "ಎಲೇ ಪ್ರಿಯೇ ನೀನು ಪಡೆಯುವ ಮಗನು ಶತ್ರುಸೇನೆಯ ಸಂಹಾರ ಮಾಡುವನು. ಅವನ ತೇಜಸ್ಸು ಎಂಥದು ಎಂದರೆ ಅವನ ಮುಂದೆ ಸೂರ್ಯನೂ ಮಂಕು".

ವಸುದೇವನು ಹೀಗೆ ಹೇಳಿದ ಮೇಲೆ ದೇವಕಿಯ ದೇಹದಲ್ಲೂ ಅನೇಕಾನೇಕ ಬದಲಾವಣೆಗಳಾದವು. ಗರ್ಭದಲ್ಲಿರುವ ಕೃಷ್ಣನ ಪರಿಪೂರ್ಣವಾದ ಸರಸ ಪ್ರಕಾಶವೇ ಈ ತಾಯಿಯಲ್ಲಿ ಉದಿಸಿದೆ ಎನ್ನುವಂತೆ ದೇವಕಿಯ ದೇಹವು ಸಂದರ್ಭಕ್ಕೆ ತಕ್ಕ ಬಿಳುಪಿನಿಂದ ಹೊಳೆಯುತ್ತಿತ್ತು. ಉಂಟಾಗಿರುವ ಬಯಕೆಯಿಂದ ಬೆಳ್ಳಗಾದ ದೇವಕಿಯ ಅಂಗರೇಖೆಯು ಕಪ್ಪೇರಿದ ಬಾಸೆಯನ್ನು (ನಾಭಿಯಿಂದ ಎದೆಯವರೆಗೆ ಇರುವ ತೆಳುಗೂದಲಿನ ಸಾಲು) ಪಡೆದು ತುಂಬಿಯ (ದುಂಬಿಯ) ಸಾಲೆಂಬ ಹೆದೆಯನ್ನು ಪಡೆದ ಮನ್ಮಥನ ಹೂಬಿಲ್ಲಿನಂತೆ ಪ್ರಕಾಶಿಸುತ್ತಿತು. ಸೂರ್ಯನಂತೆ ತೇಜಸ್ವಿಯಾದ ಶಿಶುವು ಈ ತರುಣಿಯ ಹೃದಯದ ಕತ್ತಲೆಯನ್ನು ಹೊರದೂಡಿದನೋ ಎನ್ನುವಂತೆ ದೇವಕಿ ಹೊಳೆಯುತ್ತಿದ್ದಳು. ಭೂಮಿಯ ಭಾರ. ದೇವತೆಗಳ ಖೇದ,ದುರ್ಜನರ ದುಷ್ಕಾರ್ಯ ಈ ಮೂರೂ ಅರಿಷ್ಟಗಳು ಇನ್ನು ತೊಲಗುವುವು ಎಂಬುದನ್ನು ತಿಳಿಸುತ್ತಿವೆಯೋ ಎನ್ನುವಂತೆ ದೇವಕಿಯ ನಡುವಿನ ತ್ರಿವಳಿಗಳೂ ಅಡಗಿದವು. ಅತಿ ತೀವ್ರ ತೇಜಸ್ಸನ್ನು ಗರ್ಭದಲ್ಲಿ ಧರಿಸಿ ಬೆಳ್ಳಗಾಗಿರುವ ದೇವಕಿಯು ಮಧ್ಯಾಹ್ನದ ಸೂರ್ಯನನ್ನು ಮಧ್ಯದಲ್ಲಿ ಪಡೆದು ನಿಂತ ಶರತ್ಕಾಲದ ಮೋಡದಂತೆ ಸೊಗಸಾಗಿ ಕಾಣುತ್ತಿದ್ದಳು. ಇನ್ನು ಹೇಗೆ ದೇವಕಿಯನ್ನು ಹೊಗಳುವುದು. ಮುಖವು ಬೆಳ್ಳಗಾಯಿತು, ಎದೆ ಉಬ್ಬಿತು, ನಡಿಗೆ ಮಂದವಾಯಿತು. ಮಾತು ಮೃದುವಾಯಿತು ಮುಂಗುರಳ ಸಾಲು ಕುಡಿಯಿಟ್ಟಿತು. ಇಷ್ಟೇ ಸಾಲದು ಎನ್ನುವಂತೆ ಅವಳ ದೃಷ್ಟಿಗೆ ಇಡೀ ದೇವಕುಲವೇ ಕಣ್ಮುಂದೇ ಬಂದು ನಿಂತು ಹೀಗೆ ನುಡಿಯಿತು. ಸಮಸ್ತ ಜಗತ್ತೂ ಹಿರಿದಾದುದು, ಅದನ್ನು ಸೃಷ್ಟಿಸಿದ ಬ್ರಹ್ಮ ಅದಕ್ಕಿಂತ ಹಿರಿಯನು. ಆ ಬ್ರಹ್ಮನನ್ನು ಸುವರ್ಣ ಕಮಲದಲ್ಲಿ ಹುಟ್ಟಿಸಿದ ಕಮಲಾಕ್ಷ ವಿಷ್ಣು ಅವನಿಗಿಂತ ಹಿರಿಯನು. ಧನುರ್ಧಾರಿಯಾದ ವಿಷ್ಣುವನ್ನು ಗರ್ಭದಲ್ಲಿ ಧರಿಸಿರುವ ನೀನು ಹಿರಿಯಳು. ನಿನಗಿಂತ ಹಿರಿಯರು ಈ ಲೋಕದಲ್ಲಿ ಯಾರೂ ಇಲ್ಲ. ಹೀಗೆ ವಿಶ್ವರೂಪವನ್ನು ಧರಿಸಿರುವ ದೇವಿ ನೀನು ಬಹು ಗರ್ಭ ಪ್ರಕೃತಿಯಂತೆಯೂ, ಪ್ರಾಗಲ್ಭ್ಯವನ್ನೊಳಗೊಂಡ ದೃಷ್ಟಿಯಂತೆಯೂ ವಿವೇಕವನ್ನು ಒಳಗೊಂಡಿರುವ ವಿದ್ಯೆಯಂತೆಯೂ, ವೇದಜ್ಞಾನವನ್ನು ಪಡೆದಿರುವ ವಾಣಿಯಂತೆಯೂ,ಯಜ್ಞವಿಚಾರವನ್ನು ಒಳಗೊಂಡಿರುವ ಶೃತಿಯಂತೆಯೂ, ಆಚಾರವಿಚಾರಗಳನ್ನು ಒಳಗೊಂಡ ಸ್ಮೃತಿಯಂತೆಯೂ, ಹೋಮವನ್ನೊಳಗೊಂಡ ಸ್ವಾಹಾ ಎನ್ನುವ ಮಂತ್ರದಂತೆಯೂ, ಅಗ್ನಿಯನ್ನು ಗರ್ಭದಲ್ಲಿ ಧರಿಸಿರುವ ಅರಣಿಯಂತೆಯೂ ರತ್ನಗರ್ಭೆಯಾದ ಭೂದೇವಿಯಂತೆಯೂ, ಜ್ಞಾನಗರ್ಭವಾದ ಶ್ರೇಷ್ಠವಾದ ವಂದನೆಯಂತೆಯೂ ಅವಬೇಧ ಗರ್ಭದ ಮೇಧೆಯಂತೆಯೂ, ಕಾಮ ಗರ್ಭವಾದ ಇಚ್ಛೆಯಂತೆಯೂ ನ್ಯಾಯಗರ್ಭ ನೀತಿಯಂತೆಯೂ, ಪ್ರಭಾವವನ್ನೊಳಗೊಂಡ ಶಕ್ತಿಯಂತೆಯೂ, ಪರಿಣಾಮವನ್ನು ನಿರ್ಣಯಿಸಿಕೊಂಡಿರುವ ತುಷ್ಠಿಯಂತೆಯೂ, ಧೈರ್ಯ ಗರ್ಭದ ಸ್ಥಿರತೆಯಂತೆಯೂ, ಪ್ರಸಾದ ಗರ್ಭದ ಭಕ್ತಿಯಂತೆಯೂ, ಅಭ್ಯುದಯವನ್ನು ಒಳಗೊಂಡಿರುವ ಧರೆಯಂತೆಯೂ, ಐಶ್ವರ್ಯ ಗರ್ಭವಾದ ಆಜ್ಞೆಯಂತೆಯೂ ಪ್ರಕಾಶವನ್ನು ಒಳಗೊಂಡಿರುವ ಕಾಂತಿಯಂತೆಯೂ ಪ್ರಸಾದಗರ್ಭದ ದಯೆಯಂತೆಯೂ, ಶೃಂಗಾರ ಗರ್ಭವಾದ ಐಶ್ವರ್ಯದಂತೆಯೂ, ಆನಂದಗರ್ಭದ ಲೀಲೆಯಂತೆಯೂ ಮಹತ್ವವನ್ನು ಪಡೆದಿರುವೆ. ನಿನ್ನ ಜನ್ಮ ಸಾರ್ಥಕವಾಗಿದೆ ಎಂದು ಹರಸಿದ್ದು ಕಾಣಿಸಿತು. ಇಷ್ಟೆಲ್ಲ ಮಹತ್ವ ಸಾರುವ ತನ್ನ ಗರ್ಭ ಅದರಿಂದುಂಟಾಗುವ ತಾಯ್ತನ ನೆನೆಸಿಕೊಂಡೇ ದೇವಕಿ ಉಬ್ಬಿಹೋದಳು.

ಕಾಲನು ತನ್ನ ನಡಿಗೆಯನ್ನು ಮುಂದುವರಿಸಿದ. ಸ್ವರ್ಗ ಸುಖದ ದಿನಗಳನ್ನು ಕಳೆಯುತ್ತಿದ್ದ ದೇವಕಿಗೆ ತನ್ನ ಮಾನಸಿಕ ಹಾಗೂ ದೈಹಿಕ ಬದಲಾವಣೆಗಳನ್ನು ಹಂತಹಂತವಾಗಿ ಗುರುತಿಸುತ್ತಲೇ ಇದ್ದಳು. ತನ್ನಿಂದ ಲಾಲನೆ ಮಾಡಿಸಿಕೊಂಡು ತನ್ನ ನಡಿಗೆಯಿಂದಲೇ ತಾವೂ ನಡಿಗೆ ಕಲಿತು ತನ್ನ ಹಿಂದೆ ನಡೆದು ಬರುತ್ತಿದ್ದ ಹಂಸಗಳ ನಡಿಗೆಗೆ ಈ ದೇವಕಿಯ ನಡೆ ಸಮನಾಗಿಲ್ಲ. ನಡಿಗೆಯಲ್ಲಿನ ಆಯಾಸ ಕಾಣುತ್ತಿದೆ. ತೋಳುಗಳ ಭಾರ, ಉದರದಭಾರ, ಸ್ತನಭಾರ, ಇವುಗಳಿಂದಾಗಿ ಅವಳ ಪುಟ್ಟ ಗರ್ಭದಲ್ಲಿ 14 ಲೋಕಗಳನ್ನು ತನ್ನ ಉದರದಲ್ಲೇ ಧರಿಸಿರುವ ಮಹಾವಿಷ್ಣುವೇ ಬೆಳೆಯುತ್ತಿರುವಾಗ ಅವಳು ಮಂದಗಮನೆಯಾಗದೇ ಇರುವ ಹೇಗೆ ಸಾಧ್ಯ ಎಲ್ಲವು ಅವಳಿಗೆ ಈ ಭಾರ ಕಣ್ಣಿಗೆ ಹಚ್ಚುವ ಕಾಡಿಗೆಯೂ ಭಾರ. ಕೋಮಲವಾದ ಅಂಗಾಂಗಳಿಗೆ ಗಂಧ ಲೇಪನವೂ ಭಾರ, ಜಡೆಯೂ ಭಾರ, ಜಡೆಗೆ ಮುಡಿಯುವ ಹೂವು ಭಾರ, ಹೀಗೆ ಭಾರ ಹೊತ್ತ ದೇವಕಿಗೆ ಅದೂ ಒಂದು ಸುಖವೇ.

ಇಂಥಾ ಸುಖವನ್ನು ಒಂಭತ್ತು ತಿಂಗಳು ಅನುಭವಿಸಿದ ದೇವಕಿ ತನ್ನ ಮೈನಿಂದ ಈ ಭಾರವನ್ನು ಕಳೆದುಕೊಂಡು ಅದರಿಂದಾಗಿ ಹೊಸದೊಂದು ರೀತಿಯ ಸುಖವನ್ನು ಕಾಣುವ

ದಿನಗಳು ಬಂದೇ ಬಿಟ್ಟಿತು. ಒಂಭತ್ತು ತಿಂಗಳು ತುಂಬಿದ ನಂತರ ಶ್ರಾವಣ ಮಾಸದ ಕೃಷ್ಣಪಕ್ಷದ ಅಷ್ಟಮಿಯಲ್ಲಿ ರೋಹಿಣಿ ನಕ್ಷತ್ರದಲ್ಲಿ ಮಹೋತ್ಕೃಷ್ಟವಾದ ಮುಹೂರ್ತದಿಂದ ಕೂಡಿದ ಮಧ್ಯ ರಾತ್ರಿಯಲ್ಲಿ ಶಾತ್ವತನೂ,ಗಧಾಶಂಖ ಚಕ್ರಾಂಕಿತ ಹಸ್ತನೂ, ರಾಕ್ಷಸರೆಂಬ ಕಾಡಿಗೆ ಕಾಡುಕಿಚ್ಚೂ, ಸಮಸ್ತ, ಪ್ರಭಾವವುಳ್ಳವನೂ ಆದ ವಾಸು ದೇವನು ಅವತರಿಸಿದನು. ಹುಟ್ಟುವಾಗಲೇ ಅವನ ದೇಹವು ಅಗಸೇ ಹೂವಿನಂತೆ ಹೊಳೆಯುತ್ತಿತ್ತು. ಮುತ್ತುಗದ ಹೂವಿನ ಬಣ್ಣದ ಪೀತಾಂಬರವು ರಾರಾಜಿಸುತ್ತಿತ್ತು. ಬಾಲ ಸೂರ್ಯನಂತೆಯೇ ಹೊಳೆಯುತ್ತಿದ್ದ ಮುಕುಂದ, ಮುರಾರಿ ವಾಸುದೇವ. ಕೃಷ್ಣ ತನ್ನ ಅವತಾರದ ಅಂಬೆಗಾಲನ್ನು ಪ್ರಾರಂಭಿಸಿದ.

ಇವೆಲ್ಲವೂ ತಾಯಿಯಾದ ದೇವಕಿಯ ಅನುಭವವಾದರೆ ಪ್ರಥಮವಾಗಿ ಶಿಶುವನ್ನು ಕಂಡ ಇತರರಿಗೆ ಹೇಗೆನಿಸಿದೆ ನೋಡಿ,

ಶ್ರೀಕೃಷ್ಣನು ಜನಿಸಿದಾಗಲೇ ಅವನ ವಿಶಾಲವಾದ ಎದೆಯ ಮೇಲೆ ಕೌಸ್ತುಭ ರತ್ನವು ರಾರಾಜಿಸುತ್ತಿತ್ತು. ಕಿರೀಟ ಮೊದಲಾದ ಆಭರಣಗಳ ಮತ್ತು ಚಕ್ರಾಯುಧಗಳ ನಾನಾ ವರ್ಣದ ಕಾಂತಿಗಳು ಕಂಡವು. ಹಿಂದೆ ಎಂದೂ ಆಗದ ಹೆರಿಗೆಯ ಅನುಭವವನ್ನು ದೇವಕಿ ಯಿಂದ ಕೇಳಿ ಮಗುವನ್ನು ನೋಡಲು ಬಂದವರು ತೇಜಸ್ಸಿನಿಂದ ಹೊಳೆಯುತ್ತಿರುವ ಇದು ಕೌಸ್ತುಭಮಣಿ. ಕ್ರೂರವಾಗಿ ಹೊಳೆಯುವ ಇದು ಮದಿಸಿದ ಕಂಸನಿಗೆ ಅಕಾಲದಲ್ಲಿ ಉದಿಸಿದ ಪ್ರಳಯ ಸೂರ್ಯನಂತೆ ಕಾಣುತ್ತಿದ್ದಾನೆ.

ಇವನು ಸಾಕ್ಷಾತ್ ರಾಕ್ಷಸ ದ್ವೇಷಿ ವಿಷ್ಣುವೇ ಇದೇನು ಆಕಾಶ ಗಂಗೆಯ ಪ್ರವಾಹದ ಧ್ವನಿಯೇ ಅಥವಾ ಆಕಾಶದಲ್ಲಿ ಸಂಚರಿಸುವ ಸೇನೆಯ ಧ್ವನಿಯೇ ಎಂಬಂತೆ ಆಕರ್ಷಕ ಧ್ವನಿಯೊಂದು ಕೇಳಿ ಸಿತು. ಅಂಬರಲಕ್ಷ್ಮಿಯ ತುಂತುರು ಸ್ವಾಗತವೆಂಬಂತೆ ಹನಿಗಳು ಇಳಿ ದವು. ರಾಕ್ಷಸ ಕ್ಷತ್ರಿಯಾಧಮರನ್ನು ಹೋಗಲಾಡಿಸುವುದಕ್ಕೆ ವಿಷ್ಣು ಹುಟ್ಟಿದ್ದಾನೆ.

ಇಲ್ಲಿ ವಸುದೇವ ದೇವಕಿಯರಿಗೆ ಒಂದು ಭ್ರಮೆಯಂಥಾ ಅನು ಭವವೂ ಆಗುತ್ತದೆ. ಅವರಿಬ್ಬರೂ ಆಗ ತಾನೇ ಹುಟ್ಟಿದ ಶಿಶುವಿಗೆ ಕೈ ಮುಗಿದು ತಲೆಬಾಗಿ ಭೂಕಾಂತನೇ ನೀನು ದಯೆಯಿಂದ ನಮ್ಮ ಗರ್ಭದಲ್ಲಿ ಜನಿಸಿದೆ. ನಮ್ಮ ಪೂರ್ವಜರಾದ ಯಾದವರಲ್ಲಿ ನಮ್ಮಂ ತಹ ಧನ್ಯರು ಇನ್ಯಾರು ಇಲ್ಲ. ಹೀಗಂದ ವಸುದೇವ ದೇವಕಿಯರಿಗೆ ಅವರ ಮುಂದೆ ಅಲಂಕೃತ ರಾಜಕುಮಾರನೊಬ್ಬ ನಿಂತು "ಮುಂಚೆ ನಿಮಗೆ ಹುಟ್ಟಿದ ಆರು ಮಕ್ಕಳೂ ಪಾತಾಳದಲ್ಲಿದ್ದ ಹಿರಣ್ಯಕಶಿಪುವಿನ ಮಕ್ಕಳೇ. ನನ್ನ ಆಜ್ಞೆಯಂತೆಯೇ ಹುಟ್ಟಿದವು, ಅಸುನೀಗಿದವು, ಮತ್ತೊಂದು ಶಿಶುವನ್ನು ಬಸಿರು ಇಳಿಯಿತು ಎಂಬ ಸುದ್ಧಿ ಹರಡಿ ನಾನೇ ತೆಗೆದುಕೊಂಡು ಹೋಗಿ ರೋಹಿಣಿಯ ಗರ್ಭದಲ್ಲಿ ನಿಲ್ಲಿಸಿ




ದ್ದೇನೆ. ಗೋಕುಲದಲ್ಲಿ ಆ ಮಹಾತ್ಮನ ಉದಯವಾಗಿದೆ. ಕೋಪದಿಂದ ನನ್ನ ಸಹೋದರ ಶಿಶುಗಳನ್ನು ಕೊಂದು ಉಗ್ರಸೇನನಿಗೆ ಬಂಧನವನ್ನು ತಂದು ಅವನ ರಾಜ್ಯ ದಲ್ಲಿ ನೆಲೆಯೂರಿರುವ ರಾಕ್ಷಸ ಶಿರೋಮಣಿಯೂ, ಊಹಿಸಲಾರದ ಐಶ್ವರ್ಯ ಸರೋವರದ ಹಂಸನೂ, ಅತಿ ಕ್ರೂರಿಯೂ, ದೇವ ಬಲಧ್ವಂಸಿಯೂ ಆದ ಕಂಸ ವನ್ನು ನಾನು ನಿಜವಾಗಲೂ ಕೊಲ್ಲುವೆ. ಅವನ ಅಂತ್ಯಕ್ಕೆ ನನ್ನ ಉದಯವಾಗಿರುವುದು"ಎಂದು ಹೇಳಿದ ಹಾಗೆ ಭಾಸವಾಯಿತು. ಎಚ್ಚೆತ್ತರೆ ಮಗು ನಗುತ್ತ ಕೈ ಕಾಲು ಆಡಿಸುತ್ತಿದೆ.

ವಸುದೇವ ದೇವಕಿಯರು ಮತ್ತೊಮ್ಮೆ ಧನ್ಯತಾ ಭಾವ ತಾಳಿ ಮಗುವಿನ ಮೈಸವರಿದರು. ಇದೊಂದು ಅಪರೂಪದ ಅನುಭವಾಮೃತಸಾರ ಪ್ರತಿಯೊಂದು ಹೆಣ್ಣು ಸಹ ತನ್ನ ಗರ್ಭಾವಸ್ಥೆಯಲ್ಲಿ ಅತ್ಯಂತ ಆನಂದ ಅನುಭವಿಸುವುದು ಸಹಜ. ಆದರೆ ನಾನು ಪಡೆದ ಆನಂದ ನನಗೊಬ್ಬಳಿಗೇ ಹೊರತು ಇನ್ಯಾರಿಗೂ ಆಗಲು ಸಾಧ್ಯವಿಲ್ಲ ಏಕೆಂದರೆ ಸಾಕ್ಷಾತ್ ಪರಮಾತ್ಮ ನನ್ನ ಉದರದಲ್ಲಿ ಬೆಳೆದು ಜನಿಸಿದನು ಅನಿಸಿದಾಗ ದೇವಕಿ ಸಂಭ್ರಮಿಸಿದಳು.

# ಸುಂದರ ವಸುಧೆ ಮೈದುಂಬುವ ಮಧುಮಾಸ - ಶ್ರಾವಣ

- ಶ್ರೀಮತಿ. ವಾರುಣಿ ಹೊನ್ನಾಳಿ
99160 22982

ಶ್ರಾವಣ-ಇದು ವರ್ಷಾ ಋತುವಿನ ನಡುಮನೆ. ಎಲ್ಲೆಲ್ಲೂ ಮಳೆ. ಮಳೆ...ಎಲ್ಲೆಡೆ ಭರ್ಜರಿ ವರ್ಷಧಾರೆಯದ್ದೇ ಮಾತು. ಶ್ರಾವಣ ಎಂಬ ಹೆಸರೇ ನವೋಲ್ಲಾಸದ ಪ್ರತೀಕ. ನವ ಚೈತನ್ಯಕ್ಕೆ ಅನ್ವರ್ಥ. ಮಾಸ ಪೂರ್ಣ ಹಬ್ಬ ಹರಿದಿನಗಳ ಸಡಗರವೋ ಸಡಗರ.

ನಾಡಿನ ಪ್ರತಿ ಗ್ರಾಮ, ಪಟ್ಟಣ ನಗರ - ಹೀಗೆ ಎಲ್ಲಾ ಕಡೆ ಹೊಸ ನೀರು, ಸ್ವಚ್ಛಗಾಳಿ, ಹೊಸ ಚಿಗುರು, ಹೊಸ ಪುಷ್ಪಗಳ ಘಮ ಘಮ. ಧರ್ಮನಿಷ್ಠವಾಗಿರಲು ಎಲ್ಲರನ್ನೂ ಪ್ರೇರೇಪಿಸುವ, ಅದಕ್ಕೆ ತಕ್ಕ ಪುಷ್ಟಿ ನೀಡುವ ಘಟ್ಟವೇ ಶ್ರಾವಣ. ಹಿಂದೂ ಕ್ಯಾಲೆಂಡರಿನ 5 ನೇ ತಿಂಗಳು. ವಿಕ್ರಮ ವರ್ಷದ 10 ನೇ ಮಾಸ. ಅನುದಿನವೂ ಹಬ್ಬಗಳ ಮೆರವಣಿಗೆಯೇ ಸಾಗುವ ಪರ್ವಕಾಲವಿದು. ಹಾಗಾಗಿ ಮನೆಯ ಮುಂಬಾಗಿಲಿನ ತೋರಣ ಮಾಸ ಪರ್ಯಂತ ಹಸಿರೋ ಹಸಿರು.

ಮುಗಿಲಿನ ಮೇಘಮಾಲೆಗಳೆಲ್ಲವೂ ಹತ್ತಿರದ ಗುಡ್ಡ, ಬೆಟ್ಟಗಳಿಗೆ ಬಿಗಿದಪ್ಪಿದಂತೆ ತೋರುವ ನಿಸರ್ಗ ದೃಶ್ಯ. ಕಾನನ, ಗಿರಿ ಶೃಂಗಗಳೆಲ್ಲವೂ ವರುಣನ ಸೆರಗಿನಲ್ಲಿ ಅವಿತಿಟ್ಟುಕೊಂಡಂತೆ ಭಾಸವಾಗುವ ವಾತಾವರಣ. ಎಲ್ಲಿ ನೋಡಿದರೂ ಸ್ವಚ್ಛ, ಸುಂದರ ಪರಿಸರ. ಕಾವ್ಯ ರಚನೆಗೆ ಸ್ಫೂರ್ತಿ ನೀಡುವ ನಿಸರ್ಗ ಚೆಲುವಿನ ಹಂದರವೇ ಶ್ರಾವಣ. ಭಾವಗಳು ಕವನಗಳಾಗುವ ಸಂದರ್ಭದ ಮಹತ್ವ ಎಂದರೆ ಇದು ಹರಿ-ಹರ ಇಬ್ಬರಿಗೂ ಪ್ರಿಯವಾದ ಮಾಸ. ಅಂದ ಹಾಗೆ ವಿಶ್ವಾವಸು ಸಂವತ್ಸರದಲ್ಲಿ ಜುಲೈ 25 ರಿಂದ ಆಗಸ್ಟ್ 26 ರ ವರೆಗೆ ಶ್ರಾವಣಮಾಸ ಆಚರಣೆ ಇರ ಲಿದೆ. ಇಲ್ಲಿ ಏನು ವಿಶೇಷತೆ, ವಿಭಿನ್ನತೆ ಅಡಗಿದೆ ಎಂದು ಗಮನ ಹರಿಸೋಣ.

## ಹೆಸರು ಒಂದು - ಆಚರಣೆ ಹಲವು

ಪ್ರಮುಖವಾಗಿ ಶ್ರಾವಣ ಮಾಸವು ರುದ್ರದೇವರ ಆರಾಧನೆ, ಪಾರ್ವತೀ, ಮಂಗಳಗೌರೀ, ಲಕ್ಷ್ಮೀ, ವರಮಹಾಲಕುಮಿ ಪೂಜೆಗೆ ಹೇಳಿ ಮಾಡಿಸಿದ ತಿಂಗಳು. ಕನ್ನಡ ನಾಡು ಸೇರಿದಂತೆ ಮಹಾರಾಷ್ಟ್ರ,ಗೋವಾ, ಕೇರಳ,ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಇದು ಶ್ರಾವಣ, ಬಂಗಾಳಿಯಲ್ಲಿ ಸ್ರಬನ್, ಆಸ್ಸಾಮಿನಲ್ಲಿ ಕ್ಸಾವುನ್ ಮಾಸವೆಂದೂ ಕರೆಯಲಾಗುತ್ತದೆ. ಗುಜರಾತ್ ಮತ್ತು ಗೋವಾದ ಕೆಲವು ಭಾಗಗಳಲ್ಲಿ ಶ್ರಾವಣ ಪೂರ್ಣಿಮೆಯನ್ನು ನರಳ್(ನಾರಿಯಲ್) ಪೂರ್ಣಿಮೆ ಎಂದು ಆಚರಿಸಲಾಗುತ್ತದೆ. ಸಮುದ್ರದೇವ, ವರುಣರಿಗೆ ಗೌರವದ ಸಂಕೇತವಾಗಿ ತೆಂಗಿನಕಾಯಿಯನ್ನು ಸಾಗರಕ್ಕೆ ಸಮರ್ಪಿಸಲಾಗುತ್ತದೆ. ಮಹಾರಾಷ್ಟ್ರದ ಕರಾವಳಿ, ಕೊಂಕಣದಲ್ಲಿ ಮಳೆಗಾಲದ ಸಮುದ್ರ ಶಾಂತವಾಗಲೆಂದು ನಾರೀಕೇಳ ಅರ್ಪಿಸಿ ಮೀನುಗಾರಿಕೆ ಋತುವನ್ನು ಆರಂಭಿಸುವ ಸಂಪ್ರದಾಯವಿದೆ.

## ಭರತಖಂಡದ ತುಂಬೆಲ್ಲಾ ಹಬ್ಬವೋ ಹಬ್ಬ

ಶ್ರಾವಣ ಮಾಸದಲ್ಲಿ ಒಡಿಶಾದಲ್ಲಿ ಗಮ್ಹಪೂರ್ಣಿಮೆ (ಹಸು ಮತ್ತು ಎತ್ತುಗಳ ಪೂಜೆ) ಒರಿಯಾ ಜಗನ್ನಾಥ ಸಂಸ್ಕೃತಿಯಲ್ಲಿ ಈ ದಿನ ಜೂಲನ್ ಯಾತ್ರೆ (ರಾಧಾ-ಕೃಷ್ಣರ ವಿಗ್ರಹಗಳ ಉಯ್ಯಲೆ) ಹಬ್ಬವಾಗಿ, ಛತ್ತೀಸ್‌ಗಢ ಮತ್ತು ಜಾರ್ಖಂಡ್‌ಗಳಲ್ಲಿ ಕಜರಿ ಪೂರ್ಣಿಮೆ ಹೆಸರಿನಲ್ಲಿ ಸಂಭ್ರಮಿಸಲಾಗುತ್ತದೆ. ರೈತರ ಕುಟುಂಬದಲ್ಲಿ ಗಂಡು ಮಕ್ಕಳನ್ನು ಹೊಂದಿರುವ ಮಾತೆಯರಿಗೆ ಇದು ಅಲ್ಲಿ ವಿಶೇಷ ಹಬ್ಬದ ದಿನ. ಗುಜರಾತ್‌ನಲ್ಲಿ ಪೂರ್ಣಿಮೆ ದಿನಕ್ಕೆ ಪವಿತ್ರೋಪನ ಶಿವನ ಆರಾಧನೆ ನಡೆಯಲಿದೆ. ಜಾರ್ಖಂಡ್‌ನ ದಿಯೋಘರ್‌ನಲ್ಲಿ "ಶ್ರಾವಣಿ ಮೇಳ" ಒಂದು ಪ್ರಮುಖ ಉತ್ಸವ.

ಬಿಹಾರದ ಸುಲ್ತಾನ್ ಗಂಜ್‌ನಲ್ಲಿ ಗಂಗಾ ನದಿಯಿಂದ 100 ಕಿ.ಮೀ.ಕಾಲ್ನಡಿಗೆಯಲ್ಲಿ ಪವಿತ್ರ ಜಲ ತರುವ ಸಾವಿರಾರು ಕೇಸರಿ ವಸ್ತ್ರಧಾರಿಗಳು ಧನ್ಯತೆ ಮರೆಯುತ್ತಾರೆ. ಶ್ರಾವಣವು ವಾರ್ಷಿಕ ಕನ್ವರ್ ಯಾತ್ರೆ ಸಮಯವೂ ಆಗಿದೆ. ಕನ್ವಾರಿಯಾ (ಶಿವ ಭಕ್ತರು) ಹರಿದ್ವಾರ, ಗೋಮುಖ ಮತ್ತು ಗಂಗೋತ್ರಿಯಿಂದ ಗಂಗಾ ನೀರನ್ನು ತರಲು ಮಾಡುವ ವಾರ್ಷಿಕ ತೀರ್ಥಯಾತ್ರೆಯಾಗಿದೆ. ಶ್ರವಣ ನಕ್ಷತ್ರ ವಿಷ್ಣುವಿನ ಜನ್ಮನಕ್ಷತ್ರ. ಶ್ರಾವಣ ಹುಣ್ಣಿಮೆ ಶ್ರವಣನಕ್ಷತ್ರ ಬರುವುದರಿಂದ ಇಡೀ ಮಾಸಕ್ಕೆ ಪವಿತ್ರತೆ ಬಂತು ಎನ್ನುತ್ತಾರೆ ಶಾಸ್ತ್ರಕಾರರು ಕೇರಳದಲ್ಲಿ 'ಶ್ರಾ' ಮೌನವಾಗಿ **'ವಣಂ'** ಮಾತ್ರ ಉಳಿಯಿತು. ಅದು ಅನಂತಶಯನನಾದ

ವಿಷ್ಣುವಿನ ನಕ್ಷತ್ರವಾಗಿ **‘ತಿರುಓಣಂ’** ರೂಪ ಪಡೆಯಿತು. ಬಲಿ ಚಕ್ರವರ್ತಿ ಮತ್ತು ವಿಷ್ಣುವಿನ ವಾಮನಾವತಾರದ ಕತೆಯೂ ಇದರೊಂದಿಗೆ ಮಿಳಿತಗೊಂಡಿದೆ ಎಂಬುದು ಗಮನಾರ್ಹ. ಒಟ್ಟಾರೆ ಶ್ರಾವಣ ಎಂಬುದು ಸಮಸ್ತ ಭಾರತೀಯರಿಗೆ ವಿವಿಧ ಕಲ್ಪನೆ, ಕಟ್ಟಣೆ, ಹೆಸರು, ಆಚರಣೆಗಳ ಮೂಲಕ ದೇವತಾರಾಧನೆ ಮಾಡುವ, ಸಾರ್ಥಕ್ಯ ಮೆರೆಯುವ ಮುಖ್ಯ ಪರ್ವವಾಗಿದೆ.

### ಜೀವನೋತ್ಸಾಹಕ್ಕೆ ಪ್ರಮುಖ ರೂಪಕ:

ಶ್ರಾವಣವೆಂದರೆ ಪ್ರಸನ್ನ ಚಿತ್ತದ ಭಕ್ತಿಯ ಸೋಪಾನ. ಪುರಾಣ, ಪುಣ್ಯಕಥೆ ಮೂಲಕ ಸಾತ್ವಿಕ ಮಾತುಗಳ ಶ್ರವಣದ ಕಾಲ. ಯತಿಗಳು, ಸಾಧು -ಸಂತರು ಚಾತುರ್ಮಾಸ್ಯ ಅಂಗವಾಗಿ ಒಂದೆಡೆ ನೆಲೆಸುವ ಕಾಲ. ಇದು ಸಾಲು ಸಾಲು ಸಂಭ್ರಮದ ಮಾಸ. ಆಷಾಢದ ಬೇಸರ ಮರೆಸುವ ಉತ್ಸಾಹದ ಹೆಬ್ಬಾಗಿಲು.

ಶ್ರಾವಣವೆನ್ನುವುದು ನಮ್ಮ ಮನಸ್ಸಿನ ಹಿತಕ್ಕೆ ನಮ್ಮ ಅಭಿರುಚಿಯ ಅನನ್ಯತೆಗೆ ಮತ್ತು ಜೀವನೋತ್ಸಾಹಕ್ಕೆ ಪ್ರಮುಖ ರೂಪಕ. ಶ್ರಾವಣ ಎಂದರೆ ಇದು “ವಸುಂಧರೆಯ ಮಧುಮಾಸ” ಎಂದೇ ಕವಿಗಳು ಬಣ್ಣಿಸಿದ್ದಾರೆ. ಮಳೆಯ ತುಷಾರ ಸಿಂಚನ, ತುಂಬಿ ಹರಿಯುವ ನದಿ, ತೊರೆಗಳ ಜುಳುಜುಳು ನಿನಾದ, ಸಂಪಿಗೆ, ಕೇದಿಗೆ, ಸೇವಂತಿಗೆ ಸುಮಧುರ ಪರಿಮಳ,ಭೂರಮೆಗೆ ಹೊಸ ಹಸಿರು ಉಡುಗೆ ಉಟ್ಟು ನಲಿಯುವ ಸಂದರ್ಭವು ಹಲವು ಬಾರಿ ವರ್ಣನೆಗೂ ನಿಲುಕದ್ದು.

ಮುಂಬಾಗಿಲಿಗೆ ಹಸಿರು ತೋರಣ, ಅಂಗಳದಲ್ಲಿ ರಂಗೋಲಿ ಚಿತ್ತಾರ, ಮನೆಯೊಳಗೆ ವಿಶೇಷ ಪೂಜೆ, ಘಂಟಾನಾದ ಘಮ ಘಮಿಸುವ, ಬಾಯಲ್ಲಿ ನೀರೂರಿಸುವ ಅಡುಗೆ ಮನೆ ಖಾರ-ಸಿಹಿ ಖಾದ್ಯಗಳು ಮುದ ನೀಡುತ್ತಲೇ ಭೀಮನ ಅಮಾವಾಸ್ಯೆಯ ಶ್ರಾವಣಕ್ಕೆ ಮುನ್ನುಡಿ ಬರೆಯುತ್ತದೆ. ಪೂರ್ಣ ಪುಣ್ಯಾವತಾರವೆಂಬ ಹೆಗ್ಗಳಿಕೆಗೆ ಪಾತ್ರನಾದ ಕೃಷ್ಣ ಪರಮಾತ್ಮ ಅವತಾರ ತಾಳಿದ್ದು ಈ ಮಾಸದಲ್ಲೇ.


ಶಿವನ ಪೂಜೆಗೆ ಮಾಸಪೂರ್ಣ ಮಹತ್ವ. ಹಾಗಾಗಿ ಇದು ಹರಿ-ಹರ ಸಮನ್ವಯ ಮಾಸವೆಂದೂ ಖ್ಯಾತಿ ಪಡೆದಿದೆ. ಪೂಜೆ, ಆಚರಣೆ, ಅನುಷ್ಠಾನಗಳನ್ನು ಪ್ರಾಚೀನರು ಸೂಚಿಸಿರುವ ಶ್ರಾವಣವು ಕರ್ಮಗಳನ್ನು ಕಳೆದುಕೊಳ್ಳಲು ಪ್ರಶಸ್ತ ಕಾಲ. ಇದನ್ನು ಜ್ಯೋತಿಷ್ಯ ಶಾಸ್ತ್ರವೂ ಪುಷ್ಟೀಕರಿಸಿದೆ. ಇದು ಭಕ್ತಿ, ಆಧ್ಯಾತ್ಮಿಕತೆ,ಆತ್ಮ ಶಕ್ತಿ ಮತ್ತು ಸ್ವಾವಲಂಬನೆಯ ಸಂಕೇತವಾಗಿದೆ. ದೋಷರಾಶಿಗಳನ್ನು ಶುದ್ಧಿಗೊಳಿಸಲು ಮತ್ತು ಆತ್ಮಿಕ ಶಕ್ತಿಯನ್ನು ವೃದ್ಧಿಸಲು ಮಾಸದ ಸಂಪ್ರದಾಯ, ಆಚರಣೆಗಳು ಸಹಾಯಕವಾಗಿದೆ.

### ಹೊಸದಾಗುವ ಪ್ರಕ್ರಿಯೆಯೇ ಇಲ್ಲಿ ಹೂರಣ

ಆಧ್ಯಾತ್ಮಿಕ ಪರ್ವಗಳಷ್ಟೇ ಅಲ್ಲದೆ ಅವಿತರ ಹೋರಾಟ ತ್ಯಾಗ, ಬಲಿದಾನಗಳನ್ನು ಸ್ಮರಿಸುವ ಸ್ವಾತಂತ್ರ ದಿನವೂ ಶ್ರಾವಣದಲ್ಲೇ ಇದೆ. ಇಂದು ನಾವೆಲ್ಲರೂ ನಿರುಮ್ಮಳವಾಗಿರುವಂತೆ ದೇಶವನ್ನು ಭದ್ರವಾಗಿರಿಸಲು ನೆತ್ತರನ್ನೇ ಹರಿಸಿದ ಹುತಾತ್ಮರ ಸ್ಮರಣೆ ಇಲ್ಲಿ ಬರುತ್ತದೆ. ಸಾಮಾಜಿಕ ಜೀವನದ ಸೊಬಗಿನಲ್ಲಿ ಮಾನವೀಯತೆಯೇ ಪ್ರಧಾನವಾಗಬೇಕು ಎನ್ನುವ ಆಶಯ ಬಿತ್ತಿದ ಮಹರ್ಷಿ ಅರವಿಂದರ ಜನ್ಮದಿನವೂ ಇದೇ ಮಾಸದಲ್ಲಿದೆ. ಶ್ರಾವಣದ ಎಲ್ಲ ಆಚರಣೆಗಳಲ್ಲಿ ವನಿತೆಯರ ಅಂತರಂಗ ತೆರೆದು ಕೊಳ್ಳುತ್ತದೆ. ಪ್ರತಿ ಶ್ರಾವಣದಲ್ಲೂ ಹೆಣ್ಣು ಹೊಸಬಳಾಗಲು ಪ್ರಧಾನ ವೇದಿಕೆಯನ್ನೇ ನಿಸರ್ಗ ರೂಪಿಸಿದೆ ಎನ್ನುತ್ತಾರೆ ಹಿರಿಯರು. ಇವುಗಳು ಸಮುದಾಯಗಳೊಂದಿಗೆ ಬಾಂಧವ್ಯ ಬೆಸೆಯುತ್ತದೆ. ಪ್ರತಿ ವರುಷವೂ ಹೀಗೆ ಹೊಸದಾಗುವ ಪ್ರಕ್ರಿಯೆಯೇ ಶ್ರಾವಣದ ಹೂರಣವಾಗಿದೆ.

### ಕರ್ಕಾಟಕದಿಂದ ಸಿಂಹರಾಶಿಗೆ ಸೂರ್ಯನ ಸಂಚಾರ

ಖಗೋಳ ಶಾಸ್ತ್ರದ ಪ್ರಕಾರ, ಶ್ರಾವಣ ಮಾಸ ಎಂದರೆ ಇದು ಸೂರ್ಯನು ಕರ್ಕಾಟಕ ರಾಶಿಯಿಂದ ಸಿಂಹರಾಶಿಗೆ ಸಂಚರಿಸುವ ಸುಸಮಯ. ಈ ಸಂಚಾರವು ಸೂರ್ಯನ ಪ್ರಭಾವವನ್ನು ಉಜ್ವಲಗೊಳಿಸುತ್ತದೆ. ಇದು ಈ ರಾಶಿಯವರಿಗೆ ಧೀ ಶಕ್ತಿ, ಸ್ವಾವಲಂಬನೆ, ಸಾಹಸ ಮತ್ತು ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಸ್ಫುರಣೆ ನೀಡುತ್ತದೆ. ಶ್ರಾವಣಮಾಸದಲ್ಲಿ ಜನಿಸಿದವರು ಸಾಮಾನ್ಯವಾಗಿ ಸಮಚಿತ್ತ ಉಳ್ಳವರಾಗಿರುತ್ತಾರೆ. ಧೈರ್ಯವಂತರು ಮತ್ತು ಸ್ವಸಾಮರ್ಥ್ಯ ಉಳ್ಳವರಾಗಿರುತ್ತಾರೆ ಎನ್ನುತ್ತದೆ ಜ್ಯೋತಿಷ್ಯಶಾಸ್ತ್ರ, ಶಿವನ ಆರಾಧನೆ, ಲಿಂಗಕ್ಕೆ







ಜಲಾಭಿಷೇಕ, ಕ್ಷೀರಾಭಿಷೇಕ ಮಾಡುವುದರಿಂದ ಎಲ್ಲ ರೀತಿಯ ಆರೋಗ್ಯ ಸಮಸ್ಯೆ ದೂರವಾಗಲಿದೆ. ಹಾಲು ಭಕ್ತರ ಮನಸ್ಸು, ದೇಹ ಮತ್ತು ಆತ್ಮವನ್ನು ಶುದ್ಧೀಕರಿಸಲು ಪ್ರೇರಕವಾಗುತ್ತದೆ ಎಂಬುದು ನಂಬಿಕೆ. ಈ ಮಾಸ ಪರ್ಯಂತ ಈಶ್ವರನಿಗೆ ಬಿಲ್ವಪತ್ರೆ ಸಮರ್ಪಣೆ, ರುದ್ರ, ಚಮಕಪಠಣ ಮತ್ತು ರುದ್ರಜಪಗಳಿಂದ ಅನೇಕ ದೋಷ ನಿವಾರಣೆಯಾಗುತ್ತದೆ ಎನ್ನುತ್ತಾರೆ ಜ್ಯೋತಿಷ್ಕರು.

**ರಕ್ಷಾಬಂಧನ - ಭಾತೃತ್ವದ ಸಂಕೇತ**

ಶ್ರಾವಣ ಮಾಸದ ಹುಣ್ಣಿಮೆ ಒಂದು ಸಾರ್ವತ್ರಿಕ ಆಚರಣೆ ಮೂಲಕ (ಆ. 9 ) ಗಮನ ಸೆಳೆಯಲಿದೆ. ಅದುವೇ ರಕ್ಷಾಬಂಧನ.

ಭಾರತ ಮತ್ತು ನೇಪಾಳದಲ್ಲಿ ಈ ಆಚರಣೆಯ ಸಹೋದರತ್ವದ, ಬಂಧುತ್ವದ ಬಹು ದೊಡ್ಡ ಸಂಕೇತವಾಗಿದೆ. ಇದಕ್ಕೆ ತನ್ನದೇ ಆದ ಇತಿಹಾಸವೂ ಇದೆ. ಹಾಗಾಗಿ ಇದಕ್ಕೊಂದು ಸಾಮಾಜಿಕ ಆಮಾಯವೂ ದೊರಕಿದೆ. ಮಹಾರಾಷ್ಟ್ರ, ಗೋವಾ, ಆಂಧ್ರ, ತಮಿಳುನಾಡು, ಕರ್ನಾಟಕ ಮತ್ತು ಒಡಿಶಾ ಸೇರಿದಂತೆ ಹಲವು ರಾಜ್ಯಗಳಲ್ಲಿ ಅಂದು ಉಪಾಕರ್ಮದ (ನೂತನ ಜನಿವಾರ ಧಾರಣೆ) ಆಚರಣೆ ನಡೆಯಲಿದೆ. ಕೇರಳದ ಪ್ರಾಂತ್ಯದಲ್ಲಿ ಇದನ್ನು ಅವನಿಅವಿಟ್ಟಂ ಎನ್ನುತ್ತಾರೆ. ಉಪಾಕರ್ಮ-ರಕ್ಷಾಬಂಧನ ಒಂದೇ ದಿನವಾದರೂ ಎರಡರ ನಡುವೆ ಸಾಮ್ಯತೆ - ಭಿನ್ನತೆ ಕಂಡು ಬರುತ್ತದೆ. ಒಂದು



ಜ್ಞಾನಶುದ್ಧಿ (ವೇದಾಧ್ಯಯನಕ್ಕೆ ಜ್ಞಾನೇಂದ್ರಿಯಕ್ಕೆ ಉಪಕ್ರಮಿಸುವುದು) ಇನ್ನೊಂದು ಭಾವ ಸಂಬಂಧಿ. ರಾಖಿಕಟ್ಟುವುದು, ಯಜ್ಞೋಪವೀತ ಧರಿಸುವುದು, ಎರಡೂ ನೂಲಿನ ನಂಟಿನ ಮೂಲಕ ಹೃದಯ ಸಂಬಂಧಿ ಪ್ರೇರೇಪಣೆಗೆ ಮಹತ್ವ ನೀಡಿದೆ. ಎಂಬುದೇ ಬಹು ವಿಶೇಷ. ವಿಶ್ವದ ಯಾವುದೇ ದೇಶದಲ್ಲಿ ಈ ಆಚರಣೆ ಕಂಡು ಬರಲಾರದು. ಅದಕ್ಕಾಗಿಯೇ ಭರತ ಭೂಮಿ ವಿಶಿಷ್ಠ ಎನಿಸಿದೆ.

**ಕೃಷ್ಣಜನ್ಮಾಷ್ಟಮಿ :**

ಯುಗ ಪ್ರವರ್ತಕ, ಲೋಕ ಗುರುವಾದ ಕೃಷ್ಣನ ಅವತಾರ ಆಗಿದ್ದೂ ಶ್ರಾವಣದಲ್ಲೇ (ರೋಹಿಣಿನಕ್ಷತ್ರ). ದ್ವಾಪರಕ್ಕೆ ಬಹು ದೊಡ್ಡ ಮೌಲ್ಯ ತಂದು ಕೊಟ್ಟ ಭಗವಂತ ಇಂದಿಗೂ ವಿಶ್ವ ನಾಯಕನೇ ಆಗಿದ್ದಾನೆ.

ಗೀತಾಚಾರ್ಯನ ವಿರಾಟ್ ದರ್ಶನದ ಸಾರವನ್ನು ನಮ್ಮದಾಗಿಸಿಕೊಂಡು ಬದುಕನ್ನು ಪಾವನಗೊಳಿಸಿಕೊಳ್ಳುವುದೇ ಜನ್ಮಾಷ್ಟಮಿ. ಮರು ದಿನದ ಲೀಲೋತ್ಸವದ ಸಂಭ್ರಮವು ಮೂರ್ಧನ್ಯಕ್ಕೆ ಏರುವ ಕಾಲಘಟ್ಟ. ಜೀವನವನ್ನು ಸಂತೋಷದಿಂದ ಕಳೆಯಬೇಕೆಂಬ ಸಂದೇಶ ಇಲ್ಲಿದೆ.

**ರಾಯರ ಆರಾಧನೆ:**

ಕಲಿಯುಗದಲ್ಲಿ ಭಜಿಸಿದವರಿಗೆ ಕಲ್ಪವೃಕ್ಷವಾಗಿ, ನಮಿಸಿದವರಿಗೆ ಕಾಮಧೇನುವಾಗಿ, ಭಕ್ತ -ಶಿಷ್ಯ ಕೋಟಿಯನ್ನು ಉದ್ಧರಿಸಿದ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ ಶ್ರಾವಣದಲ್ಲಿ ಹೊಸ ಸಂಚಲನವನ್ನೇ ಮೂಡಿಸುತ್ತದೆ. ಶ್ರಾವಣ ಶನಿವಾರಗಳಂತೂ ತಿರುಮಲದ ಒಡೆಯ ಶ್ರೀವೆಂಕಟೇಶನಿಗೆ ವಿಶ್ವಾದ್ಯಂತ ನಮಿಸುವ ದಿನಗಳು.

ಅಂದು ತಿಮ್ಮಪ್ಪನ ಒಕ್ಕಲಿನವರು ಶ್ರೀರಂಗನಾಥ ಮತ್ತು ಶ್ರೀನರಸಿಂಹನ ಆರಾಧಕರುಗಳು ಬೇಡಿ ತಂದ ದ್ರವ್ಯಗಳನ್ನು ನೈವೇದ್ಯಮಾಡಿ, ಪ್ರಸಾದವಾಗಿ ಸ್ವೀಕರಿಸುವ ದಿನ ಮನೆ ಮನೆಗೆ ತೆರಳಿ ಛತ್ರ (ಪಡಿ ) ಬೇಡುವ ಸಂಪ್ರದಾಯವಿದೆ. ಈ ಸಂಪ್ರದಾಯ ಹಲವು ಮನೆಮನೆತನದಲ್ಲಿ ಇಂದಿಗೂ ಚಾಲನೆಯಲ್ಲಿದೆ.

ಶ್ರಾವಣ ಹೀಗೆ ತಿಂಗಳು ಪೂರ್ತಿ ವೈವಿಧ್ಯಮಯ ಆಚರಣೆಗಳಲ್ಲಿ ಸಂಭ್ರಮಿಸುತ್ತದೆ.

# ಹಿಮವಚ್ಛೋದಿತ ಹಿಮವದ್ ಗೋಪಾಲಸ್ವಾಮಿ ದೇವಾಲಯ

**ಕರ್ನಾಟಕ ವೈಷ್ಣವ ದೇವಾಲಯಗಳು**

**57**



– ಕೆಂಗೇರಿ ಚಕ್ರಪಾಣಿ
94483 86886

ಅತೀ ಸುಂದರ ಪಶ್ಚಿಮಘಟ್ಟಗಳ ಶ್ರೇಣಿ, ವರ್ಷದ ಬಹು ಕಾಲ ಹಿಮದಿಂದಾವೃತವಾದ ಸದಾ ಹಸಿರುಕಾನನಗಳಿಂದ ಕೂಡಿದ ಬೆಟ್ಟಗಳ ಸಾಲು, ಆನೆ, ಜಿಂಕೆ, ನವಿಲು ಮೊದಲಾದ ವನ್ಯ ಜೀವಿಗಳ ಸ್ವಚಂದ ವಿಹಾರ,ಬೆಟ್ಟಗಳ ನಡುವೆ ಮನೋಹರವಾದ ಕನ್ನಡ ನಾಡಿನ ಸುಪ್ರಸಿದ್ಧ ದೇವಾಲಯ ಹಿಮವದ್‌ಗೋಪಾಲಸ್ವಾಮಿ ದೇವಾಲಯವಿದೆ. ಗೋಪಾಲ ಸ್ವಾಮಿ ದೇವಾಲಯವು ಬಂಡಿಪುರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದು, ನೀಲಗಿರಿ ಜೈವಿಕವಲಯದ ವ್ಯಾಪ್ತಿ ಯಲ್ಲಿ ಬರುವ ನಿಸರ್ಗ ರಮಣೀಯ ಸ್ಥಳ. ಇದು ಚಾಮರಾಜ ನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿದ್ದು, ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿನಲ್ಲಿರುವ ಸುಂದರಾತಾಣ ಸಮುದ್ರ ಮಟ್ಟಕ್ಕಿಂತ 1446 ಅಡಿ ಎತ್ತರವಿದೆ. ಹಿಮವ ದ್ಗೋಪಾಲಸ್ವಾಮಿ ಬೆಟ್ಟದಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯವು ಒಂದು ಗುಡ್ಡದ ಮೇಲಿದ್ದು ಪ್ರವೇಶಿಸಲು ಮೆಟ್ಟಿಲುಗಳಿವೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಹಾಗೂ ಪ್ರವೇಶ ದ್ವಾರಗಳನ್ನು ಹೊಂದಿದೆ. ದೇವಾಲಯದ ಸುತ್ತಲೂ ರಕ್ಷಣಾ ಗೋಡೆ ಯಿದೆ. ಏಕಕೂಟ ದೇವಾಲಯವಾಗಿರುವ ವೇಣುಗೋಪಾಲ ಸ್ವಾಮಿಯ ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾ ಪಥವಿದೆ. ದೇವಾಲಯವು ಮೂಲತಃ ಹದಿಮೂರನೆಯ ಶತ ಮಾನಕ್ಕೆ ಸೇರುವ ಹೊಯ್ಸಳರ ಕಾಲದಾಗಿದ್ದು ನಂತರ ಮೈಸೂರು ಒಡೆಯರ ಕಾಲದಲ್ಲಿ ವಿಸ್ತರಿಸಲಾಗಿದೆ.

**ಮನಮೋಹಕ ವೇಣುಗೋಪಾಲ :**

ಈ ದೇವಾಲಯದ ಗರ್ಭಗುಡಿಯಲ್ಲಿರುವ ವೇಣು ಗೋಪಾಲಕೃಷ್ಣ ಸ್ವಾಮಿಯ ಮೂರ್ತಿಯು ಹೊಯ್ಸಳ ಶೈಲಿಯಲ್ಲಿರುವ ಸೊಗಸಾದ ಮೂರ್ತಿ, ಕಿರೀಟಮಕುಟವನ್ನು ಸ್ವಾಮಿಯು ಧರಿಸಿದ್ದು, ತನ್ನ ಎರಡೂ ಕೈಗಳಲ್ಲಿಯೂ ವೇಣು ವನ್ನು ನುಡಿಸುತ್ತಿರುವ ಭಂಗಿಯಲ್ಲಿದೆ. ತಮಾಲ ವೃಕ್ಷದ ಕೆಳಗೆ ಕತ್ತರಿಕಾಲನ್ನು ಹಾಕಿಕೊಂಡು ನಿಂತಿರುವ ಹಸನ್ಮುಖಿ ಮೂರ್ತಿಯು ಐದು ಅಡಿ ಎತ್ತರವಿದೆ. ವೇಣುಗೋಪಾಲನಿಗೆ ತೊಡಿಸಿರುವ ಕೈಕಡಗ, ಭುಜ ಕೀರ್ತಿ,ಕಾಲ್ಕಡಗ, ಕೊರಳಿಗೆ ಧರಿಸಿರುವ ಹಾರ ನಡುಪಟ್ಟಿ ಉತ್ತರೀಯ ಬಹಳ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ಆಕರ್ಷಕವಾಗಿವೆ. ದೇವನ ಸುತ್ತಲೂ ಗೋಪಾಲಕರು, ಗೋಪಿಕಾಸ್ತ್ರೀಯರು, ಮುರಳಿಯ ನಾದಕ್ಕೆ ತನ್ಮಯವಾಗಿ ತಲೆಯೆತ್ತಿ ಆಲಿಸುತ್ತಿರುವ ಗೋವುಗಳು



ನೈಜವಾಗಿ ಮೂಡಿ ಬಂದಿದೆ.ಸ್ವಾಮಿಯ ಪಾದದ ಬಳಿ ದೇವನ ಪತ್ನಿಯರಾದ ರುಕ್ಮಿಣಿ ಸತ್ಯಭಾಮರಿರುವರು.

ಈ ದೇವಾಲಯದ ಗರ್ಭಗುಡಿಯಲ್ಲಿ ಸದಾ ಹಿಮದ ಬಿಂದುಗಳ ಕಂಡು ಬರುತ್ತದೆ. ವೇಣುಗೋಪಾಲಸ್ವಾಮಿಯ ಶಿರದ ಮೇಲೆ ಹಿಮಬಿಂದುವಿನ ಪವಿತ್ರ ಜಲದ ಅಭಿಷೇಕ ವಾಗುವುದು ವಿಸ್ಮಯಮೂಡಿಸುತ್ತದೆ. ಗರ್ಭಗುಡಿಯ ಬಾಗಿಲು ವಾಡದಲ್ಲಿ ಸದಾ ಸಂಗ್ರಹವಾಗುವ ಹಿಮದ ನೀರನ್ನು ಬರುವ ಭಕ್ತರಿಗೆ ಅಲ್ಲಿಯ ಅರ್ಚಕರು ಪ್ರೋಕ್ಷಿಸುವುದು ನಿಜಕ್ಕೂ ಸೋಜಿಗ ಮೂಡಿಸುತ್ತದೆ. ಇದು ಒಂದು ವಿಶೇಷ ಅನುಭೂತಿ ಯನ್ನು ನೀಡುತ್ತದೆ.

**ಸ್ಥಳಪುರಾಣ :**

ಪುರಾಣಗಳಲ್ಲಿ ಗೋಪಾಲಸ್ವಾಮಿ ಬೆಟ್ಟವನ್ನು ಕಮಲಾದ್ರಿ, ದಕ್ಷಿಣಗೋವರ್ಧನಗಿರಿ ಎಂದು ಕರೆದಿದ್ದು ಗರ್ಭಗುಡಿ ಯಲ್ಲಿರುವ ವೇಣುಗೋಪಾಲಸ್ವಾಮಿಯನ್ನು ಅಗಸ್ತ್ಯ ಮಹಾ ಮುನಿಗಳು ಪ್ರತಿಷ್ಠಾಪಿಸಿರುವರೆಂದು ಪ್ರತೀತಿ. ಪುರಾಣ ಕಾಲ ದಲ್ಲಿ ಹಿಮಾಲಯದಲ್ಲಿ ಜರುಗುವ ಗಿರಿಜಾ ಮತ್ತು ಪರಶಿವನ ಕಲ್ಯಾಣ ಸಮಾರಂಭಕ್ಕೆ ದೇವಾನುದೇವತೆಗಳೆಲ್ಲ ಹೋಗು ತ್ತಾರೆ. ಆಗ ದಕ್ಷಿಣ ಭಾರತದ ಪ್ರದೇಶವು ತನ್ನ ಸಮತೋಲ ವನ್ನು ಕಳೆದುಕೊಳ್ಳುತ್ತದೆ. ಅಗಸ್ತ್ಯರು ಕೃಷ್ಣ ಪರಮಾತ್ಮನನ್ನು ಧ್ಯಾನಿಸಿ, ಇಲ್ಲಿ ಬಂದು ನೆಲಸಲು ಪ್ರಾರ್ಥಿಸುವರು. ಕೃಷ್ಣ ಸ್ವಾಮಿಯ ಅಪೇಕ್ಷಯಂತೆ ರುಕ್ಮಿಣಿ ಸತ್ಯಭಾಮೆ ಸಹಿತರಾಗಿ ಪರಿವಾರದವರೆಲ್ಲ ನೆಲೆಸಿ, ಹಿಮಾಲಯದಲ್ಲಿರುವಂತೆ ಸದಾ ಕಾಲ ಹಿಮದಿಂದ ಕೂಡಿರಬೇಕೆಂದು ಪರಮಾತ್ಮನು ಇಂಗಿತ ವನ್ನು ವ್ಯಕ್ತಪಡಿಸಿದಾಗ, ಅಗಸ್ತ್ಯರು ಅದೇ ರೀತಿಯಾಗಿ ದೇವನ ವಿಗ್ರಹವನ್ನು ಪ್ರತಿಷ್ಠಾಪಿಸಿದರೆಂದು ಸ್ಥಳ ಪುರಾಣದಲ್ಲಿ ತಿಳಿದು ಬರುತ್ತದೆ. ಯಾವ ಅಂಗಡಿ ಮುಂಗಟ್ಟುಗಳ ಗೌಜು ಗದ್ದಲಗಳೂ ಇಲ್ಲದ ಈ ಪ್ರಶಾಂತವಾದ ಪರಿಸರದಲ್ಲಿ ಸಪ್ತರ್ಷಿಗಳು ಬಂದು ಸ್ವಾಮಿಯನ್ನು ಆರಾಧಿಸುವರೆಂದು ಪ್ರತೀತಿ.

**ದೇವಾಲಯದ ಸಂಸ್ಥಾಪಕ ಹೊಯ್ಸಳ ದಂಡನಾಯಕ ಮಾಧವ :**

ಗೋಪಾಲಸ್ವಾಮಿ ದೇವಾಲಯವನ್ನು ಹೊಯ್ಸಳ ದೊರೆ ಮೂರನೆಯ ಬಲ್ಲಾಳನ ದಂಡಾಧಿಕಾರಿ ಮಾಧವದಂಡ ನಾಯಕನು ನಿರ್ಮಿಸಿರುವುದಕ್ಕೆ ಬೆಟ್ಟದ ಕೆಳಗಿರುವ ಗ್ರಾಮ ವಾದ ಕಣ್ಣೇಗಾಲದಲ್ಲಿ ದೊರತಿರುವ ಶಾಸನದಲ್ಲಿ ದಾಖಲೆ ಸಿಗುತ್ತದೆ.

ಮಾಧವದಂಡನಾಯಕನ ತಂದೆ ಸುಪ್ರಸಿದ್ಧ ಪೆರುಮಾಳೆದಂಡನಾಯಕ. ಪರಮ ವೈಷ್ಣವನಾದ ಪೆರುಮಾಳೆಯು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನ ಆದಿ ಮಾಧವ ದೇವಾಲಯವು ಪ್ರಮುಖವಾದುದು. ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತಿದ್ದ ಇವನು ಬೆಳ್ಳೂರಿನಲ್ಲಿ ವೇದಾಧ್ಯಯನಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿದ್ದ. ಮೊದಕುಲ ವಂಶಕ್ಕೆ ಸೇರಿದ ಪೆರುಮಾಳೆಯ ಮೂಲ ಸ್ಥಳ ನಂಜನಗೂಡು ತಾಲ್ಲೂಕಿನ ಹೆಡತಲೆ. ಪೆರುಮಾಳೆಯ ಮಗ ಮಾಧವನಿಗೆ ಸಿತಗರಗಂಡ, ಕದನಪ್ರಚಂಡ, ಶರಣಾಗತವಜ್ರ ಪಂಜರ, ಹೊಯ್ಸಳ ರಾಜ್ಯಲಕ್ಷ್ಮೀ ಪ್ರಾಕಾರ ಮುಂತಾದ ಬಿರುದುಗಳಿದ್ದವು. ಇವನು ತೆರಕಣಾಂಬಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದಾಗ ಶಕವರ್ಷ 1238ನೆಯ ರಾಕ್ಷಸ ನಾಮ ಸಂವತ್ಸರದ ಚೈತ್ರ ಬಹುಳ ಸೋಮವಾರ ಅಶ್ವಿನಿ ನಕ್ಷತ್ರದ ಪುಣ್ಯಕಾಲದಲ್ಲಿ (ಸಾ.ಶ. 04-04-1315 ಕ್ಕೆ ಸರಿ ಹೊಂದುತ್ತದೆ) ಗೋವರ್ಧನಗರಿಯಲ್ಲಿ ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿ, ಕಣ್ಣೇಗಾಲಗ್ರಾಮದ ಆದಾಯವನ್ನು ದೇವರ ಸೇವಾಕೈಂಕರ್ಯಕ್ಕೆ ನೀಡಿರುವ ಮಾಹಿತಿ ಶಾಸನ ದಲ್ಲಿ ಲಭ್ಯವಿದೆ.

ಗೋಪಾಲಸ್ವಾಮಿ ಬೆಟ್ಟದಲ್ಲಿ 77 ಕೊಳಗಳಿವೆ. ಹಂಸ ತೀರ್ಥ, ವನಮಾಲತೀರ್ಥ, ಪಾಪನಾಶಿನಿ ಕೊಳ, ಸಂತಾನ ತೀರ್ಥ (ತೊಟ್ಟಿಲು ತೀರ್ಥ) ಸಾರಂಗತೀರ್ಥ ಶಂಖ,ಚಕ್ರ,ಗದಾ ತೀರ್ಥ ಮುಂತಾದ ತೀರ್ಥಗಳಿವೆ. ಸಂತಾನವಿಲ್ಲದವರು ಸಂತಾನತೀರ್ಥದಲ್ಲಿ ಮಿಂದು ಗೋಪಾಲಸ್ವಾಮಿಯನ್ನು ದರ್ಶಿಸಿದರೆ ಸಂತಾನಪ್ರಾಪ್ತಿಯಾಗುವುದೆಂದು ಪ್ರತೀತಿ. ಹೀಗಾಗಿ ಸ್ವಾಮಿಯನ್ನು ಸಂತಾನ ಗೋಪಾಲಕೃಷ್ಣ ಎಂತಲೂ ಕರೆಯುವರು. ಹಂಸತೀರ್ಥದ ಬಳಿಯಿರುವ

ಶಾಸನದಲ್ಲಿ ಈ ಕೊಳದಲ್ಲಿ ಮಿಂದು ಕಾಗೆ ಹಂಸವಾಯಿತು ಎಂದಿದೆ. ಈ ಕಾರಣದಿಂದಲೆ ಬೆಟ್ಟದಲ್ಲಿ ಈಗಲೂ ಕಾಗೆಗಳು ಕಾಣಸಿಗುವುದಿಲ್ಲ.

ಬೆಟ್ಟದಸುತ್ತಲೂ ಕೋಟೆಯ ಅವಶೇಷಗಳನ್ನು ಕಾಣಬಹುದು. ಇಲ್ಲಿ ಕೋಟೆ ಸೀಮೆ ಎಂಬ ಪಾಳೆಯಪಟ್ಟು 16-17 ನೆಯ ಶತಮಾನದಲ್ಲಿ ಆಡಳಿತ ನಡೆಸಿದ್ದರು. ಅವರುಗಳಲ್ಲಿ ಪ್ರಮುಖರು ಇಮ್ಮಡಿರಾಜಒಡೆಯ, ನಂಜರಾಜಒಡೆಯ, ಮಾಧವನಾಯಕ, ಲಿಂಗರಾಜ ಒಡೆಯ ಮುಂತಾದವರನ್ನು ಹೆಸರಿಸಬಹುದು.


**ವಾರ್ಷಿಕ ರಥೋತ್ಸವ :**

ಹಿಮವದ್ ಗೋಪಾಲಸ್ವಾಮಿಯ ಬ್ರಹ್ಮ ರಥೋತ್ಸವವು ಪಾಲ್ಗುಣಮಾಸದಲ್ಲಿ ಬರುವ ಶ್ರವಣ ನಕ್ಷತ್ರದಲ್ಲಿ ಪಾಂಚರಾತ್ರಾಗಮ ರೀತ್ಯಾ ಬಹು ವೈಭವವಾಗಿ ಏಳುದಿನಗಳ ಕಾಲ ನೆರವೇರುತ್ತದೆ. ಉತ್ಸವದ ಅಂಗವಾಗಿ ಮೊದಲನೆಯ ದಿನ ಪಂಚಾಮೃತ ಅಭಿಷೇಕ ಅಂಕುರಾರ್ಪಣೆ, ಗರುಡ ಪ್ರತಿಷ್ಠೆ.. ರಕ್ಷಾಬಂಧನ ದ್ವಿತೀಯ ದಿನ ಧ್ವಜಾರೋಹಣ, ಭೇರಿತಾಡನ, ಯಾಗಶಾಲ ಪ್ರವೇಶ, ತೃತೀಯ ದಿನ ಕಾಶಿಯಾತ್ರ ಉತ್ಸವ ಸ್ವಾಮಿಗೆ ಕಲ್ಯಾಣೋತ್ಸವ, ನಾಲ್ಕನೆಯ ದಿನ ಅದ್ದೂರಿಯ ಬ್ರಹ್ಮ ರಥೋತ್ಸವ,ಪಂಚಮಿದಿನ ಗರುಡೋತ್ಸವ, ಶಯನೋತ್ಸವ, ಆರನೆಯ ದಿನ ಅವಭೃತಸ್ನಾನ, ಪೂರ್ಣಹುತಿ ಕೊನೆಯ ದಿನ ಅಂದರೆ ಏಳನೆಯ ದಿನ ಮಹಾಭಿಷೇಕ ದ್ವಾದಶಾರಾಧನೆ, ಪುಷ್ಪಯಾಗ ಮುಂತಾದ ಉತ್ಸವಗಳು ಬಹು ಅದ್ದೂರಿಯಾಗಿ ನಡೆದು ಧ್ವಜಾವರೋಹಣದೊಂದಿಗೆ ಮಹಾ ರಥೋತ್ಸವಕ್ಕೆ ತೆರೆಬೀಳುತ್ತದೆ. ಗೋಪಾಲಸ್ವಾಮಿ ಬೆಟ್ಟದಲ್ಲಿ ನಡೆಯುವ ರಥೋತ್ಸವದ ವಿಶೇಷವೇನೆಂದರೆ ಇಲ್ಲಿ ರಥ ಕಬ್ಬಿಣ್ಣದ ಸರಪಳಿಯ ಹಗ್ಗವನ್ನು ಬಳಸುವುದಲ್ಲ. ಕಾಡಿನಲ್ಲಿ ದೊರೆಯುವ ಅಂಬುಬಿನಿಂದ ಹೆಣೆದ ಹಗ್ಗವನ್ನೇ ಬಳಸುತ್ತಾರೆ. ಇದುವರೆವಿಗೂ ಹಗ್ಗ ತುಂಡಾದ ಉದಾಹರಣೆ ದೊರೆತಿಲ್ಲದಿರುವುದು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ.

ಸದಾ ಭಕ್ತರಿಂದ ತುಂಬಿರುವ ದೇವಾಲಯದಲ್ಲಿ ಶನಿವಾರ,ಶ್ರಾವಣ ಶನಿವಾರಗಳಲ್ಲಿ,ಗೋಕುಲಾಷ್ಟಮಿಗಳಲ್ಲಿ ವಿಶೇಷ ಸೇವಾಕೈಕರ್ಂಯಗಳು ಬಹು ಪಾಂಗಿತವಾಗಿ ನೆರವೇರುತ್ತದೆ.

**ಹೀಗೆ ಬನ್ನಿ :**

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಸ್ವಾಮಿ ಬೆಟ್ಟವು ಜಿಲ್ಲಾ ಕೇಂದ್ರದಿಂದ 56 ಕಿ.ಮೀ. ತಾಲ್ಲೂಕು ಕೇಂದ್ರದಿಂದ 18 ಕಿ.ಮೀ. ದೂರದಲ್ಲಿದೆ.



ಮೈಸೂರು-ಊಟಿ ರಸ್ತೆಯಲ್ಲಿ ಗುಂಡ್ಲುಪೇಟೆಯ ನಂತರ ಸಿಗುವ ಹಂಗಳದಲ್ಲಿ ಬಲಕ್ಕೆ ತಿರುಗಿ ಗೋಪಾಲಸ್ವಾಮಿ ಬೆಟ್ಟವನ್ನು ತಲುಪಬಹುದು. ಖಾಸಾಗಿವಾಹನಗಳಿಗೆ ಬೆಟ್ಟದ ಮೇಲೆ ಪ್ರವೇಶವಿಲ್ಲ. ಬೆಟ್ಟದ ಕೆಳಗೆ ವಾಹನವನ್ನು ನಿಲುಗಡೆ ಮಾಡಬೇಕು. ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳಿಂದ ಬೆಟ್ಟಕ್ಕೆ ವಾಹನ ಸೌಕರ್ಯವನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದೆ.

ರಾಜ್ಯ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಬೆಟ್ಟದ ಮೇಲೆ ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹಿಮವದ್ಗೋಪಾಲಸ್ವಾಮಿ ಬೆಟ್ಟಕ್ಕೆ ಬೆಳಗ್ಗೆ 8-30 ರಿಂದ ಸಂಜೆ 4-00 ಗಂಟೆಯವರಿಗೆ ಬಸ್ ಸೌಲಭ್ಯದ ವ್ಯವಸ್ಥೆ ಮಾಡಲಾಗಿದೆ.


ಪುಸ್ತಕ ಪರಿಚಯ

# ಶ್ರೀ ಹರಿಯ ದಿವ್ಯ ಲೀಲೆಗಳನ್ನು ನಿರೂಪಿಸುವ ಉದ್ಗ್ರಂಥ

- ಪ್ರಣವ

**ಕೃತಿಯ ವಿವರ**

| | |
|---|---|
| ಕೃತಿಯ ಹೆಸರು : | ಹರಿವಂಶ ಶ್ರೀಮನ್ ಮಹಾಭಾರತದ ಖಿಲಭಾಗ |
| ಲೇಖಕರು : | ಡಾ॥ ರವೀಂದ್ರ ಅ ಕುಷ್ಟಗಿ |
| ಪ್ರಕಟಣೆ: | ತಿರಮಲೆ ತಿರುಪತಿ ದೇವಸ್ಥಾನಗಳು ಪ್ರಕಟಣಾ ಶಾಖೆ |
| ಪುಟ : | 850 |
| ಬೆಲೆ : | ರೂ. 810 |
| ಪ್ರತಿಗಳಿಗೆ ಸಂಪರ್ಕಿಸಿ : | 087722 64209 |




ಶ್ರೀಮನ್ ಮಹಾಭಾರತದ ಖಿಲಭಾಗವೇ ಹರಿವಂಶ ಸರ್ವೋತ್ತಮನಾದ ಶ್ರೀಕೃಷ್ಣ ಪರಮಾತ್ಮನು ಅವತಾರ ಮಾಡಿದ ಯದುವಂಶದ ಚರಿತ್ರೆಯನ್ನು ಮತ್ತು ದಿವ್ಯವಾದ ಲೀಲೆಗಳನ್ನು ವರ್ಣನೆ ಮಾಡುವ ಶ್ರೇಷ್ಠ ಗ್ರಂಥ ಹರಿವಂಶ. ಶ್ರೀಹರಿಯಲ್ಲಿ ಭಕ್ತಿ, ಉತ್ತಮವಾದ ಜ್ಞಾನ ಜಗತ್ತಿನ ವಿಷಯದಲ್ಲಿ ವೈರಾಗ್ಯ ಶತ್ರುಗಳ ಜಯ, ಉತ್ತಮ ಸಂತಾನ ಹಾಗೂ ಅನೇಕ ಇಷ್ಟಾರ್ಥಗಳ ಪ್ರಾಪ್ತಿ ಹರಿವಂಶದ ಶ್ರವಣ ಮತ್ತು ಪಠಣಗಳಿಂದ ಆಗುತ್ತದೆ. ಇಂತಹ ಉತ್ಕೃಷ್ಟಗ್ರಂಥ ರತ್ನಭಗವಾನ್ ವೇದವ್ಯಾಸರು ನೀಡಿರುವ ಅಮೂಲ್ಯ ಕೊಡುಗೆ. ಇದು ಒಂದು ಪುಸ್ತಕವಲ್ಲ ಸಾಕ್ಷಾತ್ ಪರಮಾತ್ಮನ ಶಬ್ದ ರೂಪ ಪ್ರತಿಮೆ.

ಸಜ್ಜನರಿಗೆ ಹರಿವಂಶ ಭಕ್ತಿಗೆ ಮುಕ್ತಿಗೆ ಪ್ರವೇಶ ದ್ವಾರ ವಿದ್ದಂತೆ. ಭಗವಂತನ ವಂಶಾವಳಿಯ ವಿರಾಟ ದರ್ಶನದ ಅನುಭವ ಕಥನವನ್ನು ಬಹಳ ಸುಂದರವಾಗಿ ಪರಮಪೂಜ್ಯ ಶ್ರೀಮದ್ ಉತ್ತರಾದಿ ಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು 2021 ರಲ್ಲಿ ಸುವರ್ಣಪುರಿ (ಸೋನ್) ಕ್ಷೇತ್ರದಲ್ಲಿ ಕೈಗೊಂಡ ಚಾತುಮಾಸ್ಯ ಸಂದರ್ಭದಲ್ಲಿ ವಿಶೇಷ ಪ್ರವಚನವನ್ನು ನಡೆಸಿ ಕೊಟ್ಟಿದ್ದರು. ಆ ಪ್ರವಚನ ಧ್ವನಿಸುರಳಿಯನ್ನು ಏಕಾಗ್ರ ಚಿತ್ತರಾಗಿ ಆಲಿಸಿ ಶ್ರೀಗಳ ಮಾತನ್ನು ಯಥಾವತ್ತಾಗಿ ಪುಸ್ತಕ ರೂಪದಲ್ಲಿ ಮಾಡಿದವರು ಡಾ.ರವೀಂದ್ರ ಅ ಕುಷ್ಟಗಿ ರವರು.

ಮೂಲತ ಇಂಜಿನಿಯರ್ ಆದ ಶ್ರೀಯುತರು ಸದ್ಯ ನಿವೃತ್ತರಾಗಿ ಅಧ್ಯಾತ್ಮ ಪ್ರವಚನಗಳ ಶ್ರವಣವನ್ನು ತಮ್ಮ ಪ್ರವೃತ್ತಿ ಆಗಿಸಿಕೊಂಡು ತಾವೊಬ್ಬರೇ ಕೇಳಿ ಸಂತೃಪ್ತಿ ಪಡದೆ ಕೇಳಿದ್ದನ್ನು ಸಮಯ ಸಿಕ್ಕಾಗ ಓದಲು ಗ್ರಾಹ್ಯವಾಗುವಂತೆ ಬರಹ ರೂಪದಲ್ಲಿ ಪ್ರಕಟಿಸಿ ಹಂಚುವ ಹವ್ಯಾಸ ಬೆಳೆಸಿಕೊಂಡದ್ದು, ಸಂಶೋಧನಾ ಸಕ್ತರಿಗೆ ಆಕರ ಒದಗಿಸುವಲ್ಲಿ ಅಯಾಚಿತ ಕೊಡುಗೆಯೇ ಸರಿ. ಈಗಾಗಲೇ ಪೂಜ್ಯ ಉತ್ತರಾದಿ ಮಠಾಧೀಶರ ಮತ್ತು ಶ್ರೀಸುವಿದ್ಯೇಂದ್ರ ತೀರ್ಥ ಶ್ರೀಪಾದರ ಪ್ರವಚನಗಳನ್ನು ಲಿಖಿತ ರೂಪದಲ್ಲಿ ಸಮರ್ಪಿಸಿ ಸಾರಸ್ವತ ಕೈಂಕರ್ಯ ಮಾಡುತ್ತಿರುವ ಸಾತ್ವಿಕ ಚೇತನ. ವೇದವ್ಯಾಸರ ಭಾವ ಗರ್ಭವನ್ನು, ಸತ್ಯಾತ್ಮತೀರ್ಥರ ಹಾರ್ದವನ್ನು ಅತ್ಯಂತ ಸಮರ್ಥವಾಗಿ ಅಕ್ಷರಗಳಲ್ಲಿ ತುಂಬಿ ಕೊಟ್ಟು ಈ ಕೃತಿಯನ್ನು ಮೌಲಿಕ ಮಾಡುವಲ್ಲಿ ರವೀಂದ್ರ ಅ ಕುಷ್ಟಗಿ ಅವರು ಯಶಸ್ವಿಯಾಗಿದ್ದಾರೆ ಎಂದು ಮುನ್ನುಡಿಯ ಬರೆದಿರುವ ಖ್ಯಾತ ದಾಸಸಾಹಿತ್ಯ ಸಂಶೋಧಕ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಸಹಜ ಲಲಿತ ಭಾಷೆಯಲ್ಲಿ ಸ್ವಾರಸ್ಯ ಪೂರ್ಣವಾಗಿ ಇರುವ ಪರಿ ಅನನ್ಯವಾಗಿದೆ. ವಿಷ್ಣುವಿನ ಮಾಹಿಮಾತಿಶಯಗಳನ್ನು ತಿಳಿಸುವ ಹರಿ ವಂಶ ಪರ್ವ - ವಿಷ್ಣು ಪರ್ವ- ಭವಿಷ್ಯ ಪರ್ವ ಮೂಲಕ ಪ್ರಮೇಯ ತತ್ವಗಳನ್ನು ಪ್ರತಿಪಾದಿಸುತ್ತ ಇಡೀ ಗ್ರಂಥಕ್ಕೆ ಸಾಂದ್ರತೆಯನ್ನು ಒದಗಿಸಿ ಕೊಟ್ಟಿರುವುದು ವಿಶೇಷ.

800 ಕ್ಕೂ ಅಧಿಕ ಪುಟಗಳ ಈ ಹೆಬ್ಬೊತ್ತಿಗೆಯನ್ನು ತಿರುಮಲೆ ತಿರುಪತಿ ದೇವಸ್ಥಾನ ಧಾರ್ಮಿಕ ಪುಸ್ತಕ ಪ್ರಕಟಣ ಸರಣಿ 1484 ರಲ್ಲಿ ಪ್ರಕಟಪಡಿಸಿ ಜಿಜ್ಞಾಸು ಓದುಗ ವೃಂದಕ್ಕೆ ತಲುಪಿಸುತ್ತಿರುವುದು ಶ್ಲಾಘನೀಯ.



# ಇಭರಾಮಪುರದ ಅಪ್ಪಾವರು

- ಶ್ರೀಮತಿ. ವೃಂದಸಂಗಮ್



**ಶ್ರೀ ರಾಘವೇಂದ್ರ ಚಿತ್ತಜ್ಞಂಸಾರ ಮಾತ್ರವದಾವದಂ।**
**ದೂರೀಕೃತ ದೂರಾಚಾರಂ ಕೃಷ್ಣಾಚಾರ್ಯ ಗುರುಂ ಭಜೇ॥**

ಅಗಮ್ಯ ಮಹಿಮರಾದ ಶ್ರೀ ರಾಘವೇಂದ್ರ ಗುರುಗಳ ಅಂತರಂಗವನ್ನು, ಅವರ ಅಪಾರ ಮಹಿಮೆಗಳ ಮೂಲ ಸೆಲೆಯನ್ನು ಅರ್ಥಮಾಡಿಕೊಂಡಿದ್ದ, ಅಪರೋಕ್ಷಜ್ಞಾನಿಗಳೂ, ಭಾವುಕ ಜನರಿಗೆ ತಂದೆಯಂತಹ ಹಿತಚಿಂತಕರೂ ಆಗಿ, ಅನಾಥ ಬಂಧು, ಆಪದ್ಬಾಂಧವರೆನಿಸಿದ್ದ, ಶರಣಾದವರ ಕಷ್ಟ ಕಾರ್ಪಣ್ಯ ಕಳೆದು ಕರುಣಾಮಯರಾದ, ಅಪ್ಪಾವರು ಎಂದೇ ಎಲ್ಲರೂ ಅಭಿಮಾನದಿಂದ ಕರೆಯುತ್ತಿದ್ದವರೇ, ಇಭರಾಮಪುರದ ಶ್ರೀಕೃಷ್ಣಾಚಾರ್ಯರು. ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದವಾನಿ ತಾಲೂಕಿಗೆ ಸೇರಿದ ಪುಟ್ಟ ಗ್ರಾಮ ಇಭರಾಮಪುರ. ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ಆನೆಯ ಮೇಲೆ ಕುಳಿತು ಬಂದಿದ್ದರಿಂದಲೇ ಈ ಹೆಸರು. ಮಂತ್ರಾಲಯಕ್ಕೆ ತುಂಬ ಹತ್ತಿರದ ಗ್ರಾಮ. ಇಲ್ಲಿ ಭಾರದ್ವಾಜ ಗೋತ್ರದ, ಶ್ರೀರಾಘವೇಂದ್ರ ಗುರುಗಳ ಅರ್ಚಕ ವಂಶಕ್ಕೆ ಸೇರಿದ , ಪರಮ ಸಾತ್ವಿಕರೂ, ಶಾಸ್ತ್ರವೇತ್ತರೂ ಆಗಿದ್ದ ಅಹೋಬಲಾಚಾರ್ಯರು ಹಾಗೂ ಕೃಷ್ಣಾಬಾಯಿ ದಂಪತಿಗಳಿಗಿದ್ದ ಕೊರತೆಯೆಂದರೆ, ಸಂತಾನ ಭಾಗ್ಯ. ಸುಪುತ್ರನ ಬಯಕೆಯಿಂದ ಮನೆ ದೇವರಾದ ಶ್ರೀನಿವಾಸನ ಹಾಗೂ ಪಂಚಮುಖಿಯ ಪ್ರಾಣದೇವರನ್ನು ಒಂದು ಮಂಡಲ ಪರಿಯಂತ ನಿಷ್ಠೆಯಿಂದ ಸೇವಿಸಿದರು. "ಮಕ್ಕಳನ್ನು ಬೇಡೋರು ಮಂಚಾಲೆಗ್ಹೋಗಿರೆ, ಎದ್ದು ನಿಂತಾರೆ ಗುರುಗಳೂ" ಎಂಬ ನುಡಿಯಂತೆ ತಮ್ಮ ಕುಲ ಗುರುಗಳಾದ ಶ್ರೀ ಮಂತ್ರಾಲಯ ಪ್ರಭುಗಳನ್ನೂ ಸತ್ಸಂತಾನಕ್ಕಾಗಿ ಪ್ರಾರ್ಥಿಸಿದರು. ಹರಿವಾಯು ಗುರುಗಳೆಲ್ಲರ ಕೃಪೆಯಿಂದ ಕ್ರಿ.ಶ. 1789 ರ ವಿಜಯದಶಮಿಯಂದು ದಂಪತಿಗಳ ಭಾಗ್ಯದ ಬಾಗಿಲು ತೆರೆಯಿತು. ಪುತ್ರರತ್ನ ಜನಿಸಿತು. ಗೋಕುಲದ ಬಾಲಗೋಪಾಲನಂತಿದ್ದ ಮಗುವಿಗೆ ಕೃಷ್ಣನೆಂದೇ ನಾಮಕರಣ ಮಾಡಿದರು. ಮಗು ದಿನ ದಿನಕ್ಕೂ ಬೆಳೆಯುತ್ತ ತನ್ನ ಬಾಲ ಲೀಲೆಗಳಿಂದ ಊರಿನ ಎಲ್ಲರಿಗೂ ಮುದ್ದಿನವನಾಗಿದ್ದ. ಒಮ್ಮೊಮ್ಮೆ ಹಠ ಬಂದಾಗ ಮಲಗಿದ್ದ ಮಗುವಿನ ತೊಟ್ಟಿಲನ್ನು ಯಾವುದೋ ಅವ್ಯಕ್ತ ಕೈಯೊಂದು ತೂಗುತ್ತಿತ್ತು. ಮುಖದಲ್ಲಿ ದೈವೀಕಾಂತಿ ತುಂಬಿದ ಕೃಷ್ಣ, ಮಂತ್ರ ಸ್ಪರ್ಶವಾದಂತೆ ಅಳು ನಿಲ್ಲಿಸಿ ಸ್ವಸ್ಥವಾಗಿ ಮಲಗಿ ನಿದ್ರಿಸುತ್ತಿದ್ದ. ತಾಯಿ ಪುಟ್ಟ ಕೃಷ್ಣನನ್ನು ಪುರಾಣ ಪುಣ್ಯಕಥೆಗಳ ಪ್ರವಚನಕ್ಕೆ ಕರೆದುಕೊಂಡು ಹೋದರೆ, ಪ್ರವಚನದಲ್ಲಿ ಪರಮಾತ್ಮನ ಮಹಿಮೆಗಳನ್ನು ವರ್ಣಿಸುವಾಗ ಕೇಕೆ ಹಾಕಿ ನಗುವುದು, ಭಗವದ್ಭಕ್ತರ ಸಂಕಷ್ಟ ಸ್ಥಿತಿಯ ಚಿತ್ರಣ ನಡೆದಾಗ, ಬಿಕ್ಕಿ ಬಿಕ್ಕಿ ಅಳುವುದೂ, ಹರಿ ನಾಮಸ್ಮರಣೆಯ ಕೀರ್ತನೆಗಳಿಗೆ ಕೈಕಾಲುಗಳನ್ನು ಕುಣಿಸಿ ಸಂತೋಷಿಸುತ್ತಿದ್ದ.

ಸೂಕ್ತ ಕಾಲದಲ್ಲಿ ಅಹೋಬಲಾಚಾರ್ಯರು ಕೃಷ್ಣನಿಗೆ ಶ್ರೀಕಾರದಿಂದ ಅಕ್ಷರಾಭ್ಯಾಸ ಮಾಡಿಸಿದರು. ಗರ್ಭಾಷ್ಟಮದಲ್ಲಿ ಉಪನಯನವಾಯಿತು. ಕಿಶೋರ ತಂಡದ ಮುಂದಾಳುವಾದ ಕೃಷ್ಣನು ಜಿಗಿಯುವುದು, ಈಜುವುದು, ಮರ ಹತ್ತುವುದು ಇದರಲ್ಲಿಯೇ ವ್ಯಸ್ತನಾಗಿರುತ್ತಿದ್ದ . ಇದರಿಂದ ತಂದೆ ಹೇಳಿಕೊಟ್ಟ ಪಾಠ ಪ್ರವಚನಗಳ ಕಡೆ ಲಕ್ಷ್ಯ ಕಡಿಮೆಯಾಗಿದ್ದರಿಂದ ತಂದೆ ಮಗನನ್ನು ದಂಡಿಸಿದರು. ಕೃಷ್ಣ ಬೇಸರದಿಂದ ಊರಿನಿಂದ ದೂರದ ಕಾಡಿಗೆ ಹೋಗಿ ಒಬ್ಬನೇ ಕುಳಿತುಕೊಂಡಾಗ, ರುದ್ರಾಂಶ ಸಂಭೂತರಾದ ಶ್ರೀ ಅಶ್ವತ್ಥಾಮಾಚಾರ್ಯರು, ವೈಷ್ಣವ ಚಿಹ್ನೆ ಧರಿಸಿದ ತೇಜಸ್ವಿ ವೃದ್ಧ ರೂಪಿನಿಂದ ಇವನಿಗೆ, "ಪೂರ್ವ ಸುಕೃತ ಬಲವತ್ತರವಿದೆ. ಸಕಲ ವಿದ್ಯೆಗಳೂ ಒಲಿಯುವುವು. ಹರಿವಾಯು ಗುರುಗಳು ವಿಶೇಷ ಕೃಪೆ ಮಾಡುವರು ಎಂದು ಆಶೀರ್ವದಿಸಿದರು.

ಅಂದಿನಿಂದ ಕೃಷ್ಣನ ಚಿತ್ತ ವೃತ್ತಿ ಪರಿಶುದ್ಧವಾಯಿತು. ವಿವೇಕದ ಗ್ರಹಣ ಶಕ್ತಿ, ಕುಶಾಗ್ರಮತಿ, ಪ್ರಖರ ದೈವ ಶಕ್ತಿಯ ಕಿಶೋರ ಕೃಷ್ಣನಿಗೆ ಕೃಷ್ಣಾಬಾಯಿ ಎಂಬ ಪ್ರಬುದ್ಧ ಬಾಲೆಯೊಡನೆ ವಿವಾಹವಾಯಿತು. ಕಾಲದ ಹಕ್ಕಿಯುರಳಿ, ಮಾತಾ ಪಿತೃರು ಹರಿಪಾದಗೈದರು. ತಮ್ಮ ಪುತ್ರನಿಗೆ ತಂದೆಯದೇ ನಾಮಕರಣ ಮಾಡಿದರು. ಪರಿಪಕ್ವ ಮನದಿಂದ ಗಾಣದಾಳದಲ್ಲಿ ಮಾಡಿದ ಒಂದು ಮಂಡಲದ ಕಠಿಣ ತಪಶ್ಚರ್ಯೆಯಿಂದ ಭಗವತ್ಕೃಪೆಯಾಗಿ, ಹರಿವಾಯು ಗುರುಗಳ ಕಾರುಣ್ಯದಿಂದ ಅರಿವಿನ ಆತ್ಮಜ್ಯೋತಿ ಪ್ರಜ್ವಲಿಸಿತು. ಅಪರೋಕ್ಷ ಜ್ಞಾನ ಕರಗತವಾಯಿತು. ಜ್ಞಾನಿ ಶ್ರೇಷ್ಠ ಸಿದ್ಧ ಪುರುಷರಾದ ಶ್ರೀ ಕೃಷ್ಣಾಚಾರ್ಯರು ಹರಿ ವಾಯುಗುರುಗಳ ಪೂರ್ಣಾನುಗ್ರಹವನ್ನು, ತಮ್ಮ ಮೂಲ ಸ್ವರೂಪವನ್ನು ಪ್ರಕಟಪಡಿಸದೆ ಸಾಮಾನ್ಯರಂತೆಯೇ ಕುಲಕಸಬಾದ ಜೋಯಿಸ ವೃತ್ತಿಯನ್ನು ಅವಲಂಬಿಸಿದ್ದರು. ಅವರ ಸರಳ ನಡೆ ನುಡಿ, ವಾಕ್ಶಕ್ತಿ , ಮಂತ್ರ ಸಿದ್ಧ, ಪ್ರಖರ ಪಾಂಡಿತ್ಯ ಭಕ್ತಾನುಕಂಪ, ಆಶ್ರಿತರಲ್ಲಿ ತೋರುವ ಪುತ್ರ ವಾತ್ಸಲ್ಯದಿಂದ ಜನ ಅವರನ್ನು "ಅಪ್ಪಾವರು" ಎಂದೇ ಸಂಬೋಧಿಸುತ್ತಿದ್ದರು. ಅಪ್ಪಾವರೆಂದರೆ, "ರಾಘವೇಂದ್ರ ಚಿತ್ತಜ್ಞಂ" ಎಂದು ಹೆಸರಾದವರು. ಮಂತ್ರಾಲಯದಲ್ಲಿ ದಿನ ನಿತ್ಯ ಅನ್ನದಾನದ ಸೇವೆಯಿಲ್ಲದಿರುವ ಕಾಲದಲ್ಲಿ ರಾಯರ ಸೇವಾರ್ಥಿಗಳಿಗೆ ಇಭರಾಮಪುರದಲ್ಲಿ ಅನ್ನಸತ್ರ ಹಾಗೂ ಜ್ಞಾನ ಸತ್ರವನ್ನೂ ನಡೆಸಿದವರು.

ಶ್ರೀ ಗಣೇಶಾಚಾರ್ಯರೆಂಬುವರು, ನಿತ್ಯವೂ ಮಂತ್ರಾಲಯದಲ್ಲಿ ಅಪ್ಪಾವರಿಗೆ ಸಾಷ್ಟಾಂಗ ನಮಸ್ಕರಿಸುತ್ತಿದ್ದರು. ಒಮ್ಮೆ ಗಣೇಶಾಚಾರ್ಯರಿಗೆ, ಅಪ್ಪಾವರು, "ನಾಳೆಯಿಂದ ನಾನು ನಿಮಗೆ ನಮಸ್ಕರಿಸುವೆನು" ಎಂದರಂತೆ, ಅವರ ನುಡಿ ನಿಜವಾಯಿತು. ಅಂದೇ, ಗಣೇಶಾಚಾರ್ಯರು ಮಂತ್ರಾಲಯ

ಮಠಾಧೀಶರಾಗಿ, ಶ್ರೀಸುವಿದ್ಯೇಂದ್ರತೀರ್ಥರೆಂಬ ಅಭಿದಾನ ಪಡೆದರು. ಹುಟ್ಟು ಕುರುಡಿಯಾದ ರಾಘವೇಂದ್ರಾಚಾರ್ಯರ ಮಗಳ ಬೆನ್ನಿಗೆ ಬಾರಿಸಿದಾಗ ಆ ಮಾಂತ್ರಿಕ ಸ್ಪರ್ಶದಿಂದ, ಆ ಬಾಲೆಗೆ ಕಣ್ಣು ಕಾಣಲಾರಂಭಿಸಿದವು. ಮಂತ್ರಾಲಯದಲ್ಲಿ ರಾಯರ ಸೇವೆ ಮಾಡುತ್ತಿದ್ದ, ಜನ್ಮಾಂಧ ಶ್ರೀಜೀವಣ್ಣರಾಯರಿಗೆ ಅಪ್ಪಾವರು ಬೆನ್ನು ಚಪ್ಪರಿಸಿದಾಗ, ಕಣ್ಣು ಕಾಣಿಸಿದವು. ರಾಯರ ವೃಂದಾವನ ದರ್ಶನದ ಭಾಗ್ಯ ಪಡೆದರು. ಮೈಸೂರಿನ ಕಳಲೆ ಕೂಸಣ್ಣನವರ ಹಿರಿಯ ಪುತ್ರನಿಗೆ, ಅಪ್ಪಾವರು, ತಮ್ಮ ವಸ್ತ್ರದ ಅಂಚಿನ ಎಳೆತೆಗೆದು ಮಂತ್ರಿಸಿ ದೃಷ್ಟಿದಾನ ಮಾಡಿದ್ದರು.

ಶಿವಮೊಗ್ಗದ ಭಕ್ತನೊಬ್ಬ ಅಪ್ಪಾವರ ವಿಶೇಷಾನುಗ್ರಹಕ್ಕೆ ಪಾತ್ರನಾದವನು, ತುಂಗಭದ್ರಾ ನದಿಯಲ್ಲಿ ಅಪ್ಪಾವರ ಹೆಸರು ಬರೆದು ಬಿಟ್ಟ ಮರದ ದಿಮ್ಮಿಗಳು, ಇಭರಾಮಪುರದ ನದೀ ಖೈರುವಾಡಿಯಲ್ಲಿ ಅಪ್ಪಾವರಿಗೇ ತಲುಪಿದವು. ಇದೇ ರೀತಿ ಸುಂದರವಾದ ದೇವತಾ ರೂಪಗಳನ್ನು ಚಿತ್ರಿಸಿದ ಕಲ್ಲಿನ ಕಂಬಗಳನ್ನು ರಾಂಪುರದ ಶಿಲ್ಪಿಗಳು ಕಳಿಸಿದರು. ಹುಲಿಯಂತೆ ಆಚ್ಛಾದಿಸಿ ಹುಲಿ ಮರಡಿಯ ಹುಲಿಯನ್ನೇ ಓಡಿಸಿದರು.ಅಪ್ಪಾವರು ಸ್ನಾನ ಮಾಡಿದಾಗ, ದೇವಸದೃಶ ಕಸ್ತೂರಿ, ಪುನುಗು, ಚಂದನದ ಸುವಾಸನೆ ಸುತ್ತ ಮುತ್ತಲೆಲ್ಲಾ ಪಸರಿಸುತ್ತಿತ್ತು. ಇದೊಂದು ಅಪಭ್ರಂಶ ವಿದ್ಯೆಯೆಂದು ಆಡಿಕೊಂಡಾಡಿದವರಿಗೆ, ಈ ಪರಿಮಳ, ಪುನಃ ಪುನಃ ಶ್ರೀಮನ್ನ್ಯಾಯ ಸುಧಾ ಪರಿಮಳ ಗ್ರಂಥ ಪಾರಾಯಣ ಮಾಡಿದ ಫಲ ಎಂಬುದನ್ನು ಸಾಧಿಸಿ ತೋರಿಸಿದರು. ಅವರು ಊಟ ಮಾಡಿದ ಉಚ್ಛಿಷ್ಟದ ಎಲೆಯೂ ಸಹ ಸುಗಂಧ ಭರಿತವಾಗಿರುತ್ತಿತ್ತು.ಒಮ್ಮೆ ಸ್ನಾನಕ್ಕೆ ಕುದಿಯುವ ನೀರನ್ನು ಸುರಿದವನ ಮೈಮೇಲೆಯೇ ಬೊಬ್ಬೆ ಬಂದು ಪ್ರಾಣಬಿಟ್ಟನು. ತಮ್ಮ ಸೇವಕನ ಮಗ ಬಂಗಾರಿಗೆ, ಇಭರಾಮಪುರದ ತಮ್ಮ ಮನೆಯ ಮಾಳಿಗೆಯ ಮೇಲೆಯೇ, ಹಂಪೆಯ ರಥೋತ್ಸವವನ್ನು ತೋರಿದರು.

ಮೈಸೂರನ್ನಾಳುವ ಮುಮ್ಮಡಿ ಕೃಷ್ಣರಾಜ ಒಡೆಯರ ಕೋರಿಕೆಯಂತೆ, ಅಪ್ಪಾವರು, ತಮ್ಮ ಯೋಗ ಶಕ್ತಿಯಿಂದ ಅರಮನೆಯಲ್ಲಿಯ ಭೂತ ಬಾಧೆಯನ್ನು ನಿವಾರಿಸಿ, ಅರಮನೆಯಲ್ಲಿ ಮಂತ್ರಾಲಯ ಪ್ರಭುಗಳ ಮೃತ್ತಿಕಾ ವೃಂದಾವನವನ್ನು ಪ್ರತಿಷ್ಠಾಪಿಸಿದರು. ಅರಮನೆಯ ನೆಲದಲ್ಲಿದ್ದ, ಪಾಂಡವ ಪೂಜಿತ ಪ್ರಾಣದೇವರನ್ನು ಲಭ್ಯವಾಗಿಸಿಕೊಂಡರು. ಈ ವಿಗ್ರಹ ಇಭರಾಮಪುರದಲ್ಲಿ ಅವರ ವಂಶಸ್ಥರಿಂದ ನಿತ್ಯ ಪೂಜೆಗೊಳ್ಳುತ್ತಿದೆ. ಶ್ರೀ ವಿಜಯ ರಾಮಚಂದ್ರ ವಿಠಲದಾಸರು, ಜಯೇಶ ವಿಠಲದಾಸರು, ಗುರುಜಗನ್ನಾಥದಾಸರು, ಸುರಪುರದ ಆನಂದದಾಸರು, ಕಮಲೇಶ ವಿಠಲದಾಸರು ಅಪ್ಪಾವರಿಂದ ಅನುಗ್ರಹಿತರು. ಕೊಪ್ಪರ ಅಶ್ವತ್ಥ ನರಸಿಂಹ ಸ್ವಾಮಿ ಸಾನಿಧ್ಯದಲ್ಲಿ ಅರ್ಚಕರಿಗೆ ಘಟ ಸರ್ಪದ ರೂಪದಲ್ಲಿ ಕಂಡ ಅಪ್ಪಾವರು, ಅವರ ಮಗಳಿಗೆ ಸಂತಾನ ಭಾಗ್ಯ ಕರುಣಿಸಿದರು. ಮೃತ್ಯುವಶನಾದ ಬಾಲಕನಿಗೆ ಸಂಜೀವ ರಾಯರ ಪ್ರಸಾದದಿಂದ ಆರೋಗ್ಯ ಭಾಗ್ಯ ನೀಡಿದರು. ವೆಂಕಟೇಶ ದಾಸ ದಂಪತಿಗಳಿಗೆ ಪಾಜಕ ಕ್ಷೇತ್ರದಲ್ಲಿ ಸ್ವೀಕೃತವಾದ ಪ್ರಸಾದದ ಮೂಲವನ್ನು ವಿವರಿಸಿ, ಪ್ರಸಿದ್ಧ ಹರಿದಾಸರನ್ನು ಕೊಡುಗೆಯಾಗಿ ನೀಡಿದರು.

ಗದುಗಿನ ಶ್ರೀ ಯೋಗಿನಾರಾಯಣಾಚಾರ್ಯರ ಸ್ವಪ್ನದಲ್ಲಿ ರಾಯರು, ''ನಾಳೆ, ಇಭರಾಮಪುರದ ಅಪ್ಪಾವರ ಬಳಿ ಹೋಗುತ್ತಿದ್ದೇನೆ'' ಎಂದು ಹೇಳಿದರು. ಅಪ್ಪಾವರ ಅತ್ಯುಚ್ಚ ಮಟ್ಟದ ದಿವ್ಯ ಬೋಧೆಯು ಜ್ಞಾನಕ್ಕೆ ಶರಣಾದ ಶ್ರೀಯೋಗಿ ನಾರಾಯಣಾಚಾರ್ಯರು ಅಪ್ಪಾವರ ಅಗ್ರೇಸರ ಶಿಷ್ಯರಾದರು. ತಾವೇ ಸ್ವತಃ ವ್ರತ ನೇಮ ನಿಷ್ಠೆಯಿಂದ ಶಿಲಾವೃಂದಾವನವನ್ನು ನಿರ್ಮಿಸಿ, ಮೂಲ ಮೃತ್ತಿಕೆಯನ್ನು ಮಂತ್ರಾಲಯದಿಂದ ತಂದು, ಅಪ್ಪಾವರ ದಿವ್ಯ ಹಸ್ತದಿಂದ, ಗದುಗಿನಲ್ಲಿ ಶ್ರೀ ರಾಯರ ವೃಂದಾವನವನ್ನು ಪ್ರತಿಷ್ಠಾಪಿಸಿದರು. ಗದುಗಿನ ಮುಜುಮದಾರ ಮನೆತನದಲ್ಲಿ ಅಪ್ಪಾವರ ಬೆಳ್ಳಿಯ ವಿಗ್ರಹ, ಅವರು ಸ್ವಹಸ್ತದಿಂದ ಬರೆದ ಪತ್ರಗಳಿವೆ. ಅಪ್ಪಾವರಿಗೆ ಬೀಗರಾದ ಗದುಗಿನ ಜಾಗೀರದಾರರಾದ ಹುಯಿಲಗೋಳ ಬಾಳಾ ಸಾಹೇಬರ ಮನೆತನದಲ್ಲಿ ಈಗಲೂ ಮೂರು ದಿನ ಅಪ್ಪಾವರ ಆರಾಧನೆ ನಡೆಸುತ್ತಾರೆ.

ಅಪ್ಪಾವರು ಒಮ್ಮೆ ತಮ್ಮ ಶಿಷ್ಯನಿಗೆ, ಸ್ವಪ್ನದಲ್ಲಿ ರಾತ್ರಿಯಿಂದ ಬೆಳಗಿನವರೆಗೂ ಭಾರತದ ಎಲ್ಲಾ ತೀರ್ಥ ಕ್ಷೇತ್ರಗಳ ಯಾತ್ರೆಯನ್ನು ಮಾಡಿಸಿ ಅವನ ಅಭಿಲಾಷೆ ಪೂರೈಸಿದರು. ತಮಿಳುನಾಡಿನ, ಈರೋಡ್ ಸಮೀಪದ ಭವಾನಿ ಭುಜಂಗರಾಯರ ಮನೆಯಲ್ಲಿ ಮದುವೆಯ ದಿನವೇ ಅವರ ಏಕಮಾತ್ರ ಪುತ್ರ ಮೃತನಾದಾಗ, ರಾತ್ರಿಯೆಲ್ಲಾ ಅಖಂಡ ಹರಿವಾಯು ಗುರುಗಳನ್ನು ಪ್ರಾರ್ಥಿಸಿ, ಮದುಮಗನಿಗೆ ಜೀವದಾನ ಮಾಡಿದರು. ಕಳಲೆ ಕೂಸಣ್ಣನವರ ಮಗನ ಮದುವೆಯ ದಿನ, ಬಳಲುತ್ತಿದ್ದ ಜ್ವರ ಬಾಧೆ ತೊಲಗಿಸಿದರು. ನಂಜನಗೂಡಿನ ಅನಂತರಾಮಯ್ಯನವರಿಗೆ ಸಂತಾನ ಭಾಗ್ಯ ನೀಡಿದರು. ಮುಂಡರಗಿ ಜೋಯಿಸ ಶ್ರೀ ಭೀಮಾಚಾರ್ಯರಿಗೆ ಪಾದುಕೆಗಳನ್ನು ಕರುಣಿಸಿದರು ಮಾನ್ವಿ ಕುಲ್ಕರ್ಣಿಯವರ ಮನೆಯಲ್ಲಿ ಮಧ್ವ ನವಮಿಯ ದಿನ, ನೈವೇದ್ಯ ಸಮಯಕ್ಕೆ ಸರಿಯಾಗಿ, ಘಟ ಸರ್ಪದ ರೂಪದಲ್ಲಿ, ಸುರಪುರದ ನರಸಿಂಹ ಜಯಂತಿಯ ದಿನ ಶ್ವಾನ ರೂಪದಿಂದ ಭಕ್ತರಿಗೆ ದರ್ಶನ ನೀಡಿದ್ದಾರೆ. ಲೌಕಿಕವಾಗಿ ಶಾಸ್ತ್ರ ವ್ಯಾಸಂಗ ಮಾಡಿರದಿದ್ದರೂ, ಅಪ್ಪಾವರು, ಶೃತಿ ಸ್ಮೃತಿ ಪುರಾಣಗಳಲ್ಲಿ ಪ್ರಭುತ್ವವಿತ್ತು. ಇದರಿಂದಲೇ ಬೆಂಗಳೂರಿನಲ್ಲಿ ನಡೆದ ವಿದ್ವತ್ಸಭೆಯ ಅಧ್ಯಕ್ಷತೆಯನ್ನು ಅಪ್ಪಾವರೇ ವಹಿಸಿದ್ದರು. ಇಂತಹ ಜ್ಞಾನಿಗಳಾದ ಅಪ್ಪಾವರು, ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ ಸಾಧ್ಯತೆಯಿದೆ. ಆದರೆ ಲಭ್ಯವಿಲ್ಲ, ಅಪ್ಪಾವರ ಸ್ಫೂರ್ತಿಯಿಂದ ಅನೇಕ ಹರಿದಾಸರು ಉತ್ಕೃಷ್ಟ ಕೃತಿ ರಚನೆ ಮಾಡಿದ್ದಾರೆ.

ಸಾಧನೆಯ ಹಾದಿ ಕಾಣದೇ ಕಂಗೆಟ್ಟಿದ್ದ ಅಸಂಖ್ಯಾತ ಸುಜೀವಿಗಳಿಗೆ ಸತ್ಪಥ ತೋರಲು, ಬುವಿಗಿಳಿದ ಮಹಾ ಬೆಳಕೊಂದು ತಾನು ಬೀರಿದ ಸುಜ್ಞಾನದ ಬೆಳಕನ್ನು ಉಳಿಸಿ, ಕ್ರಿ.ಶ. 1869 ರ ಶ್ರಾವಣ ಶುದ್ಧ ತೃತೀಯಾದಂದು ಅಪ್ಪಾವರು ಕಣ್ಮರೆಯಾದರೂ, ಅವರ ಅಮಿತೋಪಕಾರ, ಯೋಗ ಸಾಮರ್ಥ್ಯ,ಸಿದ್ಧಿ - ಸಾಧನೆಗಳು ಮಾಸಿಲ್ಲ. ಭಕ್ತರ ಭಾಗ್ಯ ನಿಧಿಯಾಗಿ,ಸ್ಮರಿಪರ ಸುರಧೇನುವಾಗಿ, ಭಾವುಕ ಭಕ್ತರ ಹೃದಯದಲ್ಲಿ ಶಾಶ್ವತ ಸ್ಥಾನದಲ್ಲಿದ್ದು ಸಾಧಕರ ಸ್ಫೂರ್ತಿಯ ಸೆಲೆಯಾಗಿ ಬದುಕನ್ನು ಉದ್ದೀಪನಗೊಳಿಸುತ್ತಿದ್ದಾರೆ.

# ಶ್ರೀ ಸಿದ್ಧಿ ವಿನಾಯಕ ವ್ರತಕಲ್ಪ

## ಪೂಜಾ ಸಿದ್ಧತೆ

ವಿನಾಯಕ ಚೌತಿಯಂದು ಬೆಳಿಗ್ಗೇ ಎದ್ದು ಮನೆಯನ್ನು ಶುಭ್ರ ಗೊಳಿಸಿಕೊಂಡು ಮನೆಯ ಬಾಗಿಲಿಗೆ ಮಾವಿನತೋರಣವನ್ನು ಕಟ್ಟಿ ವಿವಿಧ ಹೂಗಳಿಂದ ಅಲಂಕರಿಸಬೇಕು. ಮನೆಯವರೆಲ್ಲಾ ತಲೆಗೆ ಸ್ನಾನ ಮಾಡಬೇಕು. ದೇವರ ಕೋಣೆ ಇದ್ದರೆ ಅದರಲ್ಲಿ ಶುಚಿಯಾದ ಒಂದು ಪ್ರದೇಶದಲ್ಲಿ ಒಂದು ಮಣೆಯನ್ನು ಹಾಕಿ, ಅದರ ಮೇಲೆ ವಿನಾಯಕನ ವಿಗ್ರಹವನ್ನು ಇರಿಸಬೇಕು. ಪೂಜೆಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಸಿದ್ಧ ಮಾಡಿಕೊಳ್ಳಬೇಕು. ವಿನಾಯಕನಿಗೆ ಮೋದಕವೆಂದರೆ ಬಹಳ ಇಷ್ಟ. ಉಳಿದ ಭಕ್ಷ್ಯಗಳು ಇಲ್ಲದಿದ್ದರೂ ಪರವಾಗಿಲ್ಲ ಮೋದಕಗಳನ್ನು ಮತ್ತು ಕಡುಬುಗಳನ್ನು ಸಿದ್ಧಮಾಡಿಸಿಕೊಳ್ಳಬೇಕು. ವಿನಾಯಕನ ವಿಗ್ರಹದ ಎದುರು ಮಣೆಯ ಮೇಲೆ ಸ್ವಲ್ಪ ಅಕ್ಕಿಯನ್ನು ಹರಡಿ ಅದರ ಮೇಲೆ ತಾಮ್ರದ ಅಥವಾ ಬೆಳ್ಳಿಯ ಪಾತ್ರೆಯನ್ನು ಇರಿಸಬೇಕು. ಅದಕ್ಕೆ ಅರಿಶಿನ ಕುಂಕುಮವನ್ನು ಹಚ್ಚಬೇಕು. ಅದರಲ್ಲಿ ಕೆಲವು ಅಕ್ಷತೆಗಳನ್ನು ಹೂಗಳನ್ನು ಹಾಕಿ ಅದರ ಮೇಲೆ ಮಾವಿನ ಎಲೆಗಳನ್ನು ಇರಿಸಿ ಅದರ ಮೇಲೆ ತೆಂಗಿನಕಾಯಿಯನ್ನು ಇರಿಸಿ ಕಲಶವನ್ನು ಸಿದ್ಧಮಾಡಿಕೊಳ್ಳಬೇಕು. ನಂತರ ಅರಿಶಿನದ ಮುದ್ದೆಯ ಮೂಲಕ ಚಿಕ್ಕ ಅರಿಶಿನದ ಗಣಪತಿಯನ್ನು ಮಾಡಿಕೊಳ್ಳಬೇಕು. ಪೂಜೆಗೆ ಮೊದಲು ಒಂದು ಗ್ಲಾಸಿನಲ್ಲಿ ಒಂದು ಚಮಚ ಅಥವಾ ಒಂದು ಉದ್ಧರಣೆಯನ್ನು ಇರಿಸಿಕೊಂಡು ಮತ್ತೊಂದು ಚಿಕ್ಕ ತಟ್ಟೆಯನ್ನು ಇರಿಸಿಕೊಳ್ಳಬೇಕು ಅಥವಾ ಅರ್ಘ್ಯ ಪಾತ್ರೆಯನ್ನು ಇರಿಸಿಕೊಳ್ಳಬೇಕು. ಪೂಜೆ ಮಾಡುತ್ತಿರುವಾಗ ಕೈಗೆ ಅರಿಶಿನ, ಕುಂಕುಮವು ಆಗುತ್ತದೆ. ಆದ್ದರಿಂದ ಒಂದು ಶುಭ್ರವಾದ ಬಟ್ಟೆಯನ್ನು ಇರಿಸಿಕೊಂಡರೆ ಚೆನ್ನಾಗಿರುತ್ತದೆ.

ಮೊದಲು ಹಣೆಗೆ ಕುಂಕುಮವನ್ನು ಇರಿಸಿಕೊಂಡು ನಮಸ್ಕರಿಸಿ ನಂತರ ಈ ರೀತಿ ಪ್ರಾರ್ಥಿಸಬೇಕು.

**ಪ್ರಾರ್ಥನೆ :**

ಓಂ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್।
ಪ್ರಸನ್ನವರದಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ॥
ಅಯಂ ಮುಹೂರ್ತಸ್ಸು ಮುಹೂರ್ತಸ್ತು ॥
ತದೇವಲಗ್ನಂ, ಸುದಿನಂ ತದೇವ, ತಾರಾಬಲಂ ಚಂದ್ರಬಲಂ ತದೇವ
ವಿದ್ಯಾಬಲಂ ದೈವಬಲಂ ತದೇವ , ಲಕ್ಷ್ಮೀಪತೇ ತೇಂಘ್ರಿ ಯುಗಂಸ್ಮರಾಮಿ॥
ಲಾಭಸ್ತೇಷಾಂ, ಜಯಸ್ತೇಷಾಂ, ಕುತಸ್ತೇಷಾಂ ಪರಾಭವಃ।
ಯೇಷಾ ಮಿಂದೀವರ ಶ್ಯಾಮೋ ಹೃದಯಸ್ಥೋ ಜನಾರ್ಧನಃ॥
ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಂ
ಲೋಕಾಭಿರಾಮಂ ಶ್ರೀರಾಮಂ ಭೂಯೋಭೂಯೋ ನಮಾಮ್ಯಹಂ॥
ಸುಮುಖೈಶ್ಚಕದಂತಶ್ಚ ಕಪಿಲೋ ಗಜಕರ್ಣಿಕಃ।
ಲಂಬೋದರಶ್ಚ ವಿಕಟೋ ವಿಘ್ನರಾಜೋ ಗಣಾಧಿಪಃ
ಧೂಮಕೇತು ರ್ಗಣಾಧ್ಯಕ್ಷಃ ಫಾಲಚಂದ್ರೋ ಗಜಾನನಃ।
ವಕ್ರತುಂಡ ಶ್ಶೂರ್ಪಕರ್ಣೋ ಹೇರಂಬಃ ಸ್ಕಂದಪೂರ್ವಜಃ
ಅಷ್ಟಾವಷ್ಟೌ ಚ ನಾಮಾನಿ ಯಃ ಪಠೇಚ್ಛೃಣುಯಾದಪಿ
ವಿದ್ಯಾರಂಭೇ ವಿವಾಹೇಚ ಪ್ರವೇಶ ನಿರ್ಗಮೇತಥಾ
ಸಂಗ್ರಾಮೇ ಸರ್ವಕಾರ್ಯೇಷು ವಿಘ್ನಸ್ತ ಸ್ಯನ ಜಾಯತೇ
ಅಭೀಪ್ಸಿತಾರ್ಥ ಸಿದ್ಧ್ಯರ್ಥಂ ಪೂಜಿತೋ ಯಸ್ಸುರೈರಪಿ
ಸರ್ವವಿಘ್ನಚ್ಛಿದೇತಸ್ಮೈ ಗಣಾಧಿಪತಯೇ ನಮಃ



**ಆಚಮನ :**

(ನಮಸ್ಕರಿಸಿ ಆಚಮನ ಮಾಡಬೇಕು. ಎಡಗೈಯಲ್ಲಿ ಉದ್ಧರಣೆಯನ್ನು ಹಿಡಿದು, ನೀರಿನ ಪಾತ್ರೆಯಿಂದ ಮೂರುಬಾರಿ ನೀರನ್ನು ಬಲಗೈಗೆ ಹಾಕಿಕೊಂಡು ಓಂ ಕೇಶವಾಯ ಸ್ವಾಹಾ, ಓಂ ನಾರಾಯಣಾಯ ಸ್ವಾಹಾ, ಓಂ ಮಾಧವಾಯ ಸ್ವಾಹಾ ಎನ್ನುತ್ತಾ ನೀರನ್ನು ಕುಡಿಯಬೇಕು. ಹಸ್ತ ಪ್ರಾಕ್ಷಾಳ್ಯ ಎನ್ನುತ್ತಾ ಉದ್ಧರಣೆಯಿಂದ ನೀರನ್ನು ತೆಗೆದುಕೊಂಡು ಕೈಯನ್ನು ತೊಳೆದುಕೊಳ್ಳಬೇಕು.)

**ಓಂ ಗೋವಿಂದಾಯ ನಮಃ** ಎನ್ನುತ್ತಾ ಉದ್ಧರಣೆಯಿಂದ ನೀರನ್ನು ಕೈಗೆ ಹಾಕಿಕೊಂಡು, ಅರ್ಘ್ಯಪಾತ್ರೆಯಲ್ಲಿ ಆ ನೀರನ್ನು ಬಿಡಬೇಕು. ಆಚಮನ ಮಾಡಿದ ನಂತರ ನೀರನ್ನು ಪೂಜೆಗೆ ಉಪಯೋಗಿಸಬಾರದು. ನಂತರ ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಾ ಓಂ ವಿಷ್ಣವೇ ನಮಃ, ಓಂ ಮಧುಸೂದನಾಯ ನಮಃ, ಓಂ ತ್ರಿವಿಕ್ರಮಾಯ ನಮಃ, ಓಂ ವಾಮನಾಯ ನಮಃ. ಓಂ ಪದ್ಮನಾಭಾಯ ನಮಃ, ಓಂ ಹೃಷಿಕೇಶಾಯ ನಮಃ, ಓಂ ಪದ್ಮನಾಭಾಯ ನಮಃ, ಓಂ ದಾಮೋದರಾಯ ನಮಃ, ಓಂ ಸಂಕರ್ಷಣಾಯ ನಮಃ, ಓಂ ವಾಸುದೇವಾಯ ನಮಃ, ಓಂ ಪ್ರದ್ಯುಮ್ನಾಯ ನಮಃ.

ಓಂ ಅನಿರುದ್ಧಾಯ ನಮಃ, ಓಂ ಪುರುಷೋತ್ತಮಾಯ ನಮಃ, ಓಂ ಅಧೋಕ್ಷಜಾಯ ನಮಃ, ಓಂ ನಾರಸಿಂಹಾಯ ನಮಃ, ಓಂ ಅಚ್ಯುತಾಯ ನಮಃ, ಓಂ ಜನಾರ್ಧನಾಯ ನಮಃ, ಓಂ ಉಪೇಂದ್ರಾಯ ನಮಃ, ಹರಯೇ ನಮಃ, ಶ್ರೀಕೃಷ್ಣಾಯ ನಮಃ ಎಂದು ಹೇಳಬೇಕು. ನಂತರ

**ಶ್ಲೋಕ:** ಉತ್ತಿಷ್ಠಂತು ಭೂತಪಿಶಾಚಾಃ ಯೇ ತೇ ಭೂಮಿಭಾರಕಾಃ
ಏತೇಷಾಂ ಅವಿರೋಧೇನ ಬ್ರಹ್ಮಕರ್ಮಸಮಾರಭೇ

ಎಂದು ಹೇಳಿ ಉದ್ಧರಣೆಯಿಂದ ನೀರನ್ನು ಬಲಗೈಗೆ ತೆಗೆದುಕೊಂಡು ಆ ನೀರನ್ನು ಎಲ್ಲಾ ಕಡೆಯಲ್ಲೂ ಚಿಮುಕಿಸಬೇಕು.

**ಪ್ರಾಣಾಯಾಮ**

ಓಂ ಭೂರ್ಭುವಸ್ಸುವಃ ದೈವೀ ಗಾಯತ್ರೀ ಛಂದಃ ಪ್ರಾಣಾಯಾಮೇ ವಿನಿಯೋಗಃ

(ಪ್ರಾಣಾಯಾಮ ಮಾಡಬೇಕು. ನಾಸಿಕದ ಎಡಗಡೆಯ ರಂಧ್ರದಿಂದ ಗಾಳಿಯನ್ನು ಎಳೆದುಕೊಂಡು, ಗಾಯತ್ರೀಮಂತ್ರವನ್ನು ಜಪಿಸಬೇಕು.)

ಓಂ ಭೂಃ, ಓಂ ಭುವಃ ಓಂ ಸುವಃ ಓಂ ಮಹಃ
ಓಂ ಜನಃ ತಪಃ ಓಗ್ ಮ್ ಸತ್ಯಂ ಓಂ ತತ್ಸ ವಿತುರ್ವರೇಣ್ಯಂ
ಭರ್ಗೋದೇವಸ್ಯ ಧೀ ಮಹಿ ಧಿಯೋಯೋನಃ ಪ್ರಚೋದಯಾತ್
ಓಮಾಪೋ ಜ್ಯೋತೀ ರಸೋಮೃತಂ
ಬ್ರಹ್ಮ ಭೂರ್ಭುವಸ್ಸುವರೋಮ್

(ದೀಪಾರಾಧನೆಯನ್ನು ಮಾಡಿ ಈ ರೀತಿ ಸಂಕಲ್ಪವನ್ನು ಮಾಡಿಕೊಳ್ಳಬೇಕು. )

**ಸಂಕಲ್ಪ :**

ಓಂ ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ, ಶುಭೇ ಶೋಭನೇ ಮುಹೂರ್ತೇ ಆದ್ಯ ಬ್ರಹ್ಮಣಃದ್ವಿತೀಯ ಪರಾರ್ಥೇ ಶ್ವೇತ ವರಾಹಕಲ್ಪೇ ವೈವಸ್ವತ ಮನ್ವಂತರೇ,ಅಷ್ಟಾವಿಂಶತಿ ತಮೇ, ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭರತವರ್ಷೇ ಭರತಖಂಡೇ, ಮೇರೋರ್ದಕ್ಷಿಣ ದಿಗ್ಭಾಗೇ, ಶ್ರೀ ಶೈಲಸ್ಯ-ಪ್ರದೇಶೇ (ಶ್ರೀಶೈಲಕ್ಕೆ ಯಾವ ದಿಕ್ಕಿನಲ್ಲಿದ್ದರೆ ಆ ದಿಕ್ಕಿನ ಹೆಸರನ್ನು ಹೇಳಿಕೊಳ್ಳಬೇಕು.) ಅಸ್ಮಿನ್ ವರ್ತಮಾನೇ ವ್ಯಾವಹಾರಿಕ ಚಾಂದ್ರಮಾನೇನ ಪ್ರಭವಾದಿ ಷಷ್ಟಿ ಸಂವತ್ಸರಾಣಾಂ ಮಧ್ಯೇ ಶ್ರೀವಿಶ್ವಾವಸು ನಾಮಸಂವತ್ಸರೇ, ದಕ್ಷಿಣಾಯನೇ, ವರ್ಷ ಋತೌ, ಭಾದ್ರಪದಮಾಸೇಶುಕ್ಲಪಕ್ಷೇ ಚತುರ್ಥ್ಯಾಂ ತಿಥೌ ಸೌಮ್ಯ ವಾಸರೇ ಯುಕ್ತಾ ಯಾಂ, ಶುಭನಕ್ಷತ್ರೇ, ಶುಭಯೋಗೇ, ಶುಭಕರಣೇ ಏವಂಗುಣವಿಶೇಷಣ ವಿಶಿಷ್ಟಾಯಾಂ, ಶುಭತಿಥೌ, ಶ್ರೀಮಾನ್ ....ಗೋತ್ರಃ ... ನಾಮಧೇಯ, ಶ್ರೀಮತಃ.. ಗೋತ್ರಸ್ಯ ... ನಾಮಧೇಯಸ್ಯ (ಪೂಜೆಯನ್ನು ಮಾಡುವವರು ಗೋತ್ರ, ಹೆಸರನ್ನು ಹೇಳಿಕೊಳ್ಳಬೇಕು. ಪೂಜೆಗೆ ಕುಳಿತಿರುವ ಚಿಕ್ಕ ಮಕ್ಕಳ ಹೆಸರನ್ನು ಹೇಳಬೇಕು.)

ಧರ್ಮಪತ್ನೀ ಸಮೇತಸ್ಯ ಅಸ್ಮಾಕಂ ಸಹಕುಟುಂಬಾನಾಂ ಕ್ಷೇಮಸ್ಥೈರ್ಯ ವಿಜಯಾಯುರಾರೋಗ್ಯೈಶ್ವರ್ಯಾಭಿವೃದ್ಧ್ಯರ್ಥಂ 'ಧರ್ಮಾರ್ಥ ಕಾಮಮೋಕ್ಷ ಚತುರ್ವಿಧ ಫಲಪುರುಷಾರ್ಥ ಸಿದ್ಧ್ಯರ್ಥಂ, ಇಷ್ಟಕಾಮ್ಯಾರ್ಥ ಸಿದ್ಧ್ಯರ್ಥಂ, ಮನೋವಾಂಛಾ ಫಲಸಿದ್ಧ್ಯರ್ಥಂ, ಸಮಸ್ತ ದುರಿತೋಪ ಶಾಂತ್ಯರ್ಥಂ ಸಮಸ್ತ ಮಂಗಳಾವಾಪ್ತ್ಯರ್ಥಂ, ವರ್ಷೇ ವರ್ಷೇ ಪ್ರಯುಕ್ತ ಶ್ರೀವರಸಿದ್ಧಿ ವಿನಾಯಕಚತುರ್ಥೀ ಉದ್ದಿಶ್ಯ ಶ್ರೀವರಸಿದ್ಧಿ ವಿನಾಯಕ ದೇವತಾ ಪ್ರೀತ್ಯರ್ಥಂ ಕಲ್ಪೋಕ್ತಪ್ರಕಾರೇಣ ಯಾವಚ್ಛಕ್ತಿ ಧ್ಯಾನಾವಾಹ ನಾದಿ ಪೂಜಾಂ ಕರಿಷ್ಯೇ. (ಎನ್ನುತ್ತಾ ಬಲಗೈ ಮಧ್ಯದ ಬೆರಳಿನಿಂದ ನೀರನ್ನು ಮುಟ್ಟಬೇಕು) ಆದೌ ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ ಶ್ರೀ ಗಣಾಧಿಪತಿ ಪೂಜಾಂ ಕರಿಷ್ಯೇ. ತದಂಗ ಕಲಶಪೂಜಾಂ ಕರಿಷ್ಯೇ।

**ಕಲಶಪೂಜೆ**

ಕಲಶಂ ಗಂಧ ಪುಷ್ಪಾಕ್ಷತೈ ರಭ್ಯರ್ಚ್ಯ।
ತಸ್ಯೋಪರಿ ಹಸ್ತಂ ನಿಧಾಯ।

**(ಕಲಶವನ್ನು ಇಡುವ ಕಡೆ ಅರಿಶಿನ ಕುಂಕುಮವನ್ನು ಹಚ್ಚಿ, ಅದರ ಮೇಲೆ ನೀರಿನ ಕಲಶವನ್ನು ಇರಿಸಿ, ಆ ಕಲಶಕ್ಕೆಗಂಧಾಕ್ಷತೆಯನ್ನು ಇರಿಸಿ, ಅದರಲ್ಲಿ ತುಳಸೀ ಪತ್ರ ಪುಷ್ಪವನ್ನು ಹಾಕಿ ಬಲಗೈಯನ್ನು ಕಲಶದ ಮೇಲೆ ಇರಿಸಬೇಕು) ನಂತರ**

ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರ ಸ್ಸಮಾಶ್ರಿತಃ
ಮೂಲೇ ತತ್ರ ಸ್ಥಿತೋ ಬ್ರಹ್ಮಾ, ಮಧ್ಯೇ ಮಾತೃಗಣಾಸ್ಥಿತಾಃ
ಕುಕ್ಷೌತು ಸಾಗರಾ ಸ್ಸರ್ವೇ ಸಪ್ತದ್ವೀಪಾ ವಸುಂಧರಾ
ಋಗ್ವೇದೋಥ ಯಜುರ್ವೇಧ ಸ್ಸಾಮವೇದೋ ಹ್ಯಥರ್ವಣಃ।
ಅಂಗೈಶ್ಚ ಸಹಿತಾ ಸ್ಸರ್ವೇ ಕಲಶಾಂಬು ಸಮಾಶ್ರಿತಾಃ
ಆಯಾಂತು ದೇವಪೂಜಾರ್ಥಂ ದುರಿತಕ್ಷಯಕಾರಕಾಃ

(ಈ ಶ್ಲೋಕವನ್ನು ಜಪಿಸುತ್ತಾ ಎಲೆಯನ್ನು ನೀರಿನಲ್ಲಿ ಸವ್ಯಪದ್ಧತಿಯಲ್ಲಿ ತಿರುಗಿಸಬೇಕು. )

**ಶ್ಲೋಕ:** ಗಂಗೇಚ ಯಮುನೇಕೃಷ್ಣೇ ಗೋದಾವರಿ ಸರಸ್ವತೀ
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು॥
ಕಲಶೋದಕೇನ ಪೂಜಾದ್ರವ್ಯಾಣಿ ದೇವಂ ಆತ್ಮಾನಂ ಚ
ಸಂಪ್ರೋಕ್ಷನ್

ವೀಳೇದೆಲೆ ಎಲೆಯಿಂದ ಕಲಶದಲ್ಲಿನ ನೀರನ್ನು ಪೂಜಾದ್ರವ್ಯಗಳ ಮೇಲೆ, ದೈವದ ಮೇಲೆ ಚಿಮುಕಿಸಿ, ನಂತರ ನಿಮ್ಮ ಮೇಲೂ ಸ್ವಲ್ಪ ಚಿಮುಕಿಸಿಕೊಳ್ಳಬೇಕು. ನಂತರ ಅರಿಶಿನದ ಗಣಪತಿಯನ್ನು ಪೂಜಿಸಬೇಕು.

**ಮಹಾಗಣಪತಿ ಪೂಜೆ :**

ಗಣಾನಾಂತ್ವಾಂ ಗಣಪತಿಗ್ಂ ಹವಾಮಹೇ
ಕವಿಂ ಕವೀನಾ ಮುಪಮಶ್ರವಃಸ್ತವಮ್
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣ್ಯಸ್ಪತ್ಯಃ
ಆನಶೃಣ್ವನ್ನೂತಿಭಿಸ್ಸೀದ ಸಾಧನಂ॥
ಶ್ರೀಮಹಾಗಣಾಧಿಪತಯೇ ನಮಃ॥
ಧ್ಯಾನಾವಾಹನಾದಿ ಷೋಡಶೋಪಚಾರ ಪೂಜಾಂ
ಕರಿಷ್ಯೇ॥

(ಮಧ್ಯದ ಬೆರಳಿನಿಂದ ನೀರನ್ನು ಮುಟ್ಟಬೇಕು)

**ಧ್ಯಾನ:**

ಓಂ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ॥

ಎಂಬ ಶ್ಲೋಕವನ್ನು ಪಠಿಸುತ್ತಾ ಹೂವು ಅಕ್ಷತೆಯನ್ನು ಅರಿಶಿನದ ಗಣಪತಿಯ ಪಾದಗಳ ಬಳಿ ಇರಿಸಬೇಕು. ಪೂಜೆಯನ್ನು ದೇವರ ಪಾದಗಳ ಬಳಿ ಮಾತ್ರ ಮಾಡಬೇಕು. ಶಿರಸ್ಸಿನ ಮೇಲೆ ಹೂವಾಗಲಿ ಅಕ್ಷತೆಯನ್ನಾಗಲೀ ಹಾಕಬಾರದು.

ಓಂ ಶ್ರೀ ಮಹಾಗಣಪತಿಂ ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ,ಓಂ ಶ್ರೀಮಹಾಗಣಪತಿಂ ಆವಾಹಯಾಮಿ, ಓಂ ಶ್ರೀ ಮಹಾ ಗಣಪತಿಂ ಆಸನಂ ಸಮರ್ಪಯಾಮಿ (ಹೂಗಳು, ಅಕ್ಷತೆಯನ್ನು ಹಾಕಿ ನಮಸ್ಕಾರ ಮಾಡಬೇಕು.) ನಂತರ (ಉದ್ಧರಣೆಯಿಂದ ನೀರನ್ನು ತೋರಿಸಿ ಅರ್ಘ್ಯ ಪಾತ್ರೆಯೊಳಗೆ ಹಾಕಬೇಕು) ಪಾದಯೋಃ ಪಾದ್ಯಂ ಸಮರ್ಪಯಾಮಿ, ಹಸ್ತಯೋಃ ಅರ್ಘ್ಯಂ ಸಮರ್ಪಯಾಮಿ. ಮುಖೇ ಶುದ್ಧ ಆಚಮನೀಯಂ ಸಮರ್ಪಯಾಮಿ।

ಎಂದು ಹೇಳುತ್ತಾ ಉದ್ಧರಣೆಯಿಂದ ನೀರನ್ನು ಅರಿಶಿನದ ಗಣಪತಿಗೆ ತೋರಿಸಿ ಆ ನೀರನ್ನು ಚಿಕ್ಕ ತಟ್ಟೆಯಲ್ಲಿ ಹಾಕಬೇಕು. (ಅರಿಶಿನದ ಗಣಪತಿಯನ್ನು ಗಂಧ, ಅಕ್ಷತೆ, ಅರಿಶಿನ, ಕುಂಕುಮ ಹೂಗಳಿಂದ ಪೂಜಿಸಬೇಕು. ಅಗರಬತ್ತಿಯನ್ನು ಬೆಳಗಿಸಿ, ಬೆಲ್ಲ ಅಥವಾ ಹಣ್ಣನ್ನು ನೈವೇದ್ಯ ಮಾಡಬೇಕು. ನಂತರ ಷೋಡಶೋಪಚಾರ ಪೂಜೆಯನ್ನು ಮಾಡಬೇಕು.)

ಯಥಾಭಾಗಂ ಗುಡಂ ನಿವೇದಯಾಮಿ।
ಶ್ರೀಮಹಾಗಣಾಧಿಪತಿ ಸ್ಸುಪ್ರಸನ್ನೋಸುಪ್ರೀತೋ।
ವರದೋ ಭವತು। ಶ್ರೀ ಮಹಾಗಣಾಧಿಪತಿಯೇ ನಮಃ

ಎಂದು ಪೂಜೆ ಮಾಡಿದ ಅಕ್ಷೆತೆಯನ್ನು ತೆಗೆದುಕೊಂಡು ತಲೆ ಮೇಲೆ ಇಡಬೇಕು.

ಶ್ರೀ ಮಹಾಗಣಾಧಿಪತಿಯೇ ನಮಃ ಯಥಾಸ್ಥಾನಂ ಪ್ರವೇಶಯಾಮಿ
ಶೋಭನಾರ್ಥೇ ಕ್ಷೇಮಯಾ ಪುನರಾಗಮನಾಯಚ

ಎನ್ನುತ್ತಾ ಅರಿಶಿನದ ಗಣಪತಿಯನ್ನು ಸ್ವಲ್ಪ ಪೂರ್ವದತ್ತ ಕದಲಿಸಿ ---- ಅಕ್ಷತೆಯನ್ನು ಹಾಕಿ ನಮಸ್ಕರಿಸಬೇಕು. ಪುನಃ ಆಚಮನವನ್ನು ಮಾಡಿ, ಮೇಲೆ ತಿಳಿಸಿದ ರೀತಿಯಲ್ಲಿ ಪುನಃ ಸಂಕಲ್ಪವನ್ನು ಮಾಡಬೇಕು.

ಅಥ ಶ್ರೀವರಸಿದ್ಧಿ ವಿನಾಯಕ ಪೂಜಾಂ ಕರಿಷ್ಯೇ,
ತದಂಗ ಪ್ರಾಣ ಪ್ರತಿಷ್ಠಾಪನಂ ಕರಿಷ್ಯೇ-
ಎನ್ನುತ್ತಾ ಬಲಗೈ ಮಧ್ಯ ಬೆರಳಿನಿಂದ ನೀರನ್ನು ಸ್ಪರ್ಶಿಸಬೇಕು.
ಶ್ರೀ ವರಸಿದ್ಧಿ ವಿನಾಯಕ ಪ್ರಾಣಪ್ರತಿಷ್ಠಾಪನೆ
(ವಿಗ್ರಹದ ಮೇಲೆ ಹೂವಿನಿಂದ ಸ್ವಲ್ಪ ಪಂಚಾಮೃತವನ್ನು ಚಿಮುಕಿಸಿ)

ಓಂ ಆಂ ಹ್ರೀಂ ಕ್ರೋಂ ಯಂ ರಂ ಲಂ ವಂ ಶಂ ಷಂ ಸಂ ಹಂ - ಇತ್ಯಾದ್ಯೇನ ಪ್ರಾಣಪ್ರತಿಷ್ಠಾಪನಂ ಕೃತ್ವಾ ನಮಸ್ಕೃತಾ (ನಮಸ್ಕಾರವನ್ನು ಮಾಡುತ್ತಾ) ಓಂ ಶ್ರೀ ವರಸಿದ್ಧಿ ವಿನಾಯಕಾಯ ನಮಃ

**ಶ್ಲೋಕ :** ಸ್ವಾಮಿನ್ ಸರ್ವಜಗನ್ನಾಥ ಯಾವ
ತ್ಪೂಜಾವಸಾನಕಂ
ತಾವತ್ತ್ವಂ ಪ್ರೀತಿಭಾವೇನ ಬಿಂಬೇಸ್ಮಿನ್ ಸನ್ನಿಧಿಂ
ಕುರು॥

ಅವಾಹಿತೋಭವ, ಸ್ಥಾಪಿತೋಭವ, ಸುಪ್ರಸನ್ನೋಭವ, ಅವಕುಂಠಿ ತೋಭವ, ವರದೋಭವ, ಪ್ರಸೀದ ಪ್ರಸೀದ, ಪ್ರಸೀದ (ಎನ್ನುತ್ತಾ ವಿನಾಯಕನ ವಿಗ್ರಹದ ಪಾದಗಳ ಬಳಿ ಅಕ್ಷತೆ, ಹೂವನ್ನು ಹಾಕಿ ನಮಸ್ಕರಿಸಬೇಕು)

**ಷೋಡಶೋಪಚಾರ ಪೂಜೆ**

ಭವಸಂಚಿತ ಪಾಪೌಘ ವಿಧ್ವಂಸನ ವಿಚಕ್ಷಣಮ್।
ವಿಘ್ನಾಂಧಕಾರ ಭಾಸ್ವಂತಂ ವಿಘ್ನರಾಜ ಮಹಂ ಭಜೇ॥
ಓಂ ಏಕ ದಂತಂ ಶೂರ್ಪಕರ್ಣಂ ಗಜವಕ್ತ್ರಂ ಚತುರ್ಭುಜಂ॥
ಪಾಶಾಂಕುಶಧರಂ ದೇವಂ ಧ್ಯಾಯೇತ್ಸಿದ್ಧಿ ವಿನಾಯಕಮ್।
ಉತ್ತಮಂ ಗಣನಾಥಸ್ಯ ವ್ರತಂ ಸಂಪತ್ಕರಂ ಶುಭಂ।
ಭಕ್ತಾಭೀಷ್ಟಪ್ರದಂ ತಸ್ಮಾತ್ ಧ್ಯಾಯೇತ್ತಂ ವಿಘ್ನನಾಯಕಂ।
ಧ್ಯಾಯೇದ್ಗಜಾನನಂದೇವಂ ತಪ್ತಕಾಂಚನ ಸನ್ನಿಭಂ।
ಚತುರ್ಭುಜಂ ಮಹಾಕಾಯಂ ಸರ್ವಾಭರಣಭೂಷಿತಂ॥
ಶ್ರೀವರಸಿದ್ಧಿ ವಿನಾಯಕಸ್ವಾಮಿನೇ ನಮಃ ಧ್ಯಾಯಾಮಿ॥
(ವಿನಾಯಕನ ವಿಗ್ರಹದ ಪಾದಗಳ ಬಳಿ ಹೂಗಳು, ಅಕ್ಷತೆಯನ್ನು ಇರಿಸಿ ನಮಸ್ಕರಿಸಬೇಕು)

**ಆವಾಹನೆ**

ಓಂ ಅತ್ರಾಗಚ್ಛ ಜಗದ್ವಂದ್ಯ ಸುರರಾಜಾರ್ಚಿತೇಶ್ವರ।
ಓಂ ಅನಾಥನಾಥ ಸರ್ವಜ್ಞಗೌರೀ ಗರ್ಭ ಸಮುದ್ಭವ।
ಶ್ರೀ ವರಸಿದ್ಧಿವಿನಾಯಕ ಸ್ವಾಮಿನೇ ನಮಃ ಆವಾಹಯಾಮಿ
(ಪುನಃ ಅಕ್ಷತೆಯನ್ನು ಸಮರ್ಪಿಸಬೇಕು)

**ಆಸನ**

ಮೌಕ್ತಿಕೈಃ ಪುಷ್ಯರಾಗೈಶ್ಚ ನಾನಾರತ್ನೈರ್ವಿರಾಜಿತಮ್
ರತ್ನಸಿಂಹಾಸನಂಚಾರು ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್
ಆಸನಂ ಸಮರ್ಪಯಾಮಿ॥ (ಅಕ್ಷತೆಯನ್ನು ಅಥವಾ ಹೂವನ್ನು ಸಮರ್ಪಿಸಬೇಕು)

**ಅರ್ಘ್ಯ**

ಗೌರೀಪುತ್ರ ನಮಸ್ತೇಽಸು ಶಂಕರಪ್ರಿಯನಂದನ।
ಗೃಹಾಣಾರ್ಘ್ಯಂ ಮಯಾದತ್ತಂ ಗಂಧಪುಷ್ಪಾಕ್ಷತೈರ್ಯುತಮ್।
ಅರ್ಘ್ಯಂ ಸಮರ್ಪಯಾಮಿ। (ಉದ್ಧರಣೆಯಿಂದ ನೀರನ್ನು ಸ್ವಾಮಿಗೆ ತೋರಿಸಿ ಅರ್ಘ್ಯಪಾತ್ರೆಯಲ್ಲಿ ಬಿಡಬೇಕು.)

**ಪಾದ್ಯಂ**

ಗಜವಕ್ತ್ರ ನಮಸ್ತೇಸ್ತು ಸರ್ವಾಭೀಷ್ಟಪ್ರದಾಯಕ।
ಭಕ್ತ್ಯಾಪಾದ್ಯಂ ಮಯಾದತ್ತಂ ಗೃಹಾಣದ್ವಿರಜಾನನ।
ಪಾದ್ಯಂ ಸಮರ್ಪಯಾಮಿ ॥ (ಪುನಃ ಸ್ವಲ್ಪ ನೀರನ್ನು ಸ್ವಾಮಿಗೆ ತೋರಿಸಿ ಸ್ವಾಮಿಯ ಪಾದಗಳ ಮುಂದೆ ಇರಿಸಬೇಕು)

**ಆಚಮನೆ**

ಅನಾಥನಾಥ ಸರ್ವಜ್ಞ ಗೀರ್ವಾಣ ಗಣಪೂಜಿತ।
ಗೃಹಾಣಾಚಮನಂ ದೇವ ತುಭ್ಯಂ ದತ್ತಂ ಮಯಾಪ್ರಭೋ॥
ಆಚಮನೀಯಂ ಸಮರ್ಪಯಾಮಿ ॥ (ಸ್ವಲ್ಪ ನೀರನ್ನು ಸ್ವಾಮಿಗೆ ತೋರಿಸಿ ಅರ್ಘ್ಯಪಾತ್ರೆಯಲ್ಲಿ ಬಿಡಬೇಕು)

### ಮಧುಪರ್ಕಂ

ದಧಿಕ್ಷೀರಸಮಾಯುಕ್ತಂ ಮಧ್ವಾಜ್ಯೇನ ಸಮನ್ವಿತಮ್।
ಮಧುಪರ್ಕಂ ಗೃಹಾಣೇದಂ ಗಜವಕ್ತ್ರ ನಮೋಸ್ತುತೇ॥
ಮಧುಪರ್ಕಂ ಸಮರ್ಪಯಾಮಿ ॥ (ಸ್ವಾಮಿಗೆ ಮಧುಪರ್ಕವನ್ನು ಸಮರ್ಪಿಸಬೇಕು)

### ಪಂಚಾಮೃತ ಸ್ನಾನಂ

ಓಂ ಸ್ನಾನಂ ಪಂಚಾಮೃತೈರ್ದೇವ ಗೃಹಾಣ ಗಣನಾಯಕ।
ಅನಾಥನಾಥ ಸರ್ವಜ್ಞ ಗೀರ್ವಾಣ ಗಣಪೂಜಿತ॥
ಪಂಚಾಮೃತ ಸ್ನಾನಂ ಸಮರ್ಪಯಾಮಿ ॥ (ಹಸುವಿನ ಹಾಲು, ಮೊಸರು, ತುಪ್ಪ, ಸಕ್ಕರೆ, ಜೇನುತುಪ್ಪ ಬೆರೆಸಿದ ಮಿಶ್ರಮವನ್ನು ಒಂದು ಹೂವಿನಲ್ಲಿ ಅದ್ದಿ ಸ್ವಾಮಿಗೆ ಸಮರ್ಪಿಸಬೇಕು)

### ಶುದ್ಧೋದಕ ಸ್ನಾನ

ಗಂಗಾದಿ ಸರ್ವ ತೀರ್ಥೇಭ್ಯಃ ಆಹೃತೈಃ ರಮಲೈರ್ಜಲೈಃ।
ಸ್ನಾನಂ ಕುರುಷ್ವ ಭಗವನ್ನುಮಾಪುತ್ರ ನಮೋಸ್ತುತೇ
ಶುದ್ಧೋದಕಸ್ನಾನಂ ಸಮರ್ಪಯಾಮಿ (ಕಲಶದಲ್ಲಿ ಇರುವ ನೀರಿನಿಂದ ಸ್ನಾನ)

### ವಸ್ತ್ರ

ಓಂ ರಕ್ತವಸ್ತ್ರದ್ವಯಂ ಚಾರು ದೇವಯೋಗ್ಯಂ ಚ ಮಂಗಳಂ।
ಶುಭಪ್ರದಂ ಗೃಹಾಣ ತ್ವಂ ಲಂಬೋದರ ಹರಾತ್ಮಜ॥
ವಸ್ತ್ರಯುಗ್ಮಂ ಸಮರ್ಪಯಾಮಿ॥
(ವಿನಾಯಕನಿಗೆ ವಸ್ತ್ರ ಅಥವಾ ಮನೆಯಲ್ಲಿ ಪೂಜೆಯನ್ನು ಮಾಡುತ್ತಿರುವುದಾದರೆ ಹತ್ತಿಗೆ ಅರಿಶಿನ, ಕುಂಕುಮವನ್ನು ಹಚ್ಚಿ ಅದನ್ನು ವಸ್ತ್ರವನ್ನಾಗಿ ಮಾಡಿ ಸಮರ್ಪಿಸಬಹುದು)

### ಯಜ್ಞೋಪವೀತ

ರಾಜಿತಂ ಬ್ರಹ್ಮಸೂತ್ರಂಚ ಕಾಂಚನಂಚೋತ್ತರೀಯಕಮ್।
ಗೃಹಾಣ ದೇವ ಸರ್ವಧಜ್ಞ ಭಕ್ತಾನಾಮಿಷ್ಟದಾಯಕ॥
ಉಪವೀತಂ ಸಮರ್ಪಯಾಮಿ ॥ (ಯಜ್ಞೋಪವೀತವನ್ನು ಸಮರ್ಪಿಸಬೇಕು)

### ಗಂಧ

ಓಂ ಚಂದನಾಗರು ಕರ್ಪೂರ ಕಸ್ತೂರೀ ಕುಂಕುಮಾನ್ವಿತಂ।
ವಿಲೇಪನಂ ಸುರಶ್ರೇಷ್ಠಂ ಪ್ರೀತ್ಯರ್ಥಂ ಪ್ರತಿಗೃಹ್ಯತಾಮ್॥
ದಿವ್ಯ ಪರಿಮಳ ಗಂಧಂ ಸಮರ್ಪಯಾಮಿ ॥
(ಸ್ವಲ್ಪ ಗಂಧವನ್ನು ಹೂವಿನಲ್ಲಿ ಅದ್ದಿ ಸ್ವಾಮಿಗೆ ಅರ್ಪಿಸಬೇಕು)

### ಅಕ್ಷತೆ

ಓಂ ಅಕ್ಷತಾನ್ ಧವಳಾನ್ ದಿವ್ಯಾನ್ ಶಾಲೀಯಾನ್ ತಂಡುಲಾನ್ ಶುಭಾನ್।
ಗೃಹಾಣ ಪರಮಾನಂದ ಶಂಭುಪುತ್ರ ನಮೋಸ್ತುತೇ॥
ಅಕ್ಷತಾನ್ ಸಮರ್ಪಯಾಮಿ ॥
( ಸ್ವಾಮಿಗೆ ಅಕ್ಷತೆಯನ್ನು ಅರ್ಪಿಸಬೇಕು)

### ಪತ್ರ ಪುಷ್ಪಗಳು

ಓಂ ಸುಗಂಧಾನಿ ಚ ಸುಪುಷ್ಪಾಣಿ ಜಾಜೀಕುಂದಮುಖಾನಿಚ।
ಏಕವಿಂಶತಿ ಪತ್ರಾಣೀ, ಸಂಗೃಹಾಣ ನಮೋಸ್ತುತೇ॥
ಪತ್ರ ಪುಷ್ಪಾಣಿ ಸಮರ್ಪಯಾಮಿ ॥
(ಸ್ವಾಮಿಗೆ ಹೂವಿನಿಂದ ಪೂಜೆ ಮಾಡಬೇಕು)

### ಅಥಾ ಅಂಗಪೂಜೆ

(ಕೆಳಗೆ ನೀಡಿರುವ ನಾಮಗಳನ್ನು ಓದುತ್ತಿರುವಾಗ ಉಳಿದವರು ಅಕ್ಷತೆಯೊಂದಿಗೆ ಪೂಜಿಸಬೇಕು)

ಓಂ ಗಣೇಶಾಯ ನಮಃ - ಪಾದೌ ಪೂಜಯಾಮಿ
(ಸ್ವಾಮಿಯ ಪಾದಗಳ ಮೇಲೆ ಅಕ್ಷತೆಯನ್ನು ಹಾಕಬೇಕು)

ಓಂ ಏಕದಂತಾಯ ನಮಃ - ಗುಲ್ಫೌಪೂಜಯಾಮಿ (ಹಿಮ್ಮಡಿ)
ಓಂ ಶೂರ್ಪಕರ್ಣಾಯ ನಮಃ - ಜಾನುನೀ ಪೂಜಯಾಮಿ। (ಮೊಣಕಾಲುಗಳು)
ಓಂ ವಿಘ್ನರಾಜಾಯ ನಮಃ - ಜಂಘೇ ಪೂಜಯಾಮಿ (ಜಂಘೆ)
ಓಂ ಆಖುವಾಹನಾಯ ನಮಃ - ಊರೂನ್ ಪೂಜಯಾಮಿ (ತೊಡೆಗಳು)
ಓಂ ಹೇರಂಭಾಯ ನಮಃ - ಕಟಿಂ ಪೂಜಯಾಮಿ (ಸೊಂಟ)
ಓಂ ಲಂಬೋದರಾಯ ನಮಃ - ಉದರಂ ಪೂಜಯಾಮಿ (ಹೊಟ್ಟೆ)
ಓಂ ಗಣನಾಥಾಯ ನಮಃ - ನಾಭಿಂ ಪೂಜಯಾಮಿ (ಹೊಕ್ಕಳು)
ಓಂ ಗಣೇಶಾಯ ನಮಃ - ಹೃದಯಂ ಪೂಜಯಾಮಿ (ಹೃದಯ)
ಓಂ ಸ್ಥೂಲಕಂಠಾಯ ನಮಃ - ಕಂಠಂ ಪೂಜಯಾಮಿ (ಕಂಠ)
ಓಂ ಸ್ಕಂದಾಗ್ರಜಾಯ ನಮಃ - ಸ್ಕಂಧೌ ಪೂಜಯಾಮಿ (ಭುಜಗಳು)
ಓಂ ಪಾಶಹಸ್ತಾಯ ನಮಃ - ಹಸ್ತೌ ಪೂಜಯಾಮಿ (ಕೈಗಳು)
ಓಂ ಗಜವಕ್ತ್ರಾಯ ನಮಃ - ವಕ್ತ್ರಂ ಪೂಜಯಾಮಿ (ಮುಖ)
ಓಂ ವಿಘ್ನಹಂತ್ರೇ ನಮಃ - ನೇತ್ರೇ ಪೂಜಯಾಮಿ (ಕಣ್ಣುಗಳು)
ಓಂ ಶೂರ್ಪಕರ್ಣಾಯ ನಮಃ - ಕರ್ಣೌ ಪೂಜಯಾಮಿ (ಕಿವಿಗಳು)
ಓಂ ಫಾಲಚಂದ್ರಾಯ ನಮಃ - ಲಲಾಟಂ ಪೂಜಯಾಮಿ (ಹಣೆ)
ಓಂ ಸರ್ವೇಶ್ವರಾಯ ನಮಃ - ಶಿರಃ ಪೂಜಯಾಮಿ (ಶಿರಸ್ಸು)
ಓಂ ವಿಘ್ನರಾಜಾಯ ನಮಃ - ಸರ್ವಾಂಗಾಣಿ ಪೂಜಯಾಮಿ (ಶರೀರವನ್ನೆಲ್ಲಾ)

### ಏಕವಿಂಶತಿ ಪತ್ರಪೂಜೆ

(ಒಂದೊಂದೇ ನಾಮವನ್ನು ಓದುತ್ತಾ ಪಕ್ಕದಲ್ಲಿ ತಿಳಿಸಿದ ಪತ್ರಗಳಿಂದ ಸ್ವಾಮಿಯನ್ನು ಪೂಜಿಸಬೇಕು)

ಓಂ ಸುಮುಖಾಯ ನಮಃ - ಮಾಚೀಪತ್ರಂ ಪೂಜಯಾಮಿ (ಮಾಚಿಪತ್ರೆ)
ಓಂ ಗಣಾಧಿಪಾಯ ನಮಃ - ಬೃಹತೀಪತ್ರಂ ಪೂಜಯಾಮಿ (ಗರಗ ಪತ್ರೆ)
ಓಂ ಉಮಾಪುತ್ರಾಯ ನಮಃ - ಬಿಲ್ವಪತ್ರಂ ಪೂಜಯಾಮಿ (ಬಿಲ್ವಪತ್ರೆ)
ಓಂ ಗಜಾನನಾಯ ನಮಃ - ದುರ್ವಾಯುಗ್ಮಂ ಪೂಜಯಾಮಿ (ಗರಿಕೆ)
ಓಂ ಹರಸೂನವೇ ನಮಃ - ದತ್ತೂರ ಪತ್ರಂ ಪೂಜಯಾಮಿ (ದತ್ತೂರ ಪತ್ರೆ)
ಓಂ ಲಂಬೋದರಾಯ ನಮಃ - ಬದರೀಪತ್ರಂ ಪೂಜಯಾಮಿ (ಬದರಿ)
ಓಂ ಗುಹಾಗ್ರಜಾಯ ನಮಃ - ಅಪಾಮಾರ್ಗಪತ್ರಂ ಪೂಜಯಾಮಿ (ಉತ್ತರೇಣಿ)
ಓಂ ಗಜಕರ್ಣಾಯ ನಮಃ - ತುಲಸೀಪತ್ರಂ ಪೂಜಯಾಮಿ (ತುಳಸಿ)
ಓಂ ಏಕದಂತಾಯ ನಮಃ - ಚೂತಪತ್ರಂ ಪೂಜಯಾಮಿ (ಮಾವು)
ಓಂ ವಿಕಟಾಯ ನಮಃ - ಕರವೀರಪತ್ರಂ ಪೂಜಯಾಮಿ (ಕಣಿಗಲೆ)
ಓಂ ಭಿನ್ನದಂತಾಯ ನಮಃ - ವಿಷ್ಣುಕ್ರಾಂತಪತ್ರಂ ಪೂಜಯಾಮಿ (ವಿಷ್ಣು ಕ್ರಾಂತ)
ಓಂ ವಟವೇ ನಮಃ - ದಾಡಿಮೀ ಪತ್ರಂ ಪೂಜಯಾಮಿ (ದಾಳಿಂಬೆ)
ಓಂ ಸರ್ವೇಶ್ವರಾಯ ನಮಃ - ದೇವದಾರು ಪತ್ರಂ ಪೂಜಯಾಮಿ (ದೇವದಾರು)
ಓಂ ಫಾಲಚಂದ್ರಾಯ ನಮಃ - ಮರುವಕ ಪತ್ರಂ ಪೂಜಯಾಮಿ (ಮರುಗ)
ಓಂ ಹೇರಂಭಾಯ ನಮಃ - ಸಿಂಧುವಾರಪತ್ರಂ ಪೂಜಯಾಮಿ (ಲಕ್ಕಿಸೊಪ್ಪು)
ಓಂ ಶೂರ್ಪಕರ್ಣಾಯ ನಮಃ - ಜಾಜೀಪತ್ರಂ ಪೂಜಯಾಮಿ (ಜಾಜಿ)
ಓಂ ಸುರಾಗ್ರಜಾಯ ನಮಃ - ಗಂಡಕೀಪತ್ರಂ ಪೂಜಯಾಮಿ (ಗರಿಕೆ, ಹುಲ್ಲು)
ಓಂ ಇಭವಕ್ತ್ರಾಯ ನಮಃ - ಶಮೀಪತ್ರಂ ಪೂಜಯಾಮಿ (ಬನ್ನಿ)
ಓಂ ವಿನಾಯಕಾಯ ನಮಃ - ಅಶ್ವತ್ಥಪತ್ರಂ ಪೂಜಯಾಮಿ (ಅರಳಿ)
ಓಂ ಸುರಸೇವಿತಾಯ ನಮಃ - ಅರ್ಜುನಪತ್ರಂ ಪೂಜಯಾಮಿ (ನಿರ್ಮಟ್ಟಿ)
ಓಂ ಕಪಿಲಾಯ ನಮಃ - ಅರ್ಕಪತ್ರಂ ಪೂಜಯಾಮಿ (ಬಿಳಿ ಎಕ್ಕ)
ಓಂ ಶ್ರೀ ಗಣೇಶ್ವರಾಯ ನಮಃ - ಏಕವಿಂಶತಿ ಪತ್ರಾಣಿ ಪೂಜಯಾಮಿ

ನಂತರ ಶ್ರೀ ವಿನಾಯಕ ಅಷ್ಟೋತ್ತರ ಶತನಾಮವನ್ನು ಓದುತ್ತಾ ಸ್ವಾಮಿಗೆ ಹೂಗಳಿಂದ ಅಥವಾ ಅಕ್ಷತೆಯಿಂದ ಪೂಜೆ ಮಾಡಬೇಕು.

# ಶ್ರೀ ವಿನಾಯಕ ಅಷ್ಟೋತ್ತರ ಶತನಾಮಾವಳಿ

ಓಂ ಗಜಾನನಾಯ ನಮಃ

ಓಂ ಗಣಾಧ್ಯಕ್ಷಾಯ ನಮಃ

ಓಂ ವಿಘ್ನರಾಜಾಯ ನಮಃ

ಓಂ ವಿನಾಯಕಾಯ ನಮಃ

ಓಂ ದ್ವೈಮಾತುರಾಯ ನಮಃ

ಓಂ ದ್ವಿಮುಖಾಯ ನಮಃ

ಓಂ ಪ್ರಮುಖಾಯ ನಮಃ

ಓಂ ಸುಮುಖಾಯ ನಮಃ

ಓಂ ಕೃತಿನೇ ನಮಃ

ಓಂ ಸುಪ್ರದೀಪಾಯ ನಮಃ 10

ಓಂ ಸುಖನಿಧಯೇ ನಮಃ

ಓಂ ಸುರಾಧ್ಯಕ್ಷಾಯ ನಮಃ

ಓಂ ಸುರಾರಿಘ್ನಾಯ ನಮಃ

ಓಂ ಮಹಾಗಣಪತಯೇ ನಮಃ

ಓಂ ಶೂನ್ಯಾಯ ನಮಃ

ಓಂ ಮಹಾಕಾಲಾಯ ನಮಃ

ಓಂ ಮಹಾಬಲಾಯ ನಮಃ

ಓಂ ಹೇರಾಂಬಾಯ ನಮಃ

ಓಂ ಲಂಬಜಠರಾಯ ನಮಃ

ಓಂ ಹ್ರಸ್ವಗ್ರೀವಾಯ ನಮಃ 20

ಓಂ ಮಹೋದರಾಯ ನಮಃ

ಓಂ ಮದೋತ್ಕಟಾಯ ನಮಃ

ಓಂ ಮಹಾವೀರಾಯ ನಮಃ

ಓಂ ಮಂತ್ರಿಣೇ ನಮಃ

ಓಂ ಮಂಗಳಸ್ವರೂಪಾಯ ನಮಃ

ಓಂ ಪ್ರಮಥಾಯ ನಮಃ

ಓಂ ಪ್ರಥಮಾಯ ನಮಃ

ಓಂ ಪ್ರಾಜ್ಞಾಯ ನಮಃ

ಓಂ ವಿಘ್ನಕರ್ತೇ ನಮಃ

ಓಂ ವಿಘ್ನಹಂತ್ರೇ ನಮಃ 30

ಓಂ ವಿಶ್ವನೇತ್ರೇ ನಮಃ

ಓಂ ವಿರಾಟ್ಪತಯೇ ನಮಃ

ಓಂ ಶ್ರೀಪತಯೇ ನಮಃ

ಓಂ ವಾಕ್ಪತಯೇ ನಮಃ

ಓಂ ಶೃಂಗಾರಿಣೇ ನಮಃ

ಓಂ ಆಶ್ರಿತವತ್ಸಲಾಯ ನಮಃ

ಓಂ ಶಿವಪ್ರಿಯಾಯ ನಮಃ

ಓಂ ಪ್ರಮುಖಾಯ ನಮಃ

ಓಂ ಶೀಪ್ರಕಾರಿಣೇ ನಮಃ

ಓಂ ಬಲಾಯ ನಮಃ 40

ಓಂ ಬಲೋತ್ಥಿಯ ನಮಃ

ಓಂ ಭವಾತ್ಮಜಾಯ ನಮಃ

ಓಂ ಪುರಾಣಪುರುಷಾಯ ನಮಃ

ಓಂ ಪೂಷ್ಣೇ ನಮಃ

ಓಂ ಪುಷ್ಕರೋಕ್ಷಿಪ್ತವಾರಿಣೇ ನಮಃ

ಓಂ ಅಗ್ರಗಣ್ಯಾಯ ನಮಃ

ಓಂ ಅಗ್ರಪೂಜ್ಯಾಯ ನಮಃ

ಓಂ ಅಗ್ರಗಾಮಿನೇ ನಮಃ

ಓಂ ಮಂತ್ರಕೃತೇ ನಮಃ

ಓಂ ಚಾಮೀಕರಪ್ರಭಾಯ ನಮಃ 50

ಓಂ ಸರ್ವಸ್ಮೈ ನಮಃ

ಓಂ ಸರ್ವೋಪಾಸ್ಯಾಯ ನಮಃ

ಓಂ ಸರ್ವಕರ್ತ್ರೇ ನಮಃ

ಓಂ ಸರ್ವನೇತ್ರೇ ನಮಃ

ಓಂ ಸರ್ವಸಿದ್ಧಿಪ್ರಸಾದಾಯ ನಮಃ

ಓಂ ಪಂಚಹಸ್ತಾಯ ನಮಃ

ಓಂ ಪಾರ್ವತೀನಂದನಾಯ ನಮಃ

ಓಂ ಪ್ರಭವೇ ನಮಃ

ಓಂ ಕುಮಾರಗುರವೇ ನಮಃ

ಓಂ ಅಕ್ಷೋಭ್ಯಾಯ ನಮಃ 60

ಓಂ ಕುಂಜರಾಸುರ ಭಂಜನಾಯ ನಮಃ

ಓಂ ಪ್ರಮೋದಾಯ ನಮಃ

ಓಂ ಮೋದಕಪ್ರಿಯಾಯ ನಮಃ

ಓಂ ಕಾಂತಿಮತೇ ನಮಃ

ಓಂ ಧೃತಿಮತೇ ನಮಃ

ಓಂ ಕಾಮಿನೇ ನಮಃ

ಓಂ ಕಪಿತ್ಥವನಪ್ರಿಯಾಯ ನಮಃ

ಓಂ ಬ್ರಹ್ಮಚಾರಿಣೇ ನಮಃ

ಓಂ ಬ್ರಹ್ಮರೂಪಿಣೇ ನಮಃ

ಓಂ ಬ್ರಹ್ಮವಿದ್ಯಾದಿ ದಾನಭುವೇ ನಮಃ 70

ಓಂ ಜಿಷ್ಣವೇ ನಮಃ

ಓಂ ವಿಷ್ಣು ಪ್ರಿಯಾಯ ನಮಃ

ಓಂ ಭಕ್ತ ಜೀವಿತಾಯ ನಮಃ

ಓಂ ಜಿತಮನ್ಮಥಾಯ ನಮಃ

ಓಂ ಐಶ್ವರ್ಯಕಾರಣಾಯ ನಮಃ

ಓಂ ಜ್ಯಾಯಸೇ ನಮಃ

ಓಂ ಯಕ್ಷಕಿನ್ನರ ಸೇವಿತಾಯ ನಮಃ

ಓಂ ಗಂಗಾಸುತಾಯ ನಮಃ

ಓಂ ಗಣಾಧೀಶಾಯ ನಮಃ

ಓಂ ಗಂಭೀರನಿನದಾಯ ನಮಃ 80

ಓಂ ವಟವೇ ನಮಃ

ಓಂ ಅಭೀಷ್ಟವರದಾಯ ನಮಃ

ಓಂ ಜ್ಯೋತಿಷೇ ನಮಃ

ಓಂ ಭಕ್ತನಿಧಯೇ ನಮಃ

ಓಂ ಭಾವಗಮ್ಯಾಯ ನಮಃ

ಓಂ ಮಂಗಳಪ್ರದಾಯ ನಮಃ

ಓಂ ಅವ್ಯಕ್ತಾಯ ನಮಃ

ಓಂ ಅಪ್ರಾಕೃತ ಪರಾಕ್ರಮಾಯ ನಮಃ

ಓಂ ಸತ್ಯಧರ್ಮಿಣೇ ನಮಃ

ಓಂ ಸಖಯೇ ನಮಃ 90

ಓಂ ಸರಸಾಂಬುನಿಧಯೇ ನಮಃ

ಓಂ ಮಹೇಶಾಯ ನಮಃ

ಓಂ ದಿವ್ಯಾಂಗಾಯ ನಮಃ

ಓಂ ಮಣಿಕಿಂಕಣಿಮೇಖಲಾಯ ನಮಃ

ಓಂ ಸಮಸ್ತದೇವತಾ ಮೂರ್ತಯೇ ನಮಃ

ಓಂ ಸಹಿಷ್ಣವೇ ನಮಃ

ಓಂ ಸತತೋತ್ಥಿತಾಯ ನಮಃ

ಓಂ ವಿಘಾತಕಾರಿಣೇ ನಮಃ

ಓಂ ವಿಶ್ವಗ್ದೃಶೇ ನಮಃ

ಓಂ ವಿಶ್ವರಕ್ಷಾಕೃತೇ ನಮಃ 100

ಓಂ ಕಲ್ಯಾಣಗುರವೇ ನಮಃ

ಓಂ ಉನ್ಮತ್ತವೇಷಾಯ ನಮಃ

ಓಂ ಅಪರಾಜಿತೇ ನಮಃ

ಓಂ ಸಮಸ್ತ ಜಗದಾಧರಾಯ ನಮಃ

ಓಂ ಸರ್ವೈಶ್ವರ್ಯಪ್ರದಾಯ ನಮಃ

ಓಂ ಅಕ್ರಾಂತ ಚಿದಚಿತ್ಪ್ರಭವೇ ನಮಃ

ಓಂ ವಿಘ್ನೇಶ್ವರಾಯ ನಮಃ

ಓಂ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿನೇ ನಮಃ 108

**ಅಷ್ಟೋತ್ತರಶತನಾಮಪೂಜಾಂ ಸಮರ್ಪಯಾಮಿ**

**(ಅಕ್ಷತೆಗಳು, ಹೂಗಳನ್ನು ಸ್ವಾಮಿಯ ಪಾದಗಳ ಬಳಿ ಸಮರ್ಪಿಸಬೇಕು)**

**ಧೂಪ**

ದಶಾಂಗಂ ಗುಗ್ಗುಲೋಪೇತಂ ಸುಗಂಧಂ ಸುಮನೋಹರಮ್।
ಉಮಾಸುತ ನಮಸ್ತುಭ್ಯಂ ಗೃಹಾಣವರದೋಭವ॥
ದಿವ್ಯ ಪರಿಮಳ ಧೂಪಮಾಘ್ರಾಪಯಾಮಿ

(ಅಗರಬತ್ತಿಯನ್ನು ಹಚ್ಚಿ ಆ ಧೂಪವನ್ನು ಸ್ವಾಮಿಗೆ ತೋರಿಸಿ ಪಕ್ಕದಲ್ಲಿ ಇರುವ ಸ್ಟಾಂಡಿನಲ್ಲಾಗಲೀ, ಬಾಳೆಹಣ್ಣಿಗಾಗಲೀ ಚುಚ್ಚಬೇಕು)

**ದೀಪ**

ಓಂ ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ದ್ಯೋತಿತಂ ಮಯಾ।
ಗೃಹಾಣ ಮಂಗಳಂ ದೀಪಂ ಈಶಪುತ್ರ ನಮೋಸ್ತುತೇ॥
ದೀಪಂ ದರ್ಶಯಾಮಿ

(ದೀಪವನ್ನು ಸ್ವಾಮಿಗೆ ತೋರಿಸಬೇಕು)

**ನೈವೇದ್ಯ**

(ತೆಂಗಿನಕಾಯಿ ಒಡೆದು ನೈವೇದ್ಯ ಮಾಡಬೇಕು. ಅದಕ್ಕೂ ಮೊದಲು ಸ್ನಾನದ ಸಮಯದಲ್ಲಿ ಒಡೆದ ತೆಂಗಿನಕಾಯಿ, ಭಕ್ಷ್ಯಗಳು, ಪಾನಕ, ಕೋಸಂಬರಿ, ಕಡುಬು, ಮೋದಕ, ಬಾಳೆಹಣ್ಣು ಮೊದಲಾದವುಗಳನ್ನು ಸ್ವಾಮಿಯ ಮುಂದೆ ಇರಿಸಬೇಕು)

ಸುಗಂಧಾನ್ ಸುಕೃತಾಂಶ್ಚೈವ್ ಮೋದಕಾನ್ ಘೃತಪಾಚಿತಾನ್।
ನೈವೇದ್ಯಂ ಗೃಹ್ಯತಾಂ ದೇವ ಚರಣಮುದ್ಗೈಃ ಪ್ರಕಲ್ಪಿತಾನ್॥
ಭಕ್ಷ್ಯಂ ಭೋಜ್ಯಂ ಚ ಲೇಹ್ಯಂಚ ಚೋಷ್ಯಂ ಪಾನೀಯ ಮೇವಚ।
ಇದಂ ಗೃಹಾಣ ನೈವೇದ್ಯಂ ಮಯಾದತ್ತಂ ವಿನಾಯಕ॥

ಮಹಾನೈವೇದ್ಯಂ ಸಮರ್ಪಯಾಮಿ
ಎನ್ನುತ್ತಾ ಎಲೆಯಿಂದ ಎಲ್ಲಾ ಪದಾರ್ಥಗಳ ಮೇಲೆ ಸ್ವಲ್ಪ ನೀರನ್ನು ಚಿಮುಕಿಸಬೇಕು. ನಂತರ ಸ್ವಾಮಿಗೆ ನೈವೇದ್ಯವನ್ನು ಮಾಡಬೇಕು.

**ತಾಂಬೂಲ**

ಓಂ ಪೂಗೀಫಲಸಮಾಯುಕ್ತಂ ನಾಗವಲ್ಲೀದಳೈರ್ಯುತಮ್।
ಕರ್ಪೂರ ಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್॥
ತಾಂಬೂಲ ಸಮರ್ಪಯಾಮಿ ॥

( ಮೂರು ವೀಳೇದೆಲೆ, ಅಡಿಕೆ, ಹಣ್ಣು ದಕ್ಷಿಣೆಯಿಂದ ಕೂಡಿದ ತಾಂಬೂಲವನ್ನು ವಿನಾಯಕನ ವಿಗ್ರಹದ ಮುಂದೆ ಅರ್ಪಿಸಿ ನಮಸ್ಕರಿಸಬೇಕು)

**ಪುಷ್ಪ**

ಓಂ ಸಚ್ಚಿದಾನಂದ ವಿಘ್ನೇಶ ಪುಷ್ಕಲಾನಿ ಧನಾನಿ ಚ।
ಭೂಮ್ಯಾಂಸ್ಥಿತಾನಿ ಪುಷ್ಪಾಣಿ ಸ್ವೀಕುರುಷ್ವ ವಿನಾಯಕ॥
ಸುವರ್ಣಮಂತ್ರಪುಷ್ಪಂ ಸಮರ್ಪಯಾಮಿ ॥

**ನೀರಾಜನ**

ಘೃತವರ್ತಿ ಸಹಸ್ರೈಶ್ಚ ಕರ್ಪೂರಶಕಲೈಸ್ತಥಾ
ನೀರಾಜನಂ ಮಯಾದತ್ತಂ ಗೃಹಾಣವರದೋಭವ।
ನೀರಾಜನಂ ಸಮರ್ಪಯಾಮಿ ॥

( ಕರ್ಪೂರವನ್ನು ಬೆಳಗಿಸಿ ಸ್ವಾಮಿಗೆ ಆರತಿಯನ್ನು ಮಾಡಿ, ನಂತರ ಆ ಮಂಗಳಾರತಿಯ ತಟ್ಟೆಯ ಮೇಲೆ ನೀರನ್ನು ಚಿಮುಕಿಸಿ ಕಣ್ಣೀಗೆ ಒತ್ತಿಕೊಳ್ಳಬೇಕು)

**ಮಂತ್ರಪುಷ್ಪ**

(ಹೂವು, ಅಕ್ಷತೆಯನ್ನು ತೆಗೆದುಕೊಂಡು ಎದ್ದುನಿಂತು ಈ ಶ್ಲೋಕವನ್ನು ಪಠಿಸಬೇಕು)

ಸುಮುಖೈಶ್ಚಕದಂತಶ್ಚ ಕಪಿಲೋ ಗಜಕರ್ಣಕಃ
ಲಂಬೋದರಶ್ಚ ವಿಕಟೋ ವಿಘ್ನರಾಜೋ ಗಣಾಧಿಪಃ
ಧೂಮಕೇತು ಗಣಾಧ್ಯಕ್ಷೋ ಫಾಲಚಂದ್ರೋ ಗಜಾನನಃ
ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ
ಅವಿಘ್ನಂ ಕುರುಮೇ ದೇವಾ ಸರ್ವಕಾರ್ಯೇಷು ಸರ್ವದಾಃ

**ಪ್ರದಕ್ಷಿಣೇ**

ಯಾನಿಕಾನಿಚ ಪಾಪಾನಿ ಜನ್ಮಾಂತರಕೃತಾನಿ ಚ।
ತಾನಿತಾನಿ ಪ್ರಣಶ್ಯಂತಿ ಪ್ರದಕ್ಷಿಣ ಪದೇ ಪದೇ ॥
ಪಾಪೋಹಂ ಪಾಪಕರ್ಮೋಹಂ ಪಾಪಾತ್ಮಾ ಪಾಪಸಂಭವಃ॥
ತ್ರಾಹಿಮಾಂ ಕೃಪಯಾ ದೇವ ಶರಣಾಗತ ವತ್ಸಲ ॥
ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ।
ತಸ್ಮಾತ್ಕಾರುಣ್ಯಭಾವೇನ ರಕ್ಷ ರಕ್ಷ ಗಣಾಧಿಪ॥

ಆತ್ಮಪ್ರದಕ್ಷಿಣ ನಮಸ್ಕಾರಾನ್ ಸಮರ್ಪಯಾಮಿ ॥
(ಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಬೇಕು. ಸಾಷ್ಟಾಂಗ ಪ್ರಣಾಮ ಮಾಡುವುದು ಸಂಪ್ರದಾಯ) ನಂತರ ಪುನಃ ಕುಳಿತು ಸ್ವಲ್ಪ ಅಕ್ಷತೆಯನ್ನು ಕೈಯಲ್ಲಿ ಹಿಡಿದುಕೊಳ್ಳಬೇಕು. ಸ್ವಲ್ಪ ನೀರನ್ನು ಅಕ್ಷತೆಯ ಮೇಲೆ ಹಾಕಿ ಈ ಶ್ಲೋಕವನ್ನು ಪಠಿಸಬೇಕು.

**ಕ್ಷಮಾಪ್ರಾರ್ಥನೆ**

ಯಸ್ಯ ಸ್ಮೃತ್ಯಾಚ ನಾಮೋಕ್ತ್ಯಾ ತಪಃ ಪೂಜಾಕ್ರಿಯಾದಿಷು
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಂ ಗಣಾಧಿಪಂ
ಮಂತ್ರಹೀನಂ ಕ್ರಿಯಾಹೀನಂ ಶಕ್ತಿಹೀನಂ ಮಹಾಪ್ರಭೋ।
ಯತ್ಪೂಜಿತಂ ಮಯಾ ದೇವ! ಪರಿಪೂರ್ಣ ತದಸ್ತುತೇ ॥
ಅನಯಾ ಧ್ಯಾನನಾವಹನಾದಿ ಷೋಡಶೋಪಚಾರಾ ಪೂಜ ಯಾಚ,
ಅಷ್ಟೋತ್ತರ ನಾಮಾರ್ಚನ ಯಾಚ, ಅವಸರ, ಮಹಾನಿವೇದನ ಯಾಚ
ಭಗವಾನ್ ಸರ್ವಾತ್ಮಕಃ ಸರ್ವಂ ಶ್ರೀ ಮಹಾಗಣಪತಿ ದೇವತಾರ್ಪಣಮಸ್ತು
ಶ್ರೀ ಮಹಾಗಣಾಧಿಪತಿ ದೇವತಾ ಸುಪ್ರೀತಃ ಸುಪ್ರಸನ್ನೋ ವರದೋ ಭವತು
ಎಂದು ಹೇಳಿ ಅಕ್ಷತೆ ನೀರನ್ನು ಅರ್ಘ್ಯಪಾತ್ರೆಯಲ್ಲಿ ಬಿಡಬೇಕು.

ವಿನಾಯಕನ ವ್ರತಕಥೆಯನ್ನು ನಿಧಾನವಾಗಿ,ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಅರ್ಥವಾಗುವಂತೆ ಓದಬೇಕು.

ಕಥೆಯು ಮುಕ್ತಾಯವಾದ ಮೇಲೆ ಒಂದು ತೆಂಗಿನ ಕಾಯಿಯನ್ನು ಒಡೆದು ವಿನಾಯಕನಿಗೆ ನೈವೇದ್ಯ ಮಾಡಿ, ಕರ್ಪೂರದ ಆರತಿಯನ್ನು ಮಾಡಬೇಕು.

ಈ ರೀತಿ ಪೂಜಿಸಿದ ನಂತರ ವಿನಾಯಕನ ವ್ರತಕತೆಯನ್ನು ಓದುಬೇಕು.

## ಶ್ರೀ ವಿನಾಯಕನ ವ್ರತ ಕಥೆ

**ಗಮನಿಸಿ :** (ಕಥೆಯನ್ನು ಓದುವ ಮೊದಲು ಅಲ್ಲಿರುವ ಭಕ್ತರೆಲ್ಲರಿಗೂ ಸ್ವಲ್ಪ ಹೂವು, ಮಂತ್ರಾಕ್ಷತೆಗಳನ್ನು ನೀಡಿ,ಕಥೆಯು ಮುಗಿದ ಮೇಲೆ ಅದನ್ನು ವಿನಾಯಕನ ಪಾದಗಳ ಬಳಿ ಅರ್ಪಿಸಿ, ನಮಸ್ಕರಿಸಬೇಕೆಂದು ಹೇಳಬೇಕು.

**ಕಥೆ :**

**ಓಂ ಗುರುರ್ ಬ್ರಹ್ಮ ಗುರುರ್ ವಿಷ್ಣುಃ ಗುರುರ್ ದೇವೋ ಮಹೇಶ್ವರಃ।**
**ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ॥**

**ಓಂ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್।**
**ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ॥**

**ಓಂ ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ।**
**ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥**

ಹಿಂದೆ ಚಂದ್ರವಂಶದಲ್ಲಿ **"ಧರ್ಮರಾಜ"** ನೆಂದು ಪ್ರಸಿದ್ಧಿ ಪಡೆದ ಮಹಾರಾಜನಿದ್ದನು. ಅವನಿಗೆ ದೈವ ಬಲವು ಲೋಪಿಸಿದ ಕಾರಣದಿಂದಾಗಿ ದಾಯಾದಿಗಳಿಂದ ರಾಜ್ಯವನ್ನು ಕಳೆದುಕೊಂಡು, ತನ್ನ ತಮ್ಮಂದಿರು, ಪತ್ನಿಯನ್ನು ಕರೆದುಕೊಂಡು ಅರಣ್ಯವಾಸಕ್ಕೆ ಬಂದನು. ಆ ಕಾಡಿನಲ್ಲಿ ಬ್ರಹ್ಮಜ್ಞಾನವನ್ನು ಹೊಂದಿದ ಮಹರ್ಷಿಗಳು ತಪಸ್ಸು ಮಾಡುತ್ತಿದ್ದರು. ಆ ಮಹಾತ್ಮರನ್ನು ನೋಡಿ, ಅವರಿಗೆ ನಮಸ್ಕರಿಸಿ, ಅಲ್ಲಿ ರುವ ಸೂತಮಹಾಮುನಿ ಆಶ್ರಮಕ್ಕೆ ಹೋದನು. ಅಲ್ಲಿ ಸೂತಮಹಾಮುನಿಗೆ ನಮಸ್ಕರಿಸಿ,

ಅವರ ಅನುಮತಿಯೊಂದಿಗೆ ಅಲ್ಲೇ ಕುಳಿತು, ಮುನಿವರ್ಯಾ! ನಮ್ಮ ದಾಯಾದಿಗಳಾದ ಕೌರವರು ನಮ್ಮೊಂದಿಗೆ ಮೋಸದ ಪಗಡೆಯಾಟವನ್ನು ಆಡಿ, ನಮ್ಮ ರಾಜ್ಯವನ್ನೆಲ್ಲಾ ಕಸಿದುಕೊಂಡು ನಮ್ಮನ್ನು, ದ್ರೌಪದಿಯನ್ನು ಬಹಳವಾಗಿ ಹಿಂಸಿಸಿದರು. ನಮಗೆ ಮರೆಯಲಾಗದ ದುಃಖವನ್ನು ನೀಡಿದರು. ನಮ್ಮ ಅದೃಷ್ಟವು ಚೆನ್ನಾಗಿದ್ದುದರಿಂದ ನಿಮ್ಮ ದರ್ಶನ ಭಾಗ್ಯ ದೊರೆಯಿತು. ಇದರಿಂದ ನಮ್ಮ ದುಃಖವು ಕೊನೆಯಾಗುವುದೆಂದು ನಂಬಿದ್ದೇವೆ. ನಮ್ಮನ್ನು ಕರುಣಿಸಿ, ನಮಗೆ ಪುನಃ ನಮ್ಮ ರಾಜ್ಯವು ದೊರೆಯುವಂತೆ ಯಾವುದಾದರೂ ಉಪಾಯವನ್ನು ತಿಳಿಸಿ ಎಂದು ಪ್ರಾರ್ಥಿಸಿದರು. ಆಗ ಸೂತಮಹಾಮುನಿಯು **"ಪಾಂಡವರೇ! ಕೇಳಿ ಹೇಳುತ್ತೇನೆ. ಎಲ್ಲಾ ವ್ರತಗಳಲ್ಲೂ ಉತ್ತಮವಾದ ವ್ರತವೊಂದಿದೆ. ಅದು ಮಾನವರಿಗೆ ಎಲ್ಲಾ ರೀತಿಯ ಸಂಪತ್ತುಗಳನ್ನು, ಭೋಗ ಭಾಗ್ಯಗಳನ್ನೂ, ಸುಖಗಳನ್ನೂ ಪ್ರಸಾದಿಸುತ್ತದೆ. ಎಲ್ಲಾ ಪಾಪಗಳನ್ನೂ ಕಳೆಯುತ್ತವೆ. ವಂಶಾಭಿವೃದ್ಧಿಯನ್ನು ಉಂಟು ಮಾಡುತ್ತದೆ. ಈ ವ್ರತವನ್ನು ಮೊದಲು ಪರಮಶಿವನು ತನ್ನ ಪುತ್ರನಾದ ಕುಮಾರಸ್ವಾಮಿಗೆ ಉಪದೇಶಿಸಿದನು. ಆ ವಿಷಯವನ್ನೆಲ್ಲಾ ನಿಮಗೆ ತಿಳಿಸುತ್ತೇನೆ ಶ್ರದ್ಧೆಯಿಂದ ಕೇಳಿರಿ "** ಎಂದು ಹೇಳಲಾರಂಭಿಸಿದರು.

ಒಮ್ಮೆ ಕುಮಾರಸ್ವಾಮಿಯು ಕೈಲಾಸ ಪರ್ವತದಲ್ಲಿದ್ದ ಪರಮೇಶ್ವರನನ್ನು ನೋಡಿ ನಮಸ್ಕರಿಸಿ, **"ಸ್ವಾಮೀ! ಮಾನವರು ಯಾವ ವ್ರತವನ್ನು ಆಚರಿಸಿದರೆ ಸಂಪತ್ತು, ಸತ್ಸಂತಾನ, ವಂಶಾಭಿವೃದ್ಧಿ, ಧನ ಧಾನ್ಯಾಭಿವೃದ್ಧಿ ಉಂಟಾಗಿ ಸುಖಿಸುವರೋ ಅಂತಹಾ ವ್ರತವನ್ನು ಅನುಗ್ರಹಿಸಿ"** ಎಂದು ಪ್ರಾರ್ಥಿಸಿದನು. ಲೋಕದ ಹಿತವನ್ನು ಬಯಸುತ್ತಿರುವ ಕುಮಾರಸ್ವಾಮಿಯನ್ನು ನೋಡಿ ಸಂತೋಷಿಸಿದ ಪರಮೇಶ್ವರನು, ಕುಮಾರಾ! ನೀನು ಕೇಳಿದ ಎಲ್ಲವನ್ನು ಅನುಗ್ರಹಿಸುವಂತಹಾ ಒಂದು ಅದ್ಭುತವಾದ ವ್ರತವಿದೆ. ಅದನ್ನು **'ವಿನಾಯಕನ ವ್ರತ'** ಎಂದು ಕರೆಯುತ್ತಾರೆ. ಆ ವ್ರತವನ್ನು **"ಭಾದ್ರಪದ ಶುಕ್ಲ ಚವಿತಿಯಂದು"** ಭಕ್ತಿ ಶ್ರದ್ಧೆಗಳಿಂದ ಆಚರಿಸಬೇಕು.

ಈ ಅದ್ಭುತವಾದ ವ್ರತವನ್ನು ಹಿಂದೆ ದೇವತೆಗಳು, ಮುನಿಗಳು, ಗಂಧರ್ವರೂ, ಕಿನ್ನರರು, ಮೊದಲಾದವರು ಭಕ್ತಿಯಿಂದ ಆಚರಿಸಿದರು.ಆದ್ದರಿಂದ ಓ ಧರ್ಮರಾಜಾ! ನೀನು ಈ ವಿನಾಯಕನ ವ್ರತವನ್ನು ನೇಮ ನಿಷ್ಠೆಗಳಿಂದ ಆಚರಿಸು, ನಿನಗೆ ಜಯ, ರಾಜ್ಯ, ನೀನು ಕಳೆದುಕೊಂಡಿರುವ ಎಲ್ಲಾ ಸಂಪತ್ತುಗಳೂ ನಿನ್ನದಾಗುತ್ತವೆ. ಈ ವ್ರತವನ್ನು ಆಚರಿಸಿ, ದಮಯಂತಿಯು ನಳನನ್ನು ಗಂಡನನ್ನಾಗಿ ಪಡೆದಳು. ಶ್ರೀಕೃಷ್ಣನು ಆಚರಿಸಿ, ಜಾಂಬವತಿಯನ್ನು ಮತ್ತು ಶಮಂತಕಮಣಿಯನ್ನು ಪಡೆದನು. ಆ ಕಥೆಯನ್ನು ಹೇಳುತ್ತೇನೆ ಕೇಳು.

ಪೂರ್ವಕಾಲದಲ್ಲಿ **'ಸತ್ರಾಜಿತ್ತು'** ಎಂಬ ರಾಜನು ಸೂರ್ಯನ ವರಪ್ರಭಾವದಿಂದ ದಿನವೂ ಎಂಟು ಮಣ ಬಂಗಾರವನ್ನು ನೀಡುವಂತಹಾ **'ಶಮಂತಕ'** ಎಂಬ ದಿವ್ಯಮಣಿಯನ್ನು ಪ್ರಸಾದವಾಗಿ ಪಡೆದಿದ್ದನು. ಸತ್ರಾಜಿತ್ತುವಿನ ತಮ್ಮನಾದ ಪ್ರಸೇನನು ಆ ಮಣಿಯನ್ನು ತನಗೆ ನೀಡಬೇಕೆಂದು ಕೇಳಿದ್ದರಿಂದ ಸತ್ರಾಜಿತ್ತುವು ಆ ಮಣಿಯನ್ನು ಅವನಿಗೆ ನೀಡಿದನು. ಪ್ರಸೇನನು ಆ ಮಣಿಯನ್ನು ಧರಿಸಿ, ಸತ್ರಾಜಿತ್ತುವನ್ನು ನೋಡಿ, ಒಂದು ವೇಳೆ ಈ ಮಣಿಯನ್ನು ಶ್ರೀಕೃಷ್ಣನು ಕೇಳಿದರೆ ಕೊಡುವುದಿಲ್ಲವೆಂದು ಹೇಳಿದನು. ಒಂದು ದಿನ ಪ್ರಸೇನನು ಈ ಮಣಿಯನ್ನು ಧರಿಸಿ, ಬೇಟೆಗೆ ಹೋದನು. ಅಲ್ಲಿ ಒಂದು ಸಿಂಹವು ಆ ಮಣಿಯನ್ನು ಮಾಂಸದ ತುಂಡು ಎಂದು ಭಾವಿಸಿ, ಅವನನ್ನು ಕೊಂದು, ಆ ಮಣಿಯನ್ನು ತೆಗೆದುಕೊಂಡು ಹೋಗುತ್ತಿರುವಾಗ ಅದನ್ನು ನೋಡಿದ ಒಂದು ಕರಡಿಯು ಸಿಂಹವನ್ನು ಕೊಂದು ಆ ಮಣಿಯನ್ನು ತನ್ನ ಗುಹೆಯಲ್ಲಿ ಉಯ್ಯಾಲೆಯಲ್ಲಿ ಮಲಗಿದ್ದ ತನ್ನ ಮಗಳಿಗೆ ಆಟವಾಡಿಕೊಳ್ಳುವುದಕ್ಕೆ ತಂದು ಕೊಟ್ಟಿತು. ಆ ಕರಡಿಯೇ ಜಾಂಬವಂತನು!

ಪ್ರಸೇನನ ಮರಣವಾರ್ತೆಯನ್ನು ಕೇಳಿದ ಸತ್ರಾಜಿತನು "ಕೃಷ್ಣನೇ ಆ ಮಣಿಯ ಮೇಲಿನ ಆಸೆಯಿಂದ ತನ್ನ ತಮ್ಮನನ್ನು ಕೊಂದು ಆ ಮಣಿಯನ್ನು ಅಪಹರಿಸಿದ್ದಾನೆಂದು" ಪ್ರಚಾರ ಮಾಡಿದನು. ಆದರೆ ಅವನನ್ನು ಕೊಂದಿದ್ದು ಸಿಂಹ! ಆದರೆ ಆ ಅಪವಾದ ಕೃಷ್ಣನ ಮೇಲೆ ಬಂದಿತ್ತು. ತನಗೆ ಉಂಟಾದ ಅಪವಾದವನ್ನು ಕಳೆದುಕೊಳ್ಳಬೇಕೆಂದು ಕೃಷ್ಣನು ಮಣಿಯನ್ನು ಹುಡುಕಿಕೊಂಡು ಅರಣ್ಯಕ್ಕೆ ಹೋದನು. ಅಲ್ಲಿ ಸತ್ತು ಬಿದ್ದಿದ್ದ ಪ್ರಸೇನನನ್ನು, ಅಲ್ಲೇ ಮತ್ತೊಂದೆಡೆ ಸತ್ತು ಬಿದ್ದಿದ್ದ ಸಿಂಹವನ್ನು ನೋಡಿದನು. ನಂತರ ಹೆಜ್ಜೆಯ ಗುರುತನ್ನು ಅನುಸರಿಸುತ್ತಾ ಗುಹೆಯೊಳಗೆ ಹೋದನು. ಅಲ್ಲಿ ಮಣಿಯೊಂದಿಗೆ ಆಟವಾಡಿಕೊಳ್ಳುತ್ತಿದ್ದ ಜಾಂಬವತಿಯನ್ನು (ಜಾಂಬವಂತನ ಮಗಳು) ನೋಡಿದನು. ಕೃಷ್ಣನು ಆ ಮಣಿಯನ್ನು ಕೇಳುತ್ತಿದ್ದಾಗ ಜಾಂಬವಂತನು ಅಲ್ಲಿಗೆ ಬಂದು ತಡೆದನು. ಶ್ರೀಕೃಷ್ಣನಿಗೂ ಜಾಂಬವಂತನಿಗೂ 28 ದಿನಗಳ ಕಾಲ ಘೋರವಾದ ಯುದ್ಧವು ನಡೆಯಿತು. ಜಾಂಬವಂತನು ಕೊನೆಗೆ ತನ್ನ ಬಲವನ್ನು ಕಳೆದುಕೊಂಡನು. ತನನ್ನು ಬಲಹೀನನನ್ನಾಗಿ ಮಾಡಿದ ವ್ಯಕ್ತಿಯು ಅಂದಿನ ಶ್ರೀ ರಾಮನೇ ಎಂದು ಗ್ರಹಿಸಿ, "ಸ್ವಾಮಿ! ನನ್ನ ಅಪರಾಧವನ್ನು ಕ್ಷಮಿಸು.

ಅಂದು ನೀವು ವರವನ್ನು ಕೇಳಿಕೋ ಎಂದಾಗ ನಿಮ್ಮೊಂದಿಗೆ ದ್ವಂದ್ವ ಯುದ್ಧವನ್ನು ಬಯಸಿದೆ. ಆಗ ನೀವು "ಮುನ್ಮುಂದೆ ಭವಿಷ್ಯದಲ್ಲಿ ನಿನ್ನ ಕೋರಿಕೆ ನೆರವೇರುತ್ತದೆ ಎಂದೇ ಹೇಳಿದ್ದಿರಿ'' ಅಂದಿನಿಂದ ನಿಮ್ಮನಾಮ ಸ್ಮರಣೆಯಲ್ಲೇ ಕಾಲ ಕಳೆಯುತ್ತಿದ್ದೇನೆ. ನನ್ನ ಅದೃಷ್ಟದಿಂದಾಗಿ ಇಂದು ನನ್ನ ಆಸೆ ಈಡೇರಿತು. ನನ್ನ ದೋಷವನ್ನು ಕ್ಷಮಿಸಿ ಎಂದು ಹಲವು ವಿಧ ಗಳಲ್ಲಿ ಪ್ರಾರ್ಥಿಸಿದನು.

ಅವನ ಮಾತಿನಿಂದ ಸಂತೋಷಗೊಂಡ ಶ್ರೀಕೃಷ್ಣನು, "ಜಾಂಬ ವಂತಾ! ಶಮಂತಕಮಣಿಯನ್ನು ಕದ್ದೆನೆಂಬ ಅಪವಾದವನ್ನು ಕಳೆದು ಕೊಳ್ಳಬೇಕೆಂದು ಇಲ್ಲಿಗೆ ಬಂದೆ. ಆ ಮಣಿಯನ್ನು ನನಗೆ ನೀಡು ಹೊರಡು ತ್ತೇನೆ'' ಎಂದನು. ಆಗ ಜಾಂಬವಂತನು ಬಹಳ ಸಂತೋಷದಿಂದ ಶಮಂತಕಮಣಿಯೊಂದಿಗೆ ತನ್ನ ಮಗಳಾದ ಜಾಂಬವತಿಯನ್ನೂ ನೀಡಿ ವಿವಾಹ ಮಾಡಿದನು. ಶ್ರೀಕೃಷ್ಣನು ಸಂತೋಷದಿಂದ ಶಮಂತಕಮಣಿ ಹಾಗೂ ಕನ್ಯಾಮಣಿಯೊಂದಿಗೆ ದ್ವಾರಕಾನಗರಕ್ಕೆ ಬಂದು, ಸತ್ರಾಜಿತ್ತು ವನ್ನು ಕರೆದು, ನಡೆದ ಘಟನೆಗಳನ್ನು ಸಭೆಯಲ್ಲಿ ಎಲ್ಲರ ಮುಂದೂ ವಿವರಿಸಿದನು. ವಿಷಯವನ್ನೆಲ್ಲಾ ತಿಳಿದುಕೊಂಡ ಸತ್ರಾಜಿತನು ತಾನು ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು, ಮಣಿಯೊಂದಿಗೆ ತನ್ನ ಮಗ ಳಾದ ಸತ್ಯಭಾಮೆಯನ್ನೂ ನೀಡಿ ಕೃಷ್ಣನಿಗೆ ವಿವಾಹ ಮಾಡಿಕೊಟ್ಟನು. ಕೃಷ್ಣನು ಶಮಂತಕಮಣಿಯು ತನಗೆ ಅಗತ್ಯವಿಲ್ಲವೆಂದು ತಿಳಿಸಿ ಸತ್ಯಭಾಮೆಯನ್ನು ಮಾತ್ರಾ ಸ್ವೀಕರಿಸಿದನು.

ಈ ವಿನಾಯಕಚೌತಿಯಂದು ಹಾಲಿನ ಬಟ್ಟಲಿನಲ್ಲಿ ಚಂದ್ರನ ಬಿಂಬವನ್ನು ನೋಡಿದ ಕಾರಣದಿಂದಾಗಿ ಕೃಷ್ಣನು ಈ ಅಪವಾದವನ್ನು ಎದುರಿಸಿದನು. ಒಮ್ಮೆ ಲಂಬೋದರನಾದ ವಿನಾಯಕನನ್ನು ನೋಡಿ ಚಂದ್ರನು ಅಪಹಾಸ್ಯ ಮಾಡಿದ ಕಾರಣದಿಂದ, ಕೋಪಗೊಂಡ ಪಾರ್ವತಿ ದೇವಿಯು "ಚಂದ್ರಾ! ಚೌತಿಯಂದು ನಿನ್ನ ಮುಖವನ್ನು ನೋಡಿದವರು ಅಕಾರಣವಾಗಿ ಅಪವಾದವನ್ನು ಎದುರಿಸುತ್ತಾರೆ ಎಂದು ಶಾಪ ಕೊಟ್ಟಳು.'' ಚಂದ್ರನು ತನ್ನ ನಡವಳಿಕೆಗೆ ಪಶ್ಚಾತ್ತಾಪ ಪಡುತ್ತಾ ಪಾರ್ವತಿ ಯನ್ನು ಪ್ರಾರ್ಥಿಸಿದಾಗ "ಭಾದ್ರಪದ ಶುದ್ಧ ಚೌತಿಯಂದು ವಿನಾಯಕ ನನ್ನು ಪೂಜಿಸಿದವರಿಗೆ ಈ ಅಪವಾದವು ಕಳೆಯುತ್ತದೆ'' ಎಂದು ಅನು ಗ್ರಹಿಸಿದ ವಿಷಯವನ್ನು ತಿಳಿಸಿ, ಒಂದು ದಿನ ಹಸುವಿನ ಹಾಲನ್ನು ಕರೆಯುತ್ತಿರುವಾಗ ಆ ಹಾಲಿನಲ್ಲಿ ಚೌತಿಯ ವಿನಾಯಕನನ್ನು ನೋಡಿದ ಕಾರಣದಿಂದ ಅವನಿಗೆ ಇಂತಹಾ ಅಪವಾದವು ಉಂಟಾಗಿದೆಯೆಂದು ವಿವರಿಸಿ, ತಾನು ಈ ವಿನಾಯಕ ವ್ರತವನ್ನು ಮಾಡಿದ್ದರಿಂದ ಆ ಅಪ ವಾದವು ತೊಲಗಿತೆಂದು ಶುಭಗಳನ್ನು ಹೊಂದಿರುವೆನೆಂದು ಆದ್ದರಿಂದ ಭಾದ್ರಪದ ಶುದ್ಧ ಚೌತಿಯಂದು ಒಂದು ವೇಳೆ ಚಂದ್ರನನ್ನು ನೋಡಿ ದರೂ ಆ ದಿನ ಹಗಲು ವಿನಾಯಕನ ವ್ರತವನ್ನು ಮಾಡಿ, ಈ ಶಮಂತಕ ಮಣಿ ವೃತ್ತಾಂತವನ್ನು ಕೇಳಿ, ಅಕ್ಷತೆಗಳನ್ನು ಶಿರಸ್ಸಿನ ಮೇಲೆ ಧರಿಸಿದ ವರಿಗೆ ಎಂತಹ ಅಪವಾದಗಳೂ ಬರುವುದಿಲ್ಲ'' ಎಂದು ಅನುಗ್ರಹಿಸಿ ದರು. ನಂತರ ಭಗೀರಥನು ಗಂಗೆಯನ್ನು ಭೂಮಿಗೆ ತರುವಾಗ, ದೇವತೆಗಳು ದಾನವರು ಕ್ಷೀರಸಾಗರವನ್ನು ಕಡೆದು ಅಮೃತವನ್ನು ಪಡೆ ಯುವಾಗ, ಸಾಂಬನು ತನ್ನ ಕುಷ್ಠ ರೋಗವನ್ನು ನಿವಾರಿಸಿಕೊಳ್ಳುವುದ ಕ್ಕಾಗಿ, ಈ ವ್ರತವನ್ನು ಆಚರಿಸಿ ತಮ್ಮ ತಮ್ಮ ಕೋರಿಕೆಗಳನ್ನು ಪಡೆದು ಕೊಂಡರು ಎಂದು ವಿವರಿಸಿದನು.

ಹೀಗೆ ಸೂತಮಹಾಮುನಿಯು ಹೇಳಿದ ಪ್ರಕಾರ ಧರ್ಮರಾಜನು ಈ ವ್ರತವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿ, ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದು ಸುಖದಿಂದ ಜೀವಿಸಿದನು. ಈ ವಿನಾಯಕನನ್ನು ಪೂಜಿಸುವುದರಿಂದ ಎಲ್ಲಾ ಆಸೆಗಳೂ ನೆರವೇರುವುವು. ಆದ್ದರಿಂದ ಈ ಸ್ವಾಮಿಯನ್ನು 'ವರಸಿದ್ಧಿ ವಿನಾಯಕ' ಎಂದು ಕರೆಯುತ್ತಾರೆ. ಈ ವಿನಾಯಕ ಸ್ವಾಮಿಯನ್ನು ಪೂಜಿಸುವುದರಿಂದ ವಿದ್ಯಾರ್ಥಿಗೆ ವಿದ್ಯೆಯು, ಜಯವನ್ನು ಬಯಸುವವರಿಗೆ ಜಯವು, ಸಂತಾನ ವನ್ನು ಬಯಸು ವವರಿಗೆ ಸತ್ಸಂತಾನವು, ಒಳ್ಳೆಯ ಪತಿಯನ್ನು ಬಯಸುವವರಿಗೆ ಒಳ್ಳೆಯ ಪತಿಯು, ಕನ್ಯಾರ್ಥಿಗೆ ಕನ್ಯೆಯು, ಮುತ್ತೈದೆಗೆ ಸೌಭಾಗ್ಯವು ಸಿದ್ಧಿ ಸುವುವು. ವಿಧವೆಯು ಪೂಜಿಸಿದರೆ ನಂತರದ ಜನ್ಮದಲ್ಲಿ ವೈಧವ್ಯವು ಬರುವುದಿಲ್ಲ.ಎಲ್ಲಾ ವರ್ಣದವರೂ, ವಯಸ್ಸಿನ ತಾರತಮ್ಯವಿಲ್ಲದಂತೆ ಯಥಾವಿಧಿಯಾಗಿ ಈ ವ್ರತವನ್ನು ಆಚರಿಸುವುದರಿಂದ ವಿನಾಯಕನ ಕೃಪೆಯಿಂದ ಎಲ್ಲಾ ಕಾರ್ಯಗಳು ಫಲವನ್ನು ನೀಡುತ್ತವೆ. ಪುತ್ರ, ಪೌತ್ರಾದಿ ಅಭಿವೃದ್ಧಿಯು ಪಡೆದು ವಂಶಾಭಿವೃದ್ಧಿವುಂಟಾಗುತ್ತದೆ ಸಂಪತ್ತು ಉಂಟಾಗುತ್ತದೆ. ಎಲ್ಲಾ ಕೆಲಸಗಳಲ್ಲೂ ಅಡ್ಡಿ ಆತಂಕಗಳು ದೂರವಾಗಿ, ಎಲ್ಲಾ ಕೆಲಸಗಳೂ ನಿರ್ವಿಘ್ನವಾಗಿ ನಡೆಯುತ್ತವೆ ಎಂದು ತಿಳಿಸಿದನು.

**ಫಲಸ್ತುತಿ:**

ಈ ವ್ರತಕಥೆಯನ್ನು ಹೇಳಿದವರಿಗೂ,ಕೇಳಿದವರಿಗೂ, ಅನೇಕ ಶುಭಫಲಗಳು ಉಂಟಾಗಿ ವಿನಾಯಕನ ಕೃಪೆಯು ಲಭಿಸುತ್ತದೆ.

**ಉದ್ಯಾಪನ**

**ಯಜ್ಞೇನ ಯಜ್ಞ ಮಯಜಂತ ದೇವಾಃ ತಾನಿ ಧರ್ಮಾನಿ ಪ್ರಥಮಾನ್ಯಾಸನ್**
**ತೇ ಹನಾಕಂ ಮಹಿಮಾನಃ ಸಚಂತೇ ಯತ್ರಪೂರ್ವೇ ಸಾಧ್ಯಾ ಸಂತಿ ದೇವಾಃ**
**ಶ್ರೀಮಹಾಗಣಾಧಿಪತಯೇ ನಮಃ ಯಥಾಸ್ಥಾನಂ ಪ್ರವೇಶಯಾಮಿ**
**ಶೋಭನಾರ್ಥಂ ಪುನರಾಗಮನಾಯಚ**

ಎಂಬ ಮಂತ್ರವನ್ನು ಓದುತ್ತಾ ವಿಘ್ನಾಧಿಪತಿಯನ್ನು ಈಶಾನ್ಯ ದಿಕ್ಕಿಗೆ ಕದಲಿಸಿ ಸ್ವಾಮಿಗೆ ಉದ್ಯಾಪನೆಯನ್ನು ಮಾಡಬೇಕು. (ನಿತ್ಯಪೂಜೆಯನ್ನು ಮಾಡಿ ಚೌತಿಯಿಂದ 3,5,7,9,11 ದಿನಗಳಲ್ಲಿ ನಿಮರ್ಜನೆಯನ್ನು ಮಾಡಬೇಕು. ಆ ದಿನ ಈ ಮಂತ್ರವನ್ನು ಪಠಿಸಿ, ಉದ್ಯಾಪನೆಯನ್ನು ಮಾಡಬೇಕು.

**ಅಕಾಲ ಮೃತ್ಯುಹರಣಂ ಸರ್ವವ್ಯಾಧಿ ನಿವಾರಣಂ ಸಮಸ್ತ ಪಾಪಕ್ಷಯಕರಂ ಶ್ರೀಮಹಾಗಣಪತಿ ಪಾದೋದಕಂ ಪಾವನಂ ಶುಭಂ**

ಎನ್ನುತ್ತಾ ಪಂಚಾಮೃತ, ತೆಂಗಿನಕಾಯಿಯ ನೀರನ್ನು ಬೆರೆಸಿ ತೀರ್ಥವ ನ್ನಾಗಿ ತೆಗೆದುಕೊಳ್ಳಬೇಕು. ನಂತರ ಪೂಜೆಯನ್ನು ಮಾಡಿ ಅಕ್ಷತೆಯನ್ನು ತೆಗೆದುಕೊಂಡು ಶಿರಸ್ಸಿನ ಮೇಲೆ ಹಾಕಿಕೊಳ್ಳಬೇಕು. ಹಿರಿಯರೂ ಆ ಅಕ್ಷತೆಯನ್ನೂ ಶಿರಸ್ಸಿನ ಮೇಲೆ ಹಾಕಿಕೊಳ್ಳಬೇಕು.

**ಸರ್ವೇಜನಾಸ್ಸುಖಿನೋ ಭವಂತು**
**ಓಂ ಶಾಂತಿ ಶಾಂತಿ ಶಾಂತಿಃ**










## ತಿರುಮಲೆ ತಿರುಪತಿ ದೇವಸ್ಥಾನಗಳು

# ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ













- ‘ಸಪ್ತಗಿರಿ’ ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- ‘ಸಪ್ತಗಿರಿ’ ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- ‘ಸಪ್ತಗಿರಿ’ ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- ‘ಸಪ್ತಗಿರಿ’ ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- ‘ಸಪ್ತಗಿರಿ’ ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ. 2400/-
- ‘ಸಪ್ತಗಿರಿ’ ವಿದೇಷಿ ವಾರ್ಷಿಕ ಚಂದಾ ರೂ. 1030/-
- ‘ಸಪ್ತಗಿರಿ’ ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./**Online (ttdevasthanams.ap.gov.in)** ಮೂಲಕ ಮಾಡಬಹುದು.
- ‘ಸಪ್ತಗಿರಿ’ ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು, ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ. ಅಂಚೆ ಮೂಲಕ, ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್,ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯ ಬೇಕು.
- ‘ಸಪ್ತಗಿರಿ’ ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್**(Chiefeditortpt@gmail.com)** ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 0877-226435,0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್, ತಿರುಪತಿ-517507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

# ವರಮಹಾಲಕ್ಷ್ಮೀ ವ್ರತ




**ಶ್ರೀಮತಿ. ಕೆ.ವಿ. ಪದ್ಮಾವತಿ**
**97437 22327**

ಶ್ರಾವಣದಲ್ಲಿ ಬರುವ ಪ್ರಮುಖ ಹಬ್ಬಗಳ ಪೈಕಿ ಶ್ರೀ ವರಮಹಾಲಕ್ಷ್ಮೀ ಹಬ್ಬವೂ ಒಂದು. ಇದು ಮುತ್ತೈದೆಯರೆ ಆಚರಿಸುವ ವಿಶೇಷ ವ್ರತ. ಧನ ಸಂಪತ್ತಿನ ಒಡತಿಯ ಆರಾಧನೆಯಷ್ಟೇ ಅಲ್ಲ, ವಿದ್ಯಾ ಬುದ್ಧಿ, ಧಾನ್ಯ ಸೇರಿ ಎಲ್ಲ ಒಳಿತುಗಳನ್ನು ಆಹ್ವಾನಿಸುವುದಕ್ಕೆ ಇರುವ ವ್ರತ ಎಂದರೆ ತಪ್ಪಿಲ್ಲ. ಹೀಗಾಗಿ ಇದು ಲೋಕೋದ್ಧಾರದ ವ್ರತಾಚರಣೆಯೂ ಹೌದು. ಶ್ರಾವಣ ಮಾಸವನ್ನು ಹಬ್ಬಗಳ ಹೆಬ್ಬಾಗಿಲು ಎಂದರೆ ತಪ್ಪಾಗಲಾರದು ಕಾರಣ ಅಲ್ಲಿಂದ ಪ್ರಾರಂಭ ಆಗುವ ಹಬ್ಬಗಳು ಕುಟುಂಬ ಸಮೇತ ನಾನಾ ವಿಧದಲ್ಲಿ ದೇವತಾರಾಧನೆಯನ್ನು ಮಾಡಲು ಅನುವು ಮಾಡಿ ಕೊಡುತ್ತವೆ.

ಶ್ರಾವಣ ಮಾಸದಲ್ಲಿ ನಾಗರಪಂಚಮಿಯ ನಂತರ ಬರುವ ಪ್ರಮುಖವಾದ ಹಬ್ಬ ಶ್ರೀವರಮಹಾಲಕ್ಷ್ಮೀ ವ್ರತ. ಸಾಮಾನ್ಯವಾಗಿ ಲಕ್ಷ್ಮೀ ಎಂದರೆ ನಮಗೆ ಹಣ ಹಾಗೂ ಐಶ್ವರ್ಯ ಮಾತ್ರ ನೀಡುವ ದೇವತೆ ಎಂಬ ಕಲ್ಪನೆ ಇದೆ. ಆದರೆ ಸತ್ಯವಾಗಿ ನೋಡಿದರೆ ವಿದ್ಯಾವೀಣಾಲಕ್ಷ್ಮೀ ಆಗಿ ವಿದ್ಯಾರ್ಥಿಗಳಿಗೆ ವಿದ್ಯೆ, ಧಾನ್ಯ ಲಕ್ಷ್ಮೀ ಸ್ವರೂಪದಲ್ಲಿ ರೈತರಿಗೆ ಹಾಗೂ ನಮ್ಮ ಮನೆಗಳಲ್ಲಿ ಧಾನ್ಯ ತುಂಬಿ ವೀರಲಕ್ಷ್ಮೀ ಆಗಿ ಎಲ್ಲೆಡೆ ನಮಗೆ ಜಯ ತಂದುಕೊಡಲು ಅಷ್ಟಲಕ್ಷ್ಮೀ ಸ್ವರೂಪದಲ್ಲಿ ಆ ಲಕ್ಷ್ಮೀದೇವಿ ನಿರಂತರವಾಗಿ ಅವಶ್ಯ ಅಂಥಃ ಮಹಾಲಕ್ಷ್ಮೀ ದೇವಿಯನ್ನು ಶ್ರಾವಣ ಮಾಸದ ಹುಣ್ಣಿಮೆಗೂ ಮೊದಲು ಬರುವ ಶುಕ್ರವಾರದಂದು ವರಮಹಾಲಕ್ಷ್ಮೀ ಸ್ವರೂಪದಲ್ಲಿ ಆಚರಣೆ ಮಾಡಲು ಭವಿಷ್ಯೋತ್ತರ ಪುರಾಣದಲ್ಲಿ ಸಾಕ್ಷಾತ್ ಪರಶಿವನೆ ತಿಳಿಸುತ್ತಾನೆ.

### ವರಕೊಡುವ ವರಮಹಾಲಕ್ಷ್ಮೀ

ಶ್ರಾವಣ ಬಂತು, ಇನ್ನು ಹಬ್ಬಗಳ ಸಾಲು, ಈ ಸಾಲಿನ ಮೊದಲ ಹಬ್ಬ ವರಮಹಾಲಕ್ಷ್ಮಿ ವ್ರತ. ಶ್ರಾವಣ ಮಾಸದ ಶುಕ್ಲ ಪಕ್ಷದ ಪೌರ್ಣಿಮೆಗೆ ಮುನ್ನದ ಶುಕ್ರವಾರ ಆಚರಿಸುವ ಹಬ್ಬ/ ವರಮಹಾಲಕ್ಷ್ಮೀ ಹಬ್ಬದಲ್ಲಿ ಲಕ್ಷ್ಮಿಯನ್ನಿಟ್ಟು ಷೋಡಷೋಪಚಾರದ ಪೂಜೆ ನೆರವೇರಿಸಿ, ಬಗೆಬಗೆಯ ನೈವೇದ್ಯಗಳನ್ನು ಅರ್ಪಿಸಿ ಮುತ್ತೈದೆಯರನ್ನು ಕರೆದು ಅರಿಸಿನ, ಕುಂಕುಮ ಕೊಡುವ ಪದ್ಧತಿ ಇದೆ. ಇದು ಒಂದು ಇತರರೊಡನೆ ಸಹಬಾಳ್ವೆಗೆ ಅನುಕೂಲಕರವಾಗಿರುವ ಹಬ್ಬ. ಆ ಮೂಲಕ ಹೆಣ್ಣುಮಕ್ಕಳಲ್ಲಿ ಒಂದು ಸೌಹಾರ್ದ ಉಂಟಾಗಲಿ, ಭಾವನೆಗಳ ಸಮನ್ವಯವಾಗಲಿ ಅನ್ನೋ ಅರ್ಥದಲ್ಲಿ ಮೂಡಿದ ಹಬ್ಬವಿದು.



ಶ್ರಾವಣ ಶುಕ್ಲದ ಪೌರ್ಣಿಮ ಮುನ್ನ ಶುಕ್ರವಾರ ಆಚರಿಸಿದ್ರೆ ಸರ್ವಸಿದ್ಧಿ ಪ್ರದಾಯಕಮ್. ಸರ್ವಸಿದ್ಧಿಯಾಗುತ್ತದೆ ಅಂತ ಹೇಳಿದೆ. ವಾಸ್ತವವಾಗಿ ಏನು ಲಕ್ಷ್ಮೀವ್ರತ ಅಂದ್ರೆ? ಯಾರು ಈ ವ್ರತ ಮಾಡಬೇಕು? ಮಾಡಿದರೆ ಏನು ಫಲ? ವ್ರತವನ್ನು ಆಚರಿಸುವ ಸರ್ವರಿಗೂ ಈ ಪ್ರಶ್ನೆ ಹುಟ್ಟುತ್ತದೆ. ಉತ್ತರ ತಿಳಿದು ಆಚರಿಸುವವರು ಕೆಲವರು. ತಿಳಿಯದೇ ಆಚರಿಸುವವರು ಹಲವರು.

ಆಚರಣೆಗಳನ್ನು ಮಾಡುವಾಗ ಅದರ ಹಿಂದಿರುವ ಉದ್ದೇಶ ತಿಳಿಬೇಕು ಅನ್ನೋ ಮನಸ್ಸು ನಮಗೆ ಬಂದ್ರೆ ಅದೇ ನಿಜವಾದ ಪೂಜೆ. ಈ ಅರ್ಥದಲ್ಲಿ ಈ ಲಕ್ಷ್ಮೀ ಯಾರು ಅಂತಾದ್ರೂ ತಿಳಿಯೋ ಪ್ರಯತ್ನ ಮಾಡೋಣ ಲಕ್ಷ್ಮೀ ಅಂದ್ರೆ **"ಲಕ್ಷಯತಿ ಸರ್ವಂ ಸದಾ ಇತಿ"** ಲಕ್ಷ್ಮೀ ಅಂತ. ಸದಾಕಾಲ ಸರ್ವವನ್ನೂ ನೋಡುವವಳು ಅಂತ. ಆಕೆ ವರಗಳನ್ನು ದಯ ಪಾಲಿಸುವ ಸರ್ವಶಕ್ತಿಯಾಗಿರುವುದರಿಂದಲೇ ಆಕೆಯನ್ನು ವರಮಹಾಲಕ್ಷ್ಮೀ ಅಂತಾರೆ. ಆಕೆ ಹುಟ್ಟಿದ್ದು ಹಾಲ್ಗಡಲಲ್ಲಿ, ಸಮುದ್ರಮಂಥನವಾದಾಗ ಹುಟ್ಟಿದವಳು ಅನ್ನುತ್ತೆ ಪುರಾಣ.

ವೇದದ ಶ್ರೀಸೂಕ್ತದಲ್ಲಿ ಲಕ್ಷ್ಮಿಯ ಬಗ್ಗೆ ಹೆಚ್ಚಿನ ವಿವರಗಳಿವೆ. ಅಲ್ಲಿ ಒಂದು ಮಾತಿದೆ **"ಮನಸಃ ಕಾಮಮೂಕೂತಿಂ ವಾಚಃ ಸತ್ಯಮಶೀಮಹಿ"** ಅಂತ. ನಮ್ಮ ಮನಸ್ಸು ಏನನ್ನು ಬಯಸುತ್ತೋ ಅದನ್ನು ಆಕೂತಿ ಅಂದ್ರೆ ಯಾವ ಸಂಕಲ್ಪದಿಂದ ನಾವು ಆಕೆಯನ್ನು ಆರಾಧಿಸುತ್ತೇವೋ ಅದನ್ನು ಯಥಾರ್ಥವಾಗಿ ಆಕೆ ಈಡೇರಿಸುತ್ತಾಳೆ.

ಅಷ್ಟೇಅಲ್ಲ **"ಪಶೂನಾಂ ರೂಪಮನ್ನಸ್ಯ ಮಯಿ ಶ್ರೀಃ ಶಯತಾಂ ಯಶಃ"** ಅಂತಲೂ ಹೇಳುತ್ತೆ. ನಾವು ತಿನ್ನೋ ಅನ್ನದಿಂದ ನಮ್ಮ ಮನಸ್ಸು ರೂಪುಗೊಳ್ಳುತ್ತದೆ. ಹಾಗಾಗಿ ನಾವು ತಿನ್ನುವ ಅನ್ನದಲ್ಲಿ ನೆಲೆನಿಂತು ಸಭ್ಯ ರೂಪವನ್ನು ಆಕೆ ಕೊಡುತ್ತಾಳೆ. ನಾವು ಒಮ್ಮೊಮ್ಮೆ ಯಾಕೋ ಇವತ್ತು ಮನಸ್ಸೇ ಸರಿ ಇಲ್ಲ ಅಂದ್ಕೋತೀವಿ.



ಮನಸ್ಸು ಹಾಳಾಗೋದು ಮುಖ್ಯವಾಗಿ ನಾವು ತಿನ್ನುವ ಅನ್ನದಿಂದ, ಹಾಗಾದ್ರೆ ಕೆಟ್ಟ ಅನ್ನ, ಒಳ್ಳೆ ಅನ್ನ ಅಂತಾ ಇರುತ್ತಾ? ಇರಲ್ಲ. ಆದ್ರೆ ನಮ್ಮ ಅಡುಗೆ ಮನೆಯಲ್ಲಿ ಅನ್ನ ಬೇಯಿಸುವವಳು ಹೆಣ್ಣು. ಅನ್ನ ಬೇಯಿಸುವಾಗ ಹೆಣ್ಣು ಮಕ್ಕಳ ಮನಸ್ಸು ಶಾಂತವಾಗಿರಬೇಕು. ಹಾಗಾಗಿ ಅಡಿಗೆ ಬೇಯಿಸುವವರು ಸಿಡಿಮಿಡಿಗೊಳ್ಳಬಾರದು ಅಂದ್ರೆ ಮನೆ ಯಜಮಾನ ಕೋಪರಹಿತನಾಗ

ಬೇಕು. ಆಗ ಒಳ್ಳೆ ಮನಸ್ಸಲ್ಲಿ ಅಡುಗೆ ಸಿದ್ಧವಾಗುತ್ತದೆ. ಹಾಗೆ ಸಿದ್ಧಗೊಂಡ ಅನ್ನ ಆಹ್ಲಾದ ಮನಸ್ಸಿಗೆ ಕಾರಣ. ಮನಸ್ಸು ಶಾಂತವಾಗಿದ್ದಾಗ ಬದುಕು ಶ್ರೀಮಂತವಾಗುತ್ತೆ. ಈ ಗುಟ್ಟನ್ನು ವೇದಗಳು ಹೇಳಿಕೊಟ್ಟಿವೆ. ಇದನ್ನು ಅರ್ಥಮಾಡಿಕೊಳ್ಳದೇ ಲಕ್ಷ್ಮೀವ್ರತ ಮಾಡಿದರೆ ಪ್ರಯೋಜನವಾದರೂ ಏನು?

ಲಕ್ಷ್ಮೀಯು ಸ್ಥಿರವಾಗಿ ಉಳಿಯಬೇಕೆಂಬುದು ನಮ್ಮೆಲ್ಲರ ಆಸೆ. ಅಲ್ಲದೆ ನಮಗೆ ದೊರೆತ ಸಂಪತ್ತು ವೃದ್ಧಿಯಾಗಿ ಭವಿಷ್ಯತ್‌ಗೂ ತನ್ನಲ್ಲಿ ಉಳಿಯ ಬೇಕೆಂಬುದು ಎಲ್ಲರ ಆಸೆ. ಆದರೆ ನಾವು ಗಳಿಸಬಹುದಾದ ಸಂಪತ್ತು ಹೇಗಿರಬೇಕು? ಡಿವಿಜಿಯವರು ತಮ್ಮ **'ಮಂಕುತಿಮ್ಮನ ಕಗ್ಗ'**ದಲ್ಲಿ ಹೀಗೆಂದಿದ್ದಾರೆ.


'ಅನ್ನವುಣ್ಣುವುದು ಕೇಳ್ ಅದನು ಬೇಯಿಸಿದ ನೀರ್/ನಿನ್ನ ದುಡಿತದ ಬೆವರೋ, ಪರರ ಕಣ್ಣೀರೋ/ ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ /ಜೀರ್ಣಸದ ಋಣಶೇಷ ಮಂಕುತಿಮ್ಮ',ಗಳಿಕೆ ಬೆವರು ಸುರಿಸುವ ದುಡಿಮೆಯಿಂದ ನಮ್ಮ ಗಳಿಕೆಯಾಗಬೇಕು. ನಮ್ಮ ಗಳಿಕೆಯ ಮಾರ್ಗ ಪರರ ನೋವಿಗೆ, ಪರರಿಗೆ ನಮ್ಮಿಂದುಂಟಾಗುವ ವಂಚನೆಗೆ ದಾರಿಮಾಡಿ

ಕೊಡುವುದಾದರೆ ಭಾಗ್ಯದ ಲಕ್ಷ್ಮೀ ನಮ್ಮ ಮನೆ ತನಕ ಬರುವಳೇನು? ಇದನ್ನೇ ದಾಸವರ್ಯ ಪುರಂದರದಾಸರು ಹೀಗೆ ನಿರೂಪಿಸಿದ್ದಾರೆ.

ಭಾಗ್ಯದ ಲಕ್ಷ್ಮೀ ಬಾರಮ್ಮಾ
ನಮ್ಮಮ್ಮ ನೀ ಸೌಭಾಗ್ಯದ
ಲಕ್ಷ್ಮೀ ಬಾರಮ್ಮಾ
ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ

ಗೆಜ್ಜೆಕಾಲಿನ ನಾದವ ತೋರುತ ಸಜ್ಜನ ಸಾಧು ಪೂಜೆಯ ವೇಳೆಗೆ 'ಮಜ್ಜಿಗೆಯೊಳಗಿನ ಬೆಣ್ಣೆಯಂತೆ' ಭಾಗ್ಯದ ಲಕ್ಷ್ಮೀಯನ್ನು ದಾಸರು ಹೀಗೆ ಕರೆಯುವುದರಲ್ಲಿ ಒಂದು ವಿಶೇಷತೆ ಇದೆ.

ಇಲ್ಲಿ ಗಹನವಾದ ಅಂತರಾರ್ಥ ತುಂಬಿ ಕೊಂಡಿದೆ. ನದಿಯಲ್ಲಿ ಬರುವ ಪ್ರವಾಹದಂತೆ ಮನುಷ್ಯನಿಗೆ ಒಮ್ಮೆಲ್ಲೇ ಶ್ರೀಮಂತಿಕೆ ಬರಬಾರದು. ಇದರಿಂದ ಅತಿಯಾಸೆ, ಅಹಂಕಾರ, ಕೃಪಣತೆಗಳುಂಟಾಗಿ ದಾರಿ ತಪ್ಪಿ ಮತಿಗೇಡಿಯಾಗವ ಸಂಭವವುಂಟು.



ಇದಕ್ಕೆಂದೇ ದಾಸರು ಹೇಳಿದರು. "ಹೆಜ್ಜೆಯ ಮೇಲೆ ಹೆಜ್ಜೆಯನ್ನಿಕ್ಕುತ" ಎಂದು ನಿಧಾಗತಿಯಲ್ಲಿ ಬಂದು ಸೇರುವ ಐಶ್ವರ್ಯ ಹೇಗೆ ಬಂದು ಸಂಗ್ರಹವಾಗಬೇಕೆಂದರೆ "ಮಜ್ಜಿಗೆಯೊಳಗಿನ ಬೆಣ್ಣೆಯಂತೆ.

ಪರರಿಗೆ ಮಾಡಿದ ಮೋಸವಂಚನೆಗಳಿಂದ ಗಳಿಸಿದ್ದಾಗಿರದೆ ಸ್ವಂತ ಪರಿಶ್ರಮದಿಂದ ಅನುಭವ ಜನ್ಯವಾದ ಗಳಿಕೆ ನಮ್ಮದಾಗಿರಬೇಕು ಎನ್ನುವ ಅರ್ಥ ಇಲ್ಲಿದೆ. ದಾಸವರ್ಯರು ಮುಂದುವರಿದು ಹೇಳಿದರು.

**'ಶಂಕೆಯಿಲ್ಲದ ಭಾಗ್ಯವ ಕೊಟ್ಟು/ಕಂಕಣ ಕೈಯ ತಿರುವುತ ಬಾರೆ'.** ನಾವು ಗಳಿಸಿದ್ದು ಲಂಚದ ಹಣವಾಗಿದ್ದಲ್ಲಿ ಇಲ್ಲವೆ ಪರರ ಶೋಷಣೆ, ಅಕ್ರಮದಂಥೆಗಳಿಂದ ಗಳಿಸಿದ್ದಾದ್ದಲ್ಲಿ ಸತ್ಯವನ್ನು ಎದುರಿಸುವ ಶಕ್ತಿ ನಮ್ಮಲ್ಲಿರುವುದಿಲ್ಲ.

ಯಾವ ಶಂಕೆಗೂ ಒಳಪಡದ, ನಿರ್ಭಯ ಭಾಗ್ಯವಂತರು ನಾವಾಗಿದ್ದಾಗ ನಮ್ಮ ಬದುಕಿನ ಪರಿಯೇ ಬೇರೆ. ಆಗ ನಮ್ಮ ಮನೆ-ಮನದಲ್ಲಿ ಸದಾ ಕಾಲ ಸಕ್ಕರೆ ತುಪ್ಪದ ಕಾಲುವೆಯೇ ಹರಿಯುತ್ತದೆ. ಅಂದಾಗ ನೆಮ್ಮದಿಯ ಬದುಕು ಸಾಧಿಸ ಬಲ್ಲೆವು.

## ಪ್ರಕಟನೆ

**ಚಂದಾದಾರರು ತಮ್ಮ ಬದಲಾದ ವಿಳಾಸವನ್ನು ಸಪ್ತಗಿರಿ ಕಾರ್ಯಾಲಯಕ್ಕೆ ಪತ್ರದ ಮುಖಾಂತರ ನಿಮ್ಮ ಬದಲಾದ ವಿಳಾಸವನ್ನು ಬರೆದು ಕಳುಹಿಸಿಕೊಡಬೇಕು. ಚಂದಾದಾರರಿಗೆ ನಿಗದಿತ ಸಮಯದೊಳಗೆ ಪುಸ್ತಕವನ್ನು ತಲುಪಿಸಲಾಗುತ್ತದೆ. ತಮ್ಮ ವಿಳಾಸವನ್ನು ಬದಲಿಸಲು ಈ ಕೆಳಗಿನ ಈ ಮೇಲ್ ಮುಂಖಾಂತರವು ತಿಳಿಸಬಹುದು. ನಮ್ಮ ಈ ಮೇಲ್ ಐಡಿ chiefeditortpt@gmil.com ಅನ್ನು ಸಂಪ್ರದಿಸಬಹುದು.**

– ಪ್ರಧಾನ ಸಂಪಾದಕರು

ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಕಳೆದ ಸಂಚಿಕೆಯಿಂದ**


# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್

ಅನುವಾದ – ಶ್ರೀಮತಿ. ಎನ್. ಪಾರ್ವತಿ

ಭಗವಂತನಿಗೆ ಪದೇ ಪದೇ ನಮನ ಸಲ್ಲಿಸುತ್ತಾ ವೆಂಕಟಾದ್ರಿಯಿಂದ ಇಳಿದು, ಕಪಿಲ ತೀರ್ಥ ಮಾರ್ಗದಲ್ಲಿ ಗಿರಿ ಪ್ರದಕ್ಷಿಣೆ ಮಾಡಿ ನೈಮಿಶಾರಣ್ಯವನ್ನು ತಲುಪಿದರು. ನೈಮಿಷಾರಣ್ಯ ತಲುಪಿದ ನಂತರ, ಮುನಿಗಳು ಸೂತರ ಬಳಿಗೆ ಹೋಗಿ,

"ಸ್ವಾಮಿ! ನಿಮ್ಮ ಪುರಾಣಕಥಾ ಶ್ರವಣದಿಂದ ವೆಂಕಟಗಿರಿಯನ್ನು ದರ್ಶಿಸಲು ನಿಮ್ಮ ಅನುಮತಿಯೊಂದಿಗೆ ಹೋದೆವು. ನೀವು ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ ಎಲ್ಲಾ ಸ್ಥಳಗಳನ್ನು ಮನಸಾರೆ ನೋಡಿದೆವು. ನಿಮ್ಮ ಮಾತುಗಳು ಅಮೃತದಂತೆ ನಿಮ್ಮ ಮಾತುಗಳೇ ತಿರುಮಲಗಿರಿಯನ್ನು ನೋಡಲು ಸ್ಫೂರ್ತಿ ನೀಡಿತು. ನೀವು ವರ್ಣಿಸಿದಂತೆಯೇ ಸ್ಥಳಗಳು ಇವೆ. ನೀವು ಅದನ್ನು ಅಷ್ಟು ಚೆನ್ನಾಗಿ ಹೇಗೆ ವಿವರಿಸಿದ್ದೀರೋ ಆಶ್ಚರ್ಯವಾಗಿದೆ.



"ನಾವು ನೋಡಿದ ಬೆಟ್ಟವು ಬಂಗಾರಮಯವಾಗಿತ್ತು. ಅಲ್ಲಿನ ವನಗಳು ಚೈತ್ಯನ ರಥದಂತೆ ಇವೆ. ಕಾಡು ಪ್ರಾಣಿಗಳು ಮತ್ತು ಕಾಡು ಮೃಗಗಳು ಯಾವುದೇ ಪರಸ್ಪರ ದ್ವೇಷವಿಲ್ಲದೆ ಒಟ್ಟಿಗೆ ಕಾಡುಗಳಲ್ಲಿ ಸಂಚರಿಸುತ್ತಿದ್ದವು. ಸ್ವಾಮಿ ಪುಷ್ಕರಣಿಯು ಸಂಪೂರ್ಣವಾಗಿ ಪವಿತ್ರ ಜಲದಿಂದ ತುಂಬಿದೆ. ಆ ಪುಷ್ಕರಣಿಯ ಪಶ್ಚಿಮದಿಕ್ಕಿನಲ್ಲಿ ಭೂ ವರಾಹನು ನೆಲೆಸಿದ್ದಾನೆ. ಆ ದೇವಾಲಯದ ದಕ್ಷಿಣದಲ್ಲಿ ಚಿನ್ನದ ಛಾವಣಿಯ ಕಲಶಗಳ ಗೋಪುರಗಳು ಮತ್ತು ಮಂಟಪಗಳು ಇವೆ. ಅವುಗಳ ನಡುವೆ ಕಾಂತಿಮಯವಾದ ವಿಮಾನವನ್ನು ನೋಡಿದೆವು.

ಆ ವಿಮಾನದಲ್ಲಿ ಶ್ರೀಲಕ್ಷ್ಮಿಕಾಂತನನ್ನು ದರ್ಶಿಸಿದೆವು. ಆ ಸಮಯದಲ್ಲಿ, ನಮ್ಮನ್ನು ನಾವು ಮರೆತೇ ಹೋದೆವು. ನಂತರ, ಭಗವಂತನನ್ನು ಸ್ತುತಿಸುತ್ತಿದ್ದಂತೆ ಭಗವಂತನು ನಮ್ಮೊಂದಿಗೆ ಸಂಭಾಷಣೆಯನ್ನು ಯಾವುದೇ ಅಡೆತಡೆಯಿಲ್ಲದೆ ನಡೆಸಿದನು.

ಸ್ವಾಮಿಯ ಮಧುರೋಕ್ತಿಗಳನ್ನು ಕೇಳುತ್ತಾ ಮೈಮರೆತಿದ್ದಾಗ, "ಸೂತರೇ! ನೀವು ನೈಮಿಷಾರಣ್ಯಕ್ಕೆ ತೆರಳಲು ಸ್ವಾಮಿಯು ಅನುಮತಿ ನೀಡಿದನು. ನಾವು ನೋಡುತ್ತಿದ್ದಂತೆ, ಸ್ವಾಮಿಯು ಶಿಲಾರೂಪನಾದನು. ನಮ್ಮೊಂದಿಗೆ ಮಾತನಾಡುತ್ತಿದ್ದ ಸ್ವಾಮಿಯು ದಿಢೀರನೇ ಮೌನವಾಗಿದ್ದು ನಮಗೆ ವಿಚಿತ್ರವೆನಿಸಿತು. ಈ ದೃಶ್ಯಗಳನ್ನು ಸ್ವತಃ ವೀಕ್ಷಿಸಿದ ನಂತರ ಬೆಟ್ಟದಿಂದ ಇಳಿದೆವು. ಆದರೂ ತಿಳಿಯದೇ ಪ್ರಶ್ನಿಸುತ್ತಿದ್ದೇವೆ. ಬೆಟ್ಟಕ್ಕೆ ಹೋದವರು ನಾವು. ಸ್ವಾಮಿಯನ್ನು ದರ್ಶಿಸಿದವರು ನಾವು ಅಲ್ಲಿನ ರಮಣೀಯ ದೃಶ್ಯಗಳನ್ನು ಕಣ್ಣಾರೆ ನೋಡಿದವರು ನಾವು. ಆದರೂ ಆ ಎಲ್ಲಾ ದೃಶ್ಯಗಳನ್ನು ನೀವು ಹೇಗೆ ವಿವರಿಸಿದ್ದೀರಿ? ನೀವು ಸಹ ದರ್ಶಿಸಿರುವಿರಾ ಅಥವಾ ನೀವು ಭಾವನೆಯಿಂದ ವೀಕ್ಷಿಸಿದ್ದೀರಾ? ಎಂದು ಕೇಳಿದರು.

ಮುನಿಗಳ ಮಾತುಗಳನ್ನು ಕೇಳಿದ ಸೂತರು ಮುಗುಳ್ನಗುತ್ತಾ, "ಓ ಮುನಿಗಳೇ ಇದೆಲ್ಲವೂ ವ್ಯಾಸಮುನಿಕಟಾಕ್ಷ! ಆ ಕೃಪಾವೀಕ್ಷಣೆಯಿಂದ ನನಗೆ ಎಲ್ಲವೂ ಅನುಭೂತಿಗೊಳ್ಳುತ್ತದೆ. ಇದೆಲ್ಲ ನನ್ನ ಪ್ರತಿಭೆ ಎಂದು ಭಾವಿಸಬೇಡಿ. ಬಾದರಾಯಣನ ಅನುಗ್ರಹದಿಂದಲೇ ನನ್ನಿಂದ ಸಾಧ್ಯ

ವಾಗಿದೆ. ನಾನು ಮಹಾಮಹಿಮನೆಂದು ಭಾವಿಸಬೇಡಿ. ಬಾದರಾಯಣನ ಅನುಗ್ರಹದಿಂದಲೇ ನನ್ನಿಂದ ಸಾಧ್ಯ ವಾಗಿದೆ. ನಾನು ಮಹಾ ಮಹಿಮೆನೆಂದು ಭಾವಿಸಬೇಡಿ. ಬಾದರಾಯಣವನ್ನು ನೆನೆದು, ಹೇಳುವುದೆಲ್ಲವೂ ಸತ್ಯವೆಂದೇ ಅರಿತುಕೊಳ್ಳಿ.

ಆಕಾಶದಲ್ಲಿರುವ ನಕ್ಷತ್ರಗಳನ್ನು ಎಣಿಸಬಹುದು. ಹಿಮದ ಹರಳುಗಳನ್ನು ಎಣಿಸಬಹುದು, ಮರಳಿನ ಕಣಗಳನ್ನು ಎಣಿಸಬಹುದು. ಆದರೆ ವೆಂಕಟನಾಥನ ಚರಿತೆಗಳು, ಲೀಲೆ ಗಳು ಅಸಂಖ್ಯಾತ, ಜನ್ಮ ಸಾರ್ಥಕ. ನನಗೆ ತಿಳಿದ ರೀತಿಯಲ್ಲಿ ನಿಮಗೆ ಹೇಳಿದ್ದೇನೆ ಎಂದು ತಪಸ್ವಿಗಳಿಗೆ ಉತ್ತರಿಸಿದರು. ವರಾಹ ಪುರಾಣದಲ್ಲಿ ಬರುವ ಶ್ರೀವೆಂಕಟೇಶ್ವರ ಸ್ವಾಮಿಯ ಕಥೆಯನ್ನು ಸೂತ ಮಹರ್ಷಿಗಳು ಶೌನಕಾದಿಗಳಿಗೆ ವಿವರಿಸಿ ದರು.

ಅನಂತರ, ಶೌನಕಾದಿಗಳು "ಸೂತ ಮಹರ್ಷಿ! ಭವಿಷ್ಯೋತ್ತರ ಪುರಾಣದಲ್ಲಿ ಶ್ರೀವೆಂಕಟೇಶ್ವರನ ಕಥನವು ವಿವರವಾಗಿದೆ ಎಂದು ಹೇಳಿದ್ದಿರಿ. ನಾವೆಲ್ಲರೂ ವೆಂಕಟೇ ಶ್ವರನ ಕಥನವನ್ನು ಕೇಳಲು ಉತ್ಸುಕರಾಗಿದ್ದೇವೆ ದಯವಿಟ್ಟು ಹೇಳಿ!" ಎಂದು ಪ್ರಾರ್ಥಿಸಿದರು.

ಸೂತನು ಶೌನಕಾದಿಗಳ ಕಡೆ ನೋಡಿ, "ನೀವು ಕೇಳಿ ರುವುದು ಸಹಜ. ಹಿಂದೆ, ಜನಕ ಕೂಡ ನಿಮ್ಮಂತೆಯೇ ಶತಾ ನಂದನಿಗೂ ಅದೇ ಪ್ರಶ್ನೆಯನ್ನು ಕೇಳಿದ. ಶತಾನಂದರು ಜನಕನಿಗೆ ಹೇಳಿದ ಪೂರ್ವೇತಿಹಾಸವನ್ನು ಹೇಳುತ್ತೇನೆ.

"ಮುನಿಗಳೇ! ಯುಗಗಳಲ್ಲಿ ಎರಡನೆಯದು ತ್ರೇತಾ ಯುಗ. ಆ ಯುಗದಲ್ಲಿ ಜನಕ ಪ್ರಸಿದ್ಧ ರಾಜನಾಗಿದ್ದನು. ಅವನು ಅತ್ಯಂತ ಶಾಂತಿಪ್ರಿಯ ಹಾಗೂ ಹೃದಯವಂತನಾಗಿ ದ್ದನು. ಮಿಥಿಲೆಯ ರಾಜನೂ ಆಗಿದ್ದನು. ಒಂದು ದಿನ, ಜನಕ ರಾಜನು ತನ್ನೊಳಗೆ, ನನಗೆ, ಮದುವೆ ವಯಸ್ಸಿನ ಒಬ್ಬ ಮಗಳಿದ್ದಾಳೆ ಹಾಗೆಯೇ, ಕಿರಿಯ ಸಹೋದರ ಕುಶಧ್ವಜನಿಗೆ ಮೂವರು ಹೆಣ್ಣುಮಕ್ಕಳಿದ್ದಾರೆ.

ಈ ನಾಲ್ವರಿಗೆ ಸೂಕ್ತವಾದ ವರರನ್ನು ಹುಡುಕುವುದು ತಂದೆ ಮತ್ತು ಮನೆಯ ಯಜಮಾನವಾದ ತನ್ನ ಕರ್ತವ್ಯ. ನಾಲ್ವರಿಗೂ ಸೂಕ್ತವಾದ ವರರು ಒಂದೇ ರಾಜವಂಶದವ ರಾದರೆ ಎಷ್ಟು ಒಳ್ಳೆಯದು. ಎಂದು ಯೋಚಿಸುತ್ತಿರುವಾಗ, ಶತಾನಂದನು ರಾಜನ ಬಳಿಗೆ ಬಂದನು.

ಜನಕ ರಾಜನು ಶತಾನಂದನಿಗೆ ಸೂಕ್ತ ಗೌರವದಿಂದ ಬರಮಾಡಿಕೊಂಡನು. ಜನಕ ಮಹಾರಾಜನು ಯಾವುದೋ ಮಾನಸಿಕ ಖಿನ್ನತೆ ಇದೆ ಎಂದು ಅರಿತ ಶತಾನಂದನು. "ಓ ಮಾನವಾಧೀಶಾ! ಸೀತೆ,ಮಾಂಡವಿ, ಊರ್ಮಿಳೆ ಮತ್ತು ಶ್ರುತ ಕೀರ್ತಿರಿಗೆ ಮದುವೆ ಮಾಡಬೇಕಲ್ಲವೆ? ಅವರಿಗೆ ಸೂಕ್ತ ವರರನ್ನು ಹುಡುಕಲು ನಾವು ಪ್ರಯತ್ನಿಸಬೇಕೆಲ್ಲವೆ? ಎಂದು ಕೇಳಿದನು.

"ಸಮ್ಮೀಶ್ವರ!ನಿಜ. ನಾನು ಒಂದು ಯಾಗವನ್ನು ಪ್ರಾರಂ ಭಿಸಿ ಭೂಮಿಯನ್ನು ಅಗೆಯುತ್ತಿದ್ದಾಗ, ಅತ್ಯಾಶ್ಚರ್ಯವಾಗು ವಂತೆ, ಸೀತೆಯನ್ನು ಕಂಡೆ.ಆ ಮಗು ನನಗೆ ಸಾಮಾನ್ಯ ದಂತೆ ಕಾಣಲಿಲ್ಲ.ಅವಳು ನನಗೆ ಲೌಲೋಕೈಕ ಮಾತೆಯಾಗಿ ಕಂಡಳು.

ವರಪುತ್ರಿಗೆ ತಕ್ಕ ಸೂಕ್ತವಾದ ಮಾನವ ವರ ನಿದ್ದಾ ನೆಯೇ? ಇನ್ನೂ ಎಷ್ಟು ಕಾಲ ಕಾಯಬೇಕು? ಸೀತೆಯ ರೂಪ ಲಾವಣ್ಯಗಳನ್ನು ನೋಡಿದರೆ, ಆ ತಾಯಿ ರಮಾದೇವಿಯ ವಂಶಸ್ಥೆ ಎಂದು ನನಗೆ ತೋರುತ್ತದೆ. ಈ ಮಗಳಿಗೆ ಹರಿ ಅಂಶಜನೇ ಸೂಕ್ತವಾದ ವರ, ಆದರೆ ಅಂತಹ ಪುರುಷ ನಿದ್ದಾನೆಯೇ?"

ಇನ್ನೊಂದು "ನಿನಗೆ ತಿಳಿದಿದೆಯಲ್ಲವೇ! ನನ್ನಲ್ಲಿರುವ ಶಿವ ಧನುಸ್ಸಿನ ಕಥೆ. ಆ ಬಿಲ್ಲನ್ನು ದಾರದಿಂದ ಕಟ್ಟಿ ಮುರಿಯ ಬಲ್ಲವನೇ ಆ ಕನ್ಯೆಯನ್ನು ಮದುವೆಯಾಗಲು ಅರ್ಹ. ಇವನೇ ಸೀತೆಗೆ ತಕ್ಕವರ. ಆದ್ದರಿಂದಲೇ, ಆ ಶಿವ ಧನಸ್ಸನ್ನು ಮುರಿದು ಧನುರ್ಭಂಗ ಮಾಡಬಲ್ಲವನಿಗೆ ನನ್ನ ಮಗಳನ್ನು ಮದುವೆ ಮಾಡುತ್ತೇನೆ ಎಂದು ಪ್ರಕಟಣೆ ಕೂಡಾ ನೀಡಿದ್ದೇನೆ! ಇವೆಲ್ಲಾ ನಿಮಗೆ ತಿಳಿದಿದೆಯಲ್ಲವೇ" ಎಂದನು.

ಜನಕ ರಾಜನ ಮಾತುಗಳನ್ನು ಕೇಳಿದ ಶತಾನಂದನು, ಮಹಿಪಾಲ! ಸೀತೆ ಭೂಮಿಜ. ಆ ತಾಯಿಗೆ ಸೂಕ್ತ ಪುರುಷ ಶ್ರೇಷ್ಠನಿದ್ದಾನೆ. ಅಲ್ಲದೆ, ನಾಲ್ವರು ಹೆಣ್ಣುಮಕ್ಕಳಿಗೆ ಸೂಕ್ತ ವರ ಗಳಿರುವ ರಾಜಮನೆತನವಿದೆ.

ನಿಮ್ಮ ಎಲ್ಲಾ ಕೋರಿಕೆಗಳು ಈಡೇರಬೇಕೆಂದರೆ, ವೆಂಕಟಾಚಲ ಮಹಿಮೆಯನ್ನು ಶ್ರದ್ಧೆಯಿಂದ ಕೇಳು. ನಿಮ್ಮ ಕೋರಿಕೆ ಈಡೇರುತ್ತದೆ. ವೆಂಕಟಗಿರಿಯ ಮಹಿಮೆಗಳನ್ನು ಕೇಳಿದ ಬ್ರಹ್ಮಾದಿಯರೇ ಸ್ವತಃ ಕೃತಕೃತ್ಯರಾಗಿದ್ದಾರೆ.

**- ಮುಂದುವರೆಯುತ್ತದೆ.**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ|| ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಶ್ರೀಶೈಲಪೂರ್ಣರ, ಅನಂತಾಚಾರ್ಯರ ವಂಶಸ್ಥರಾದ ಬ್ರಹ್ಮಜ್ಞಾನಿಗಳು ಆಚಾರ್ಯ ಸ್ಥಾನ ನಿರ್ವಹಣೆ ಮಾಡಿದಂತೆ ಪೂರ್ಣಾಧಿಕಾರ ಹೊಂದಿರುವ ಇಬ್ಬರು ಇಯಲ್‌ಗೋಷ್ಠಿ ಇಬ್ಬರು ಪಾರ್ಶ್ವಗಳಲ್ಲಿ ವಾದ್ಯಗಳೊಂದಿಗೆ ಕೈಗೂಡಿಸಿ ಸೇವೆ ಮಾಡಲು ಬರುವಂತೆ ಈ ವಾದ್ಯಗಾರರನ್ನು ಮೊದಲೇ ಉತ್ತಮಾಶ್ರಮದಲ್ಲಿ (ಸನ್ಯಾಸಿಗಳು, ಜಿಯ್ಯರ್‌ಗಳು) ತ್ರಿದಂಡ ಮುಂಡಿತಹಸ್ತರಾಗಿ ಅನುಸಂಧಾನ ಮಾಡುವಂತೆ, ಇನ್ನು ಮಧ್ಯಕಾಲದಲ್ಲಿ ಬಿಟ್ಟು ಹೋದ ಎಷ್ಟೋ ವೈಷ್ಣವ ಧರ್ಮದವರನ್ನು ಉದ್ಧರಿಸಿ ಅನುಷ್ಟಾನಪಡಿಸಿದ್ದಾರೆ ಧೀರೋದಾರ ಮನೋಹರಾಂಗ ಸುಂದರರಾಜುವಾಗಿ ಶ್ರೀಗೋವಿಂದರಾಜು ಸ್ವಾಮಿಗೆ ಉಭಯ ದೇವತೆಗಳ (ಶ್ರೀಭೂದೇವಿಯರ) ಸಂಗದಲ್ಲಿ ಉನ್ನತಸ್ಥಾನ ಬೇಕೆಂದು ತಮ್ಮ ಹೆಸರಿನೊಂದಿಗೆ ರಾಮಾನುಜಚರಣಾಲಯವೆಂದು ಸದಾಕಾಲ ವಿಜಯ ಮಾಡುವಂತೆ ಒಂದು ದಿವ್ಯ ಸಿಂಹಾಸನವನ್ನು ಮಾಡಿಸಿ ಅದರಲ್ಲಿ ಪತ್ಯಯವನ್ನು ವಿಜಯವನ್ನು ಮಾಡುವುದು.

ಧಾನ್ಯಾಗಾರಂ ತು ಪೂರ್ವಸ್ಮಿನ್ ದಿಶಿ ದೇವಸ್ಯ ಕಾರಯೇತ್

(ಭಗವಂತನಿಗೆ ಪೂರ್ವದಿಕ್ಕಿನಲ್ಲಿ ಧಾನ್ಯಾಗಾರವನ್ನು ನಿರ್ಮಿಸುವುದು)

ಹೇಳಿದಂತೆ ಒಂದು ಧಾನ್ಯಾಗಾರವನ್ನು ಕಟ್ಟಿಸಿ, ಎರಡು ಪಕ್ಕದಲ್ಲಿ ಎರಡು ಆಭರಣಾಲಯಗಳನ್ನು ನಿರ್ಮಿಸಿ ಅವುಗಳ ಸುತ್ತು ಒಂದು ಶ್ರೀ ಪ್ರಾಕಾರವನ್ನು ಶ್ರೀ ಗೋಪುರವನ್ನು ಕಟ್ಟಿಸಿ ಶ್ರೀಗೋಪುರದಲ್ಲಿ ಸ್ವಯಂವ್ಯಕ್ತವಾದ ಶ್ರೀಸುದರ್ಶನ ಭಗವಾನನ ಪೂಜಾರಾಧನೆಗಳಿಗಾಗಿ ಯೋಗ್ಯವಾಗಿರುವಂತೆ ಮೇಲೆ ಮಂಟಪ, ಕೆಳಗಡೆ ಮಂಟಪವನ್ನು ಕಟ್ಟಿಸಿ ಅವರಿಗೆ ಆರಾಧನೆ ಜರಗುವಂತೆ ಶ್ರೀಗೋವಿಂದರಾಜು ಸ್ವಾಮಿಗೆ ವೃಷಭಮಾಸ ಮಹೋತ್ಸವ ನಂತರದಲ್ಲಿ ಶೈತ್ಯೋಪಚಾರಾರ್ಥವಾಗಿ ಡೋಲೋತ್ಸವ ಜರುಗಿಸಲು ತಕ್ಕುದಾದ ಶ್ರೀ ಗೋಪುರದ್ವಾರದಲ್ಲಿ ಒಂದು 'ಉಡಿಯಡಿ' (ಉಟ್ಟಪಟ್ಟಕೋಟ್ಟಿ) ಮಂಟಪವನ್ನು ಕಟ್ಟಿಸಿ, ಭೂಪಾಲಿಕನಾದ ಅಚ್ಯುತರಾಯನ ಕೈಂಕರ್ಯವಾಗಿ ಆತನ ಕೈಸೇರಿದ ನಂತರ 'ಉಡಿಯಡಿ' (ಉಟ್ಟಿಕೊಟ್ಟಾಡಿ) ಮಂಟಪದ ಸಹಾ (ಕಂದಾಡೈ ರಾಮಾನುಜ ಅಯ್ಯಂಗಾರರು) ನಿರ್ಮಿಸಲಾಯಿತು.



ಪೂರ್ವಕಾಲದಲ್ಲಿ ಪಾಂಡ್ಯದೇಶಾಧಿಪತಿಯಾದ ರಂಗ ಭೂಪಾಲರಾಯರು ಗಂಗಾಸ್ನಾನ ಮಾಡಬೇಕೆಂದು ಸಂಕಲ್ಪಿಸಿ ಉತ್ತರಾಭಿಮುಖವಾಗಿ ದಿಗ್ವಿಜಯ ಮಾಡಬೇಕೆಂದು ಅನೇಕ ಸಾಮಂತ ರಾಜರುಗಳನ್ನು ಜಯಿಸಿ,

ತಿರುಮಲೆಗೆ ಬಂದು ಶ್ರೀವೇಂಕಟಾಚಲಪತಿಯನ್ನು ಸೇವಿಸಿ ಸಂತುಷ್ಟನಾಗಿ, ಪುಣ್ಯಕ್ಷೇತ್ರದಲ್ಲಿ ವೇಂಕಟಾಚಲದ ಮೇಲೆ ಜಯ ಸ್ತಂಭವನ್ನು ನಿಲ್ಲಿಸಿ, ಈ ಜಾಗದಲ್ಲಿ ವಿಷ್ಣು ಪ್ರತಿಷ್ಠೆ ಮಾಡ ಬೇಕೆಂದು ಸ್ಥಳೀಯ ಹಿರಿಯರನ್ನು ವಿಚಾರಿಸಲು ಅವರು -

ವೈಕುಂಠಾದಾಗತತ್ವಾಚ್ಚ ವೈಕುಂಠಾ ಸ್ಮೃತಃ

(ವೈಕುಂಠಾ ಲೋಕದಿಂದ ಬಂದಿರುವುದರಿಂದಲೇ ಈ ಬೆಟ್ಟ ವೇಂಕಟಾದ್ರಿ ಎಂದು ಕರೆಸಿಕೊಂಡಿದೆ)

ಎಂದು ಈ ತಿರುಮಲೆ ಕ್ಷೇತ್ರ ಮಹಾತ್ಮೆಯಲ್ಲಿ 'ಶ್ರೀವೈಕುಂಠವು' ಎನ್ನಲ್ಪಟ್ಟಿರುವುದರಿಂದ ಈ ಕ್ಷೇತ್ರದಲ್ಲಿ ಮಾನುಷವಾದ ವಿಷ್ಣು ಪ್ರತಿಷ್ಠೆ ಉಚಿತವಲ್ಲ.

ಶೇಷಾಚಲಸ್ಯ ಚರಿತಃ ಕ್ರೋಶಮಾತ್ರಂ ತು ಭೂತಲಂ
ಶೇಷಾಚಲೈಕ ದೇಶೇನ ಪ್ರಥಿತಂ ಮುನಿ ಸೇವಿತಂ

## ಜೂನ್ ತಿಂಗಳ ರಸಪ್ರಶ್ನೆಯ ಉತ್ತರಗಳು

01. ಜ್ಯೇಷ್ಠಮಾಸ
02. ಮಹಾಪ್ರದೋಷ
03. ಗಂಗಾನದಿ
04. 12ನೇ ಸ್ಕಂದ
05. ಹಾಸ್ಯ ವಿನೋದ ಪ್ರವೃತ್ತಿಗಳು
06. ಪಂಚಸಂಸ್ಕಾರ
07. ಕೇಶವ ದೇವಾಲಯ
08. ನಾದ ಸ್ವರ ಮಾಧುರ್ಯದ ಸಂಗಮ
09. ಶ್ರೀಕೃಷ್ಣನನ್ನು
10. ರಂಗವಿಠಲ
11. ಶಿಸ್ತನ್ನು
12. ಸ್ವಾಮಿ ಪುಷ್ಕರಿಣಿ
13. 44
14. ಶ್ರೀರಾಮನು
15. ಆಫಡು

(ಈ ಶೇಷಾದ್ರಿಗೆ ಸುತ್ತುಮುತ್ತು ಸುಮಾರು ಪರಿಮಿತಿಯ ಭೂತಲವು ಋಷಿ ಸೇವಿತವಾಗಿದ್ದು ಶೇಷಾಚಲಿಯೇಂದೇ ಏಕಾದಶವೆನ್ನುವ (ಹಾಗೇ ಕರೆಯಲ್ಪಟ್ಟು) ಪ್ರಸಿದ್ಧವಾಗಿದೆ.)

ಎಂದು ಸ್ಕಂದಪುರಾಣದಲ್ಲಿಯ **"ಕ್ಷೇತ್ರ ಮಹಾತ್ಮೆಯಲ್ಲಿನ ಸುವರ್ಣಮುಖರಿ"** ಮಹಾತ್ಮೆಯಲ್ಲಿ ತಿರುಮಲೆಗೆ ಎಲ್ಲಾ ಕಡೆಗಳಿಂದ ತಿರುಮಲೆಗೆ ಎಲ್ಲಾ ಬಗೆಗಳಿಂದ ಪರಿವೇಷ್ಟಿಸಿರುವ ಒಂದು ಉನ್ನತ ಭೂಭಾಗವು ತಿರುಮಲೆಯೇ ಎಂದು ಹೇಳಿರುವ ಕಾರಣದಿಂದಲೇ ತಿರುಮಲೆಯ ಮೇಲ್ಭಾಗದಲ್ಲೇ ವಿಷ್ಣು ಪ್ರತಿಷ್ಠೆ ಮಾಡತಕ್ಕದ್ದು ಎನ್ನಲು ಪಾಂಡ್ಯರಾಜ ಕೇಳಿ ಸಂತುಷ್ಟನಾಗಿ ತಿರುಮಲೆ ಮೇಲ್ಭಾಗಕ್ಕೆ ಬಂದು ಒಂದು ಅಡಿ ದೂರದಲ್ಲಿ ಒಂದು ಸರೋವರ ಕಟ್ಟಿಸಿ ತನ್ನ ಅಭೀಷ್ಟ ದೈವನಾದ ಕೋದಂಡಧಾರಿಯಾದ ಚಕ್ರವರ್ತಿ ಕುಮಾರನನ್ನು **(ಶ್ರೀರಾಮಚಂದ್ರ)** ಸೀತಾಲಕ್ಷ್ಮಣರೊಂದಿಗೆ -

ಮುಮುಕ್ಷುಃ ಪ್ರಾಙ್ಮುಖಂ ದೇವಂ ಪ್ರತಿಷ್ಠಾಚ್ಯಾಯ್ಚಯೇ ಧರೀಂ
ದಕ್ಷಿಣಾಶಾಮುಖಂ ದೇವಂ ಸಂತಾನಾರ್ಥಿ ಸಮರ್ಪಯೇತ್
ಪಶ್ಚಿಮಾಭಿಮುಖಂ ದೇವಂ ಜಯಾರ್ಥಿಚಾರ್ಯಯೋ ಧರೀಂ
ಉತ್ತರಾಭಿಮುಖಂ ದೇವಂ ಜ್ಞಾನಾರ್ಥೀ ಸಮ್ಯಗರ್ಚಯೇತ್
ಗ್ರಾಮದೇವಾಭಿಮುಖ್ಯೇನ ಗೃಹದೇವಂ ಸಮರ್ಪಯೇತ್

(ಮೋಕ್ಷಾರ್ಥಿಯಾಗಿ ಭಕ್ತನು ಶ್ರೀಮನ್ನಾರಾಯಣನನ್ನು ಪ್ರಾಗ್ದಿಶಾಭಿಮುಖವಾಗಿ ಪ್ರತಿಷ್ಠಾಪನೆ ಮಾಡಿ ಆರಾಧಿಸತಕ್ಕದ್ದು. ಸಂತಾನಾರ್ಥಿಯಾದವನು ದಕ್ಷಿಣಾಭಿಮುಖವಾದ ದೇವನನ್ನು ಪೂಜಿಸತಕ್ಕದ್ದು ಜಯವನ್ನೇಪೇಕ್ಷಿಸುವವನು ಪಶ್ಚಿಮಾಭಿಮುಖವಾದ ಶ್ರೀಸ್ವಾಮಿಯನ್ನು ಅರ್ಚಿಸತಕ್ಕದ್ದು.

ಜ್ಞಾನವನ್ನುಭಿಲಾಷಿಸುವವನು ಉತ್ತರಾಭಿಮುಖನಾದ ದೇವನನ್ನು ಉತ್ತಮವಾಗಿ ಪೂಜಿಸತಕ್ಕದ್ದು. ಗೃಹದೇವ, ಗ್ರಾಮದೇವಗಭಿಮುಖವಾಗಿ ನಿಂತು ಸಮರ್ಪಿಸತಕ್ಕದ್ದು)

**(ಮುಂದುವರೆಯುತ್ತದೆ)**





# ಆಂಡಾಳ್

ಡಾ॥ ಎನ್.ಕೆ. ರಾಮಶೇಷನ್
8277146110

ಗೋದಾದೇವಿ ಅಥವಾ ಆಂಡಾಳ್ ದೇವಿ, ಕೋದೈ, ನಾಚ್ಚಿಯಾರ್ (ಶ್ರೇಷ್ಠಳಾದ ಕನ್ಯೆ) ನೀಳಾ ದೇವಿ, ಎಂದೆಲ್ಲ ಹೆಸರುಗಳಿಂದ ಶ್ರೀವಿಷ್ಣು ಭಕ್ತೆ ಭೂದೇವಿಯ ಅವತಾರವೆಂದೇ ಪ್ರಸಿದ್ಧಳು. ದ್ರಾವಿಡ ವೈಷ್ಣವ ಸಂತ ಹನ್ನೆರಡು ಆಳ್ವಾರರಲ್ಲಿ ಸ್ತ್ರೀ ಮಹಿಳೆಯೊಬ್ಬಳು ಆಳ್ವಾರ್ ಸಾಲಿಗೆ ಸೇರಿದ ಆಂಡಾಳ್ ಶ್ರೀನಿವಾಸ /ಶ್ರೀಮನ್ನಾರಾಯಣ ಹಾಗೂ ಶ್ರೀರಂಗದ ರಂಗನಾಥನ ಪರಮಭಕ್ತೆ. ದೇವರನ್ನೇವರಿಸುವೆನೆಂದು ದೃಢ ಮನಸ್ಸಿನಿಂದ ಭಕ್ತಿ/ಪ್ರಪತ್ತಿಗಳಿಂದ ಶ್ರೀರಂಗನಾಥನಲ್ಲಿಯೇ ಲೀನಳಾದದ್ದು ಒಂದು ಉನ್ನತ ಯೌಗಿಕ ಕ್ರಿಯೆ. ಇದು ಘಟಿಸಿದ ಘಟನೆ ಭಕ್ತಿಯಿಂದ ಆಳುವಳು ಆಂಡಾಳ್ ಎಂದರ್ಥ ಕ್ರಿ.ಶ. 8-9 ನೇ ಶತಮಾನದ ಕಾಲ ಈಕೆ ಬದುಕಿದ್ದು.


ಆಂಡಾಳ್ ಜನಿಸಿದ್ದು ತಮಿಳುನಾಡಿನ ಶ್ರೀರಂಗಂ ಸಮೀಪ ಇರುವ ಶ್ರೀವಿಲ್ಲಿಪುತ್ತೂರಿನಲ್ಲಿ ಅದನ್ನು ಈ ಶ್ಲೋಕ ತಿಳಿಯಪಡಿಸುತ್ತದೆ.

**ಕರ್ಕಟೇ ಪೂರ್ವ**
**ಫಲ್ಗುಣ್ಯಾಂ ಪಾಂಡ್ಯೇ ವಿಶ್ವಂಭರಾಂ**
**ಗೋದಾಂ ವಂದೇ ಶ್ರೀರಂಗನಾಯಕೀಂ**
**ಸ್ವೋಚ್ಚಿಷ್ಟ ಮಾಲಿಕಾ**
**ಗಂಧಬಂಧುರ ಜಿಷ್ಣಮೇ**
**ವಿಷ್ಣು ಚಿತ್ತತನೂಜಾಯೈ ಗೋದಾಯೈ**
**ನಿತ್ಯಮಂಗಳಂ**

ಶ್ರೀವಿಲ್ಲಿಪುತ್ತೂರು ವಿಶೇಷ ವಟಪತ್ರಶಾಯಿ ಸನ್ನಿಧಿ-ಎಂದರೆ ಆಲದೆಲೆಯ ಮೇಲೆ ಮಲಗಿರುವ ಮುದ್ದುಕೃಷ್ಣನ ದೇವಾಲಯ. ಪೂಜಿಸುತ್ತಿದ್ದ ಭಕ್ತ ಪೆರಿಯಾಳ್ವಾರ್/ವಿಷ್ಣುಚಿತ್ತರ್ ಎಂದು ಹೆಸರಾದವರು. ಬ್ರಹ್ಮಚಾರಿ, ನಿತ್ಯವೂ ದೇವಾಲಯದ ಸನಿಹ ಇರುವ ಪುಟ್ಟ ಉದ್ಯಾನವನದಲ್ಲಿ ತುಲಸಿ ಹೂಗಳನ್ನು ಬೆಳೆಸುತ್ತ ಆ ಮಾಲಿಕೆಯನ್ನು ದೇವರಿಗೆ ಅರ್ಪಿಸುವುದು ಪೆರಿಯಾಳ್ವಾರರ ಕಾಯಕ ರಾಮಾಯಣದಲ್ಲಿ ಜನಕ ಮಹಾರಾಜನಿಗೆ, ಯಾಗಭೂಮಿಯಲ್ಲಿ ನೇಗಿಲಿನಿಂದ ಉಳುಮೆ ಮಾಡುವಾಗ, ಸೀತಾ (ನೇಗಿಲಿನ ಗೆರೆಗೂ ಈ ಹೆಸರಿದೆ) ಲಭಿಸಿ ರಾಜನ ಮನತುಂಬಲಿಲ್ಲವೇ ಭೂದೇವಿ ಅಂಶಜೆಯಾಗಿ? ಹಾಗೆಯೇ ಪೆರಿಯಾಳ್ವಾರರು ಒಂದು ದಿನ ಬೆಳಿಗ್ಗೆ ತುಲಸೀ ತೋಟದಲ್ಲಿ, ತುಲಸೀ ಹೂಗಳನ್ನು ತಿರಿಯುವಾಗ, ಪಾತಿಯಲ್ಲಿ ಒಂದು ಮುದ್ದಾದ ಹೆಣ್ಣು ಮಗು ಮಲಗಿರುವುದು ಕಂಡು ವಿಸ್ಮಯಗೊಂಡರು. ಬ್ರಹ್ಮಚಾರಿಗೆ ಸಂಸಾರ ಮಗುವನ್ನು ತಂದರು. ಮುಂದೆ ಮುದ್ದಾಗಿ ಬೆಳೆಸಿದರು. ಆಂಡಾಳ್ ಗೋದಾದೇವಿಯ ತಂದೆ ಎನಿಸಿದರು.

ಚೆಲುವೆ, ಮುಗ್ಧೆ ಆಂಡಾಳ್ ಆಳ್ವಾರರು ಬೆಳಸಿದರು. ಆಗಾಗ್ಗೆ ಹೇಳುತ್ತಿದ್ದ ಕಥೆಗಳು, ರಾಮಾಯಣ, ಭಾಗವತ ಶ್ರೀಕೃಷ್ಣ, ಭಾರತ, ವಿಷ್ಣು ಸಹಸ್ರನಾಮ ಹೀಗೆ ಮನದಲ್ಲಿಯೇ ಗೋದೆಗೆ ದೇವರಲ್ಲಿ ಪ್ರೇಮ ಬೆಳೆಯುತ್ತ ಬಂದಿತು. ಆರೇಳು ವರ್ಷವಾಗುವಾಗ ಗೋದಾ ತುಲಸಿ, ಹೂಮಾಲೆ ಕಟ್ಟಿ ದೇವರಿಗೆ ಕೊಡುವ ಕಾರ್ಯಕೈಗೊಂಡಳು.

ಆಳ್ವಾರರು ನೀಡುವ ತುಲಸಿ, ಹೂನಾರು, ಗೋದೆ ತಂದೆಯವರಿಗೆ ತಿಳಿಯದಂತೆ ತಾನು ಮೊದಲು ಕಟ್ಟಿದ ಮಾಲೆ ಮುಡಿದು ಕನ್ನಡಿಯಲ್ಲಿ ದೇವರಿಗೆ ಒಪ್ಪುವುದೇ ಎಂದು ನೋಡಿಕೊಂಡು, ಅನಂತರ ಹೂಬುಟ್ಟಿಗೆ ಸೇರಿಸುವುದು ಮುಂದುವರಿಯಿತು. ಒಂದು ದಿನ ಆಳ್ವಾರರು ಏಕೆ ಏನೋ ಬೇಗ ಮನೆಗೆ ಬಂದು, ನೋಡಿದರು, ಮಗಳು ನಾನು ಮೊದಲು ಹೂ-ತುಲಸಿ ಮುಡಿದು ಅನಂತರ



ಬುಟ್ಟಿಯಲ್ಲಿರಿಸುವಿಕೆಯನ್ನು ನೋಡ ಅವರ ಮನಸ್ಸಿಗೆ ನೋವಾಯಿತು. ದೇವರಿಗೆ ಮೊದಲು ಅನಂತರ ಪ್ರಸಾದ ನಾವು ಸ್ವೀಕರಿಸುವುದಲ್ಲದೇ? ಆಳ್ವಾರರು ಅಂದು ನೊಂದು ಮೌನವಾಗಿದ್ದು ಬಿಟ್ಟರು.

ರಾತ್ರಿಯೇ ಕನಸು ವಟಪತ್ರಶಾಯಿಯೇ ತೋರಿ, "ಆಳ್ವಾರರೇ ಈ ಹೊತ್ತು ಮಳೆ ನೀವು ಹೂಮಾಲೆ ಅರ್ಪಿಸಲಿಲ್ಲ" ಎಂದಾಗ ಪೆರಿಯಾಳ್ವಾರರು ನಡೆದ ಸಂಗತಿ ನಿವೇದಿಸಿದರು. ದೇವರು ಹೇಳಿದ್ದು. 'ಆಂಡಾಳ್ ಮುಡಿದು ಕೊಟ್ಟ ಹೂವೇ ನನಗೆ ಪ್ರಿಯ ಆಳ್ವಾರರೇ! ಅವಳ ಪರಮ ಭಕ್ತಿ ! ಇನ್ನು ಮೇಲೆ ತಾನು, ಗೋದಾ ಮುಡಿದು ಕೊಟ್ಟ ಹೂವನ್ನೇ ಸಮರ್ಪಿಸಬೇಕು ನನಗೆ ತಿಳಿಯಿತೇ? "

ಕನಸು ತಿಳಿಯಿತು. ಆಳ್ವಾರರು ಎಚ್ಚೆತ್ತರು. ಅಂದಿನಿಂದ ಗೋದಾ ದೇವಿಗೆ "ಶೂಡಿಕುಡುತ್ತ ನಾಚ್ಚಿಯಾರ್ - ತಾನು ಮೊದಲು ಮುಡಿದ ಹೂ ಅರ್ಪಿಸಿದ ಕನ್ಯೆ" ಎಂದೇ ಹೆಸರಾಯ್ತು ನಾರದ ಭಕ್ತಿ ಸೂತ್ರಗಳಲ್ಲಿ ಒಂದೆಡೆ ಭಕ್ತಿ ಎಂದರೆ ಪರಮ ಪ್ರೇಮಸ್ವರೂಪವಾದದ್ದು ಎಂದೇ ಬಂದಿದೆ. ಇದೇ ಗೋದೆಯ ಪ್ರೇಮ.

ಆಂಡಾಳ್, ತಾನು ಗೋಪಿ ಎಂದೇ ಭಾವಿಸುತ್ತ ಶ್ರೀ ಕೃಷ್ಣನನ್ನೇ ವರಿಸುವ ಇಚ್ಛೆಯುಳ್ಳವಳಾದಳು. ಮುಂದೆ,ಮದುವೆ ಆದರೆ, ಪರಮಾತ್ಮನನ್ನೇ ! ಆ ಒಂದು ಪ್ರೇಮಭಕ್ತಿ ಬೆರೆತು ಹಾಡಿದ ಮೂವತ್ತು ಪದ್ಯಗಳೇ ಇಂದೂ ಕೂಡ ಧನುರ್ಮಾಸದ ಪ್ರತಿನಿತ್ಯ ಬೆಳಗಿನಲ್ಲಿ ಶ್ರೀ ವೈಷ್ಣವರು ವಿಶೇಷತಃ ಹಾಡುವ "ತಿರುಪ್ಪಾವೈ" ಪದ್ಯಗಳು ಭಕ್ತಿ ಕಾವ್ಯ ಇಲ್ಲದ ಕಥೆ ವರ್ಣನೆದೈವ ಭಕ್ತಿ ಇನ್ನೆಲ್ಲಿ ಕರ ಕೇಳುವೆವು ನಾವು ಮುಂದೆ,11ನೇ ಶತಮಾನದಲ್ಲಿ ಬಂದ ಶ್ರೀರಾಮಾನುಜಾಚಾರ್ಯರು ಪ್ರತಿ ನಿತ್ಯವೂ ಯತಿ ಭಿಕ್ಷೆಯ ಸಮಯ ಹಾಡುತ್ತಿದ್ದ ಆಂಡಾಳ್ ತಿರುಪ್ಪಾವೈಯಿಂದಾಗಿ "ತಿರುಪ್ಪಾವೈಜೀಯರ್" ಎಂದೇ ಹೆಸರಾದರು.

ಮೂವತ್ತು ಪದ್ಯಗಳ ತಿರುಪ್ಪಾವೈ 'ಶ್ರೀಕೃಷ್ಣ ಸೇವಾವ್ರತ ಸಿರಿನೋಂಪಿ' ಎಂದೇ ಪ್ರಸಿದ್ಧ ಆಗಿದೆ. "ಮಾಸಾನಾಂ ಮಾರ್ಗಶೀರ್ಷೋಽಸ್ಮಿ" ಎಂದು ಶ್ರೀಕೃಷ್ಣ ಗೀತೆಯಲ್ಲಿ ಸಾರಿದಂತೆ. "ಧನುಮಾಸ/ಮಾಗಿ /ಮಾರ್ಗಶಿರದಲ್ಲಿ ಪ್ರತಿನಿತ್ಯವೂ ತಿರುಪ್ಪಾವೈ ಪದ್ಯಗಳನ್ನು ಹಾಡುವ, ಒಳ್ಳೆಯ ಪೊಂಗಲ್ (ಹುಗ್ಗಿ)ದೇವರಿಗೆ ಸಮರ್ಪಿಸುವ ಪೂಜೆ ಇಂದಿಗೂ ಮುಂದುವರಿದಿದೆ.

ಮಗಳಿಗೆ ಮದುವೆ ವಯಸ್ಸು ಎಂದುಕೊಂಡರು ಆಳ್ವಾರರು, ದೇವರ ಕಥೆಗಳನ್ನು ತಿಳಿಸುತ್ತ, ಆಂಡಾಳ್ ತಾನು ದೇವರನ್ನೇ ಮದುವೆಯಲ್ಲವೆ ವಿನಹ ಬೇರಾರನ್ನು ಆಗುವುದಿಲ್ಲ ಎಂದಾಗ,ಆಳ್ವಾರರು ಚಕಿತರಾಗಿ ಬಿಟ್ಟರು. ಇದೆಂತು ಸಾಧ್ಯ ದೇವರೇ ಪುನಃ ಆಳ್ವಾರರ ಕನಸಿನಲ್ಲಿ ಮೈದೋರಿ ತಿಳಿಸಿದ ಯೋಚಿಸದಿರಿ ಆಳ್ವಾರೆ, ಆಂಡಾಳ್ ಅನ್ನು ವಧುವಿನಂತೆ ಸಿಂಗರಿಸಿ ಮದುವೆ ದಿಬ್ಬಣದಲ್ಲಿ ಶ್ರೀ ವಿಲ್ಲಿಪುತ್ತೂರಿನಿಂದ ನನ್ನ (ಶ್ರೀರಂಗದ) ದೇವಳಕ್ಕೆ ಕರೆತನ್ನಿರಿ.

ಮುಂದಿನದು ನೀವೆಲ್ಲರೂ ನೋಡುವಿರಂತೆ: ಭಗವಂತನ ಆದೇಶವಿದು ಪೆರಿಯಾಳ್ವಾರರು ಮಗಳನ್ನು ಶೃಂಗರಿಸಿ ದಿಬ್ಬಣದಲ್ಲಿ ಶ್ರೀರಂಗನ ಸನ್ನಿಧಿಗೆ ಕರೆ ತಂದರು. ಅನಂತರದಲ್ಲಿ ಆಂಡಾಳ್ ಇದೆಲ್ಲದನ್ನು ತನ್ನ ಇನ್ನೊಂದು ಕಾವ್ಯದ "ನಾಚ್ಚಿಯಾರ್ ತಿರುಮೊಳಿ" ನಾಯಕೀಗೀತೆ 143 ಪದ್ಯಗಳಲ್ಲಿ ಹಾಡಿದ್ದಾಳೆ."ವೃಂದಾವನಮೇಕಂ ಡೋಮೆ

ಭಕ್ತಿಯ ವೃಂದಾವನವನ್ನೇ ನಾನು ಕಂಡೋಮೇ ಸಖಿಯೆ" ಎಂದು ದೈವನದುಂಬಿಹಾಕಿದ್ದಾಳೆ.


ಆಳ್ವಾರರು ಕರೆತಂದರು ಆಂಡಾಳ್ ದೇವಿಯನ್ನು ಶ್ರೀರಂಗನಾಥಸ್ವಾಮಿ ಸನ್ನಿಧಿಗೆ ನಡೆದದ್ದು : ಆ ಕನ್ಯೆ ಗೋದಾ ನೇರ ಸ್ವಾಮಿಯ ಪಲಂನ ವೇರಿ ಲೀನಳಾದಳು. ಪೆರಿಯಾಳ್ವಾರರು ಹಾಗೂ ನೆರೆದ ಆಂಡಾಳ್ ಭಕ್ತರೂ ವಿಸ್ಮಿತರಾದರು. ಉದಾಹರಣೆಗೆ ಒಂದೇ ಪದ್ಯಗಳು ತಿರುಪ್ಪಾವೈ ಶಿತ್ತಂಶಿರು ಕಾಲೇ ವಂದ್ ಉನ್ನೈಶೇ ವಿತ್ತು ಉನ್ ಪೊತ್ತಾ ಮರೈಯ ಶಿಯೇ ಪೋತ್ತುಮ್ ಪೊರುಳ್ ಕೇಳಾಯ್"

**ಹೊತ್ತು ಮಾಡುವಮುನ್ನ ಬಂದು ನಿನ್ನನು ಸೇವಿಸಿ**
**ನಿನ್ನ ಹೊಂದಾವರೆಯಂಥ ಪದ್ಯಗಳನ್ನು ಹೊಗಳುವವರು**

ಭಾವವೇನೆಂದು ಕೇಳು ಎನ್ನಸ್ವಾಮಿ ! ಎನ್ನುತ್ತ ಹಾಡುತ್ತಾಳೆ.

**ಕುಂಕುಮ ಪೂಸಿಕೊಂಡು ಕಣ್ಣನೆಯ ಶ್ರೀಸುಧಧತೀ**
**ಮಂಗಲದಿ ಬೀದಿ ತಿರುಗಿ ಅಲ್ಲಲ್ಲಿ, (ನನ್ನ ಮಗನಲ್ಲ)**
**ಅವನೊಡನೆ ಆನೆಯ ನೇರಿ ಓಕುಳಿ ಯಾಡಿ**
**ಜಳಕ ಮಾಡಿದೆ ನೆಂಬಕನಸ ಕಂಡನೇ ಕಳದೀ**
**(ನಾಯಕೀ ಅಂತ)**

ಆಂಡಾಳ್ ಹಾಡಿದ ತಿರುಪ್ಪಾವೈ, ಪ್ರೇಮಗೀತೆ, ನಾಯಕೀ ಗೀತ ಈ ಎರಡೂ ಭಕ್ತಿ ಕಾವ್ಯಗಳು, ಭಗವತ್ಪ್ರೇಮ ಭರಿತ ಆದ ಶ್ರೇಷ್ಠ ಕಾವ್ಯಗಳು ಎಂದರೆ ಉತ್ಪ್ರೇಕ್ಷೆಯಲ್ಲ. ಇದನ್ನು ಹಾಡುತ್ತ ಮನ ಅರ್ಪಿಸಿಕೊಳ್ಳುವ ಮನಸ್ಸಿನವರಿಗೆ, ಇಹ ಪರ್ವಗಳಲ್ಲಿ ಭಗವಂತನ ಸೌಖ್ಯ ಲಭ್ಯಕಾರಣ ಇದನ್ನು



ಹಾಡಿದ ಕವಯಿತ್ರಿ ಗೋದಾ, ದೇವರೊಡನೆಯೇ ಸದಾ ಇದ್ದವಳು. ಈ ತರಹದ ಬದುಕು ಸ್ವೀಕಾರ ಆದರೆ ಭಗವಂತನಿಗೆ ಅರ್ಪಿತ ಆಗುವಾಗ ಶುಭ ಮಂಗಳ ಭದ್ರತೆತೊಡಗೂಡಿ ಆಗುತ್ತದೆಂದು ಹಾಡಿದವಳು. ಶ್ರೀನಿವಾಸನನ್ನು "ತಿರುವೇಂಗಡ ಮುಡೈಯಾನ್" ಎಂದೇ ಹಾಡಿದ ಪರಮ ಭಕ್ತೆ. ಪೆರಿಯಾಳ್ವಾರರಿಗೆ ತಕ್ಕ ಮಗಳು.

## ತಿ.ತಿ.ದೇ., ತಿರುಮಲೆ, ಶ್ರೀ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು

| ದಿನಾಂಕ | ವಾರ | ಉತ್ಸವಗಳು | |
|---|---|---|---|
| 04-08-2025 | ಸೋಮವಾರ | ................................ | ಅಂಕುರಾರ್ಪಣೆ |
| 05-08-2025 | ಮಂಗಳವಾರ | ಪವಿತ್ರ ಪ್ರತಿಷ್ಠೆ | ಶ್ರಾವಣ ಮಾಸದಲ್ಲಿ ನಡೆಯುತ್ತದೆ |
| 06-08-2025 | ಬುಧವಾರ | ಪವಿತ್ರ ಸಮರ್ಪಣೆ | |
| 07-08-2025 | ಗುರುವಾರ | ಪೂರ್ಣಾಹುತಿ | |



# ಆಗಸ್ಟ್ 2025 ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

## ಮೇಷ

ಅಲಂಕಾರ ಯೋಗ, ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸುವುದು ಬಂಧು ಮಿತ್ರರೊಂದಿಗೆ ಸಭೆ ಸೇರುವುದು. ಅತಿಯಾದ ಹಣ ಖರ್ಚು ವೃತ್ತಿಪರ ಮತ್ತು ವ್ಯಾಪಾರ ವ್ಯವಹಾರಗಳಲ್ಲಿ ನಿಶ್ಚಲತೆ, ಮಿತಿ ಮೀರಿದ ಮತ್ತು ವ್ಯರ್ಥ ಖರ್ಚು.

## ವೃಷಭ

ನೀವು ನಿಗದಿಪಡಿಸಿದ ಕೆಲಸಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುತ್ತವೆ. ನೀವು ಧೈರ್ಯದಿಂದ ವ್ಯವಹಾರದಲ್ಲಿ ಯಶಸ್ಸನ್ನು ಸಾಧಿಸುವಿರಿ. ಉದ್ಯೋಗ ವಿಷಯಗಳಲ್ಲಿ ನೀವು ಮುಂದಿರುತ್ತೀರಿ ಮತ್ತು ಎಲ್ಲಾ ವೃತ್ತಿಗಳ ಜನರು ಜೀವನದಲ್ಲಿ ಬೆಳವಣಿಗೆ, ವೈಯಕ್ತಿಕ ಲಾಭ ಮತ್ತು ಜೀವನ ಮಟ್ಟದಲ್ಲಿ ಹೆಚ್ಚಳವನ್ನು ಅನುಭವಿಸುತ್ತಾರೆ. ಜೊತೆಗೆ ಹೇರಳವಾದ ಆರೋಗ್ಯವನ್ನು ಅನುಭವಿಸುತ್ತಾರೆ.

## ಮಿಥುನ

ನೀವು ದೂರದ ಪ್ರಯಾಣ ಮಾಡುತ್ತೀರಿ. ಪೂರ್ಣ ಕ್ಷೇತ್ರಗಳು ಸೇರಿದಂತೆ ಹಲವು ಸ್ಥಳಗಳಿಗೆ ಪ್ರಯಾಣಿಸುತ್ತೀರಿ ಗಂಗಾ ನದಿಯಂತಹ ಪವಿತ್ರ ನದಿಗಳಲ್ಲಿ ಸ್ನಾನ ಮಾಡುತ್ತೀರಿ ಆರ್ಥಿಕ ಏರಿಳಿತಗಳನ್ನು ಅನುಭವಿಸುವಿರಿ.

## ಕರ್ಕಾಟಕ

ಈ ತಿಂಗಳ ಮೊದಲಾರ್ಧದಲ್ಲಿ ಆರೋಗ್ಯ ಸಮಸ್ಯೆಗಳು ಉದ್ಭವಿಸುತ್ತವೆ ತಂದೆ ಮತ್ತು ಸಂಬಂಧಿಕರೊಂದಿಗೆ ಭಿನ್ನಾಭಿಪ್ರಾಯಗಳು ಉಂಟಾಗುತ್ತವೆ. ಸ್ಥಿರತೆ ಇರುವುದಿಲ್ಲ. ಹಣಕಾಸಿನ ವಿಷಯಗಳು ಸಾಮಾನ್ಯವಾಗಿರುತ್ತವೆ. ದ್ವಿತೀಯಾರ್ಧದಲ್ಲಿ ಶುಭ ಯೋಗಗಳು.

## ಸಿಂಹ

ನೀವು ಹೊಸ ಯೋಜನೆಗಳನ್ನು ರಚಿಸುವಿರಿ, ಹೆಚ್ಚು ಕ್ರಿಯಾಶೀಲರಾಗಿ ಮತ್ತು ಉತ್ಸಾಹಭರಿತರಾಗಿರುತ್ತೀರಿ ಮತ್ತು ಗೌಪ್ಯ ದಾಖಲೆಗಳು ಇತ್ಯಾದಿಗಳನ್ನು ನಿಮಗೆ ಲಭ್ಯವಾಗುವಂತೆ ಇಟ್ಟುಕೊಳ್ಳಬೇಕಾಗುತ್ತದೆ. ಇದು ನಿಮ್ಮ ಅಹಂ ಮತ್ತು ಭೌತಿಕ ಸಂಪತ್ತನ್ನು ಹೆಚ್ಚಿಸುತ್ತದೆ.

## ಕನ್ಯೆ

ಪ್ರಯಾಣಗಳು ಫಲಪ್ರದವಾಗುತ್ತವೆ. ಕುಟುಂಬ ಸದಸ್ಯರೊಂದಿಗೆ ಸಾಮರಸ್ಯದ ಸಂಬಂಧವನ್ನು ನೀವು ಆನಂದಿಸುವಿರಿ. ಉತ್ತಮ ಆರೋಗ್ಯದೊಂದಿಗೆ ನೀವು ಸಂತೋಷ ಮತ್ತು ಐಷಾರಾಮಿ ಜೀವನವನ್ನು ನಡೆಸುವಿರಿ.

## ತುಲಾ

ಕಠಿಣ ಪರಿಶ್ರಮಕ್ಕೆ ಪ್ರತಿಫಲ ಸಿಗುತ್ತದೆ. ನೀವು ಜೀವನವನ್ನು ಆನಂದಿಸುವಿರಿ. ಉದ್ಯೋಗಿಗಳಿಗೆ ಸುಲಭವಾಗಿ ಆದಾಯ ಅಥವಾ ಆದಾಯದಲ್ಲಿ ಏನಾದರೂ ಹೆಚ್ಚಳವಾಗುತ್ತದೆ. ಈ ಅವಧಿಯಲ್ಲಿ ಆರ್ಥಿಕ ಸ್ಥಿತಿಯಲ್ಲಿ ಹೆಚ್ಚಳ ಕಂಡು ಬರುತ್ತದೆ.

## ವೃಶ್ಚಿಕ

ಪೂಜೆಯ ಶಕ್ತಿ ಹೆಚ್ಚಾಗುತ್ತದೆ. ನಂಬಿಕೆಗಳು, ಆಧ್ಯಾತ್ಮಿಕತೆ ಇತ್ಯಾದಿಗಳಲ್ಲಿ ನೀವು ಆಸಕ್ತಿ ಹೊಂದಿರುತ್ತೀರಿ. ನಿಮಗೆ ಜ್ಞಾನದ ಬಾಯಾರಿಕೆ ಇರುತ್ತದೆ. ನೀವು ಎಲ್ಲರಿಗೂ ಪ್ರೋತ್ಸಾಹ ಮತ್ತು ಸ್ಫೂರ್ತಿ ನೀಡುತ್ತೀರಿ.

## ಧನಸ್ಸು

ವೃತ್ತಿ ಪರತೆ, ಒಳ್ಳೆಯ ಕಾರ್ಯಗಳು, ನೈತಿಕತೆ, ಉನ್ನತ ಮೌಲ್ಯಗಳಿಗೆ ಬದ್ಧತೆ ಮತ್ತು ಆಧ್ಯಾತ್ಮಿಕತೆಯಲ್ಲಿ ಆಸಕ್ತಿ ಸಾಂಪ್ರದಾಯಿಕ ವೈಯಕ್ತಿಕ ಮೌಲ್ಯಗಳಿಗೆ ಬದ್ಧರಾಗಿರಿ.

## ಮಕರ


ನೀವು ಶ್ರೇಷ್ಠತೆಯನ್ನು ಸಾಧಿಸುವ ಅಸಾಧಾರಣ ಸಾಮರ್ಥ್ಯವನ್ನು ಹೊಂದಿರುತ್ತೀರಿ ಮತ್ತು ಶ್ರೇಷ್ಠತೆಯನ್ನು ಸಾಧಿಸುವಿರಿ ನಿಮ್ಮ ವ್ಯವಹಾರ ಪಾಲುದಾರರನ್ನು ನೀವು ಗೌರವಿಸಬೇಕು. ಏಕೆಂದರೆ ಅವರ ಬಗ್ಗೆ ಕ್ಷುಲ್ಲಕ ಭಾವನೆಯು ನಿಮ್ಮನ್ನು ದೂರ ಮಾಡುತ್ತದೆ.

## ಕುಂಭ

ಜಾಗರೂಕರಾಗಿರುವುದು ಮತ್ತು ಅಪಾಯಗಳನ್ನು ನಿವಾರಿಸುವುದು ಸಮಾಜ ಮತ್ತು ಕುಟುಂಬದ ಸುರಕ್ಷತೆಯನ್ನು ರಕ್ಷಿಸುವುದು, ಚೇತರಿಕೆ ಸಾಧಿಸುವುದು ಮತ್ತು ಆರೋಗ್ಯದ ಬಗ್ಗೆ ಜಾಗರೂಕರಾಗಿರುವುದು ಯಾವುದೇ ಆರೋಗ್ಯ ಸಮಸ್ಯೆಗಳನ್ನು ತಡೆಯುತ್ತದೆ.

## ಮೀನ

ಮಕ್ಕಳಿಂದ ಶುಭ ಸುದ್ದಿ ಬರಲಿದೆ ಆರ್ಥಿಕ ಬೆಳವಣಿಗೆ ಇರುತ್ತದೆ ಸೃಜನಶೀಲರಾಗಿರಿ ಮತ್ತು ನೀವು ಎಲ್ಲರ ಗೌರವವನ್ನು ಗಳಿಸುವಿರಿ. ನೀವು ಕೆಲಸದಲ್ಲಿ ಬಡ್ತಿ ಅಥವಾ ಆರ್ಥಿಕ ಬೆಳವಣಿಗೆಯನ್ನು ಪಡೆಯಬಹುದು.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

## 1.ಪಂಚಾಂಗ ಎಂದರೇನು?

**ಉತ್ತರ :** ಪಂಚಾಂಗ ಎಂದರೆ ಆಯಾ ದಿವಸಗಳಲ್ಲಿ ನಡೆಯುವ ನಕ್ಷತ್ರ, ತಿಥಿ, ಕರಣ, ಯೋಗ ಮತ್ತು ವಾರ ಎಂಬ ಐದು ಅಂಗಗಳನ್ನು ನಿರ್ಣಯಿಸಿ ತಿಳಿಸುವ ಶಾಸ್ತ್ರ. ಶುಭ ಕಾರ್ಯಕ್ಕೆ ಪಂಚಾಂಗ ಶುದ್ಧಿಯೇ ಮುಖ್ಯ. ಹಬ್ಬ ಹರಿದಿನಗಳನ್ನು ನೋಡಲು ಸಿದ್ಧಾಂತ ರೀತ್ಯ ಪಂಚಾಂಗ ನೋಡಬೇಕು. ವಿವಾಹಾದಿ ಮುಹೂರ್ತಗಳಿಗೆ, ಜಾತಕಾದಿಗಳಿಗೆ ದೃಗ್ಗಣಿತ ರೀತ್ಯಾ ನೋಡಬೇಕು.

ತಿಥೇ ಶ್ರೀಯಮಾಪ್ನೋತಿ
ವಾರದಾಯುಷ್ಯವರ್ಧನಂ
ನಕ್ಷತ್ರಾಹರತೇ ಪಾಪಂ
ಯೋಗಾದ್ರೋಗ ನಿವಾರಣಂ
ಕರಣಾತ್ ಕಾರ್ಯ ಸಿದ್ಧಿಂಶ್ಚ
ಪಂಚಾಂಗಂ ಫಲಮುತ್ತಮಮ್

ಎಂಬಂತೆ ಪಂಚಾಂಗ ಶುದ್ಧಿಯಿದ್ದರೆ ಶುಭಕಾರ್ಯ ಸಿದ್ಧಿಸುತ್ತದೆ.

## 2) ನವಗ್ರಹಗಳ ಉತ್ಪತ್ತಿ ಹೇಗಾಯಿತು?

**ಉತ್ತರ :** ಬಿಗ್ಬ್ಯಾಂಗ್ ಥಿಯರಿಯ ಪ್ರಕಾರ ಸೂರ್ಯನು ಉರಿಯುವ ಒಂದು ಬೆಂಕಿಯ ಅಗಾಧ ಸ್ತೋಮವೆಂದೂ, ಅದು ಸದಾ ತಿರುಗುತ್ತಲಿದ್ದು ಆದ್ದರಿಂದ ಭಾಗಾಂಶಗಳು ಸಿಡಿದು ಹೋಗಿ ದೂರದೂರಗಳಲ್ಲಿ ನಿಂತು ಸೂರ್ಯನ ಕೇಂದ್ರಾಕರ್ಷಣೆಗೆ ಒಳಪಟ್ಟು ಘನೀಭೂತವಾಗಿ ಗ್ರಹಗಳೆಂದು ಕರೆಯಲ್ಪಟ್ಟವು. ಸೂರ್ಯನಿಂದ ಬುಧ, ಶುಕ್ರ, ಭೂಮಿ, ಕುಜ, ಗುರು, ಶನಿ,ಗ್ರಹಗಳು ಉಂಟಾದವು. ಭೂಮಿಯನ್ನು ಕೇಂದ್ರವಾಗಿಟ್ಟುಕೊಂಡಾಗ ಭೂಮಿಯ ಸುತ್ತಸುತ್ತುವ ಚಂದ್ರನನ್ನು ಗ್ರಹವೆಂದು ಗಣನೆಗೆ ತೆಗೆದುಕೊಳ್ಳಲಾಯಿತು. ಭೂಮಿಯು ಸೂರ್ಯನ ಸುತ್ತಲೂ ತಿರುಗುವ ಮಾರ್ಗದ ವೃತ್ತವನ್ನು ಕಾಂತಿವೃತ್ತವೆನ್ನಲಾಗಿದೆ. ಚಂದ್ರನು ಭೂಮಿಯ ಸುತ್ತಲೂ ತಿರುಗುವ ಮಾರ್ಗವು ಮತ್ತು ಕಾಂತಿವೃತ್ತ ಪರಸ್ಪರ 180 ಡಿಗ್ರಿಗಳಲ್ಲಿ ಖಂಡಿಸುವುದರಿಂದ ಆ ಎರಡೂ ಸ್ಥಳದ ಬಿಂದುಗಳು ಕಾಲ್ಪನಿಕ ಬಿಂದುಗಳು. ಈ ಸಂಪಾತ ಬಿಂದುಗಳನ್ನು ರಾಹುಗ್ರಹ ಹಾಗೂ ಕೇತುಗ್ರಹವೆಂದು ಪರಿಗಣಿಸಲಾಗುತ್ತದೆ. ಚಂದ್ರನು ದಕ್ಷಿಣದಿಂದ ಉತ್ತರಕ್ಕೆ ಹೋಗುವ ಮಾರ್ಗದಲ್ಲಿ ಛೇದಿಸುವ ಬಿಂದುವನ್ನು ರಾಹು ಎಂತಲು ಉತ್ತರದಿಂದ ದಕ್ಷಿಣಕ್ಕೆ ಹೋಗುವ ಮಾರ್ಗದಲ್ಲಿ ಛೇದಿಸುವ ಬಿಂದುವನ್ನು ಕೇತು ಎಂದೂ ಕರೆಯಲಾಗುತ್ತದೆ.

## 3) ಗ್ರಹಗಳಿಗೂ ವಾರಗಳಿಗೂ ಇರುವ ಸಂಬಂಧವೇನು?

**ಉತ್ತರ :** ಸೂರ್ಯನಿಗೆ ಭಾನುವಾರ,ಚಂದ್ರನಿಗೆ ಸೋಮವಾರ, ಕುಜನಿಗೆ ಮಂಗಳವಾರ,ಬುಧನಿಗೆ ಬುಧವಾರ,ಗುರುವಿಗೆ ಗುರುವಾರ, ಶುಕ್ರನಿಗೆ ಶುಕ್ರವಾರ,ರಾಹುವಿಗೆ ಶನಿವಾರ, ಕೇತುವಿಗೆ ಮಂಗಳವಾರ. ಗ್ರಹಗಳಿಗೆ ಬಣ್ಣಗಳಿರುತ್ತವೆ. ರವಿಗೆ ಕೆಂಪು, ಚಂದ್ರನಿಗೆ ಬಿಳಿ,ಕುಜನಿಗೆ ಗಾಢಕೆಂಪು,ಬುಧನಿಗೆ ಹಸಿರು,ಗುರುವಿಗೆ ಸುವರ್ಣಹಳದಿ, ಶುಕ್ರನಿಗೆ ಬೂದುಬಣ್ಣ, ಶನಿಗೆ ನೀಲಿ ಅಥವಾ ಕಪ್ಪು, ರಾಹುವಿಗೆ ಧೂಮ್ರ ವರ್ಣ, ಕೇತುವಿಗೆ ಕಂದುಬಣ್ಣ ಆಯಾ ವಾರಗಳಂದು ಆಯಾ ಗ್ರಹಗಳ ಬಣ್ಣದ ಬಟ್ಟೆಗಳನ್ನು ಧರಿಸುವುದರಿಂದ ಕೆಲಸ ಕಾರ್ಯಗಳು ಕೈಗೂಡುತ್ತವೆ.


## 4) ಸೂರ್ಯನ ಬೆಳಕನ್ನು ಗ್ರಹಗಳು ಪ್ರತಿಫಲಿಸುತ್ತವೆ ಎಂಬುದಕ್ಕೆ ಪುರಾವೆಗಳೇನು?

**ಉತ್ತರ :** ಸೂರ್ಯನ ಕಿರಣಗಳಲ್ಲಿ ಏಳನ್ನು ಮುಖ್ಯವಾಗಿ ಪರಿಗಣಿಸಲಾಗಿದೆ.ಸುಷುಮ್ನ, ಹರಿಕೇಶ, ವಿಶ್ವಕರ್ಮ, ವಿಶ್ವಶ್ರವೆ, ಸಂಪದ್ವಸು, ಅರ್ವಗ್ವಸು, ಸ್ವರಾಟ. ಸುಷುಮ್ನಾ ಕಿರಣವು ಚಂದ್ರ ನಿಗೂ, ಹರಿಕೇಶವು ನಕ್ಷತ್ರಗಳಿಗೂ ವಿಶ್ವಕರ್ಮವು ಬುಧನಿಗೂ, ವಿಶ್ವಶ್ರವೆಯು ಶುಕ್ರನಿಗೂ, ಸಂಪದ್ವಸುವು ಕುಜನಿಗೂ, ಅರ್ವಗ್ವಸುವು ಗುರುವಿಗೂ, ಸ್ವರಾಟ್ ಕಿರಣವು ಶನಿಗೂ ಪ್ರಕಾಶವಾಗಿ ಇದರಿಂದ ಸೂರ್ಯನ ಬೆಳಕನ್ನೂ ಗ್ರಹಗಳು ಪ್ರತಿಫಲಿಸುತ್ತವೆ ಎಂಬುದನ್ನೂ ಪುರಾಣದಿಂದಲೂ ತಿಳಿಯಬಹುದಾಗಿದೆ. ಕಾಂತ ವರ್ಣರಾಜಿಯ ಪ್ರಕಾರ ಏಳು ರಾಜಿಗಳನ್ನು ಕಾಸ್ಮಿಕ ಕಿರಣಗಳು, ಗಾಮಾಕಿರಣಗಳು, ಎಕ್ಸ್‌ರೇಕಿರಣಗಳು, ಅತಿನೇರಳೆ ಕಿರಣಗಳು, ನಮ್ಮ ಕಣ್ಣಿಗೆ ಕಾಣುವ ಸಾಧಾರಣ ಬಿಳಿ ಬೆಳಕು, ಪರಾರುಣ ಕಿರಣಗಳು, ನಾನಾ ಉಷ್ಣಪ್ರಕಾಶ ಅಲೆಗಳು ಮತ್ತು ಸ್ರಾವಗಳು.

## 5) ದ್ವಾದಶಾದಿತ್ಯರು ಯಾರು?

**ಉತ್ತರ :** ಸೃಷ್ಟಿಕರ್ತನಾದ ಭಗವಂತನ ಇಚ್ಛಾಮಾತ್ರದಿಂದಲೇ ಒಂದು ದಿವ್ಯ ತೇಜಸ್ಸು ಹೊರಗೆ ಬಂದಿತು. ಹೊರಗೆ ಬಂದ ದಿವ್ಯ ತೇಜಸ್ಸಿನೊಂದಿಗೆ ಪರಮಾತ್ಮನಾದ ಶ್ರೀವಿಷ್ಣುವಿನ ತೇಜಸ್ಸು ಸೇರಿಕೊಂಡಿತು. ಅದು ಬೆಳೆದು ನಿಂತಿತು. ಸ್ವಯಂ ವ್ಯಕ್ತವಾದುದರಿಂದ ಸೂರ್ಯ ಎಂದು ಹೆಸರಾಯಿತು. ಈ ತೇಜಃಪುಂಜದಿಂದ ಹನ್ನೆರಡು ಪ್ರತ್ಯೇಕ ತೇಜಸ್ಸುಗಳು ಹುಟ್ಟಿದವು. ಅವೇ ದ್ವಾದಾ ಶಾದಿತ್ಯರೆಂದು ಹೆಸರಾದವು. ವಿಷ್ಣು ಅರ್ಯಮಾ, ವಿವಸ್ವನ್, ಅಂಶುಮಾನ್, ಪರ್ಜನ್ಯ, ವರುಣ, ಇಂದ್ರ, ಧಾತಾ, ಮಿತ್ರ ಪೂಷಾ, ಭಗ, ತ್ವಷ್ಟಾ ಕ್ರಮವಾಗಿ ಚೈತ್ರದಿಂದ ಫಾಲ್ಗುಣ ಮಾಸದ ಆದಿತ್ಯ ರಾಗಿ ಅಲಂಕರಿಸಿದರು.

# ಮಗನನ್ನೇ ಮಾದರಿಯಾಗಿ ಬೆಳೆಸಿದ ವಿಭಾಂಡಕ ಋಷಿ



- ಎ.ಆರ್. ರಘುರಾಮ
99161 38436

**ಪ್ರತ್ಯಕ್ಷೇ ಗುರುವಃ ಸ್ತುತ್ಯಃ**
**ಪರೋಕ್ಷೇ ಮಿತ್ರ -ಬಾಂಧವಾಃ ।**
**ಕರ್ಮಾಂತೇ ದಾಸ-ಭೃತ್ಯಾಶ್ಚ**
**ಪುತ್ರ ನೈವಚ ನೈವಚ॥**

ಎಂಬುದು ರಾಮಾಯಣದ ಸಂದೇಶ. ಗುರುವನ್ನು ಪ್ರತ್ಯಕ್ಷ ಪ್ರಶಂಸೆ ಮಾಡು. ಮಿತ್ರ-ಬಾಂಧವರನ್ನು ಅಪರೋಕ್ಷವಾಗಿ ಹೊಗಳು.

ಅಧೀನ ಕೆಲಸಗಾರರನ್ನು ಕೆಲಸ ಆದ ಮೇಲೆ ಬೆನ್ನು ತಟ್ಟು. ಆದರೆ ಪುತ್ರರನ್ನು ಎಂದೂ ಹೊಗಳಬೇಡ. ಅರ್ಥ ಏನೆಂದರೆ ಇತರರು ಪ್ರಶಂಸೆ ಮಾಡುವ ಮಟ್ಟಕ್ಕೆ ಮಕ್ಕಳನ್ನು ಬೆಳೆಸು ಎಂದು. ರಾಮಾಯಣದಲ್ಲಿ ಬರುವ ವಿಭಾಂಡಕ ಋಷಿಗಳು ಈ ನಿಟ್ಟಿನಲ್ಲಿ ಬಹು ದೊಡ್ಡ ಆದರ್ಶ ವ್ಯಕ್ತಿ ಮತ್ತು ಶಕ್ತಿಯಾಗಿದ್ದಾರೆ. ಅವರು ನಾಡಿನ ಸಂಪರ್ಕ ದಿಂದ ದೂರವೇ ಇದ್ದು ಜಪ-ತಪ ಮಾಡಿ ಸಾಧಕ ರಾಗಿದ್ದರು. ಅವರ ಮಗನೇ ಋಷ್ಯಶೃಂಗ. ಇಬ್ಬರೂ ಅಸಾಧಾರಣ ತಪಸ್ವಿಗಳು. ಆತನನ್ನು ತಂದೆ ಬೆಳೆ ಸಿದ ಪರಿ ಅನನ್ಯ. ನದಿ ತೀರದ ಆಶ್ರಮದಲ್ಲಿ ಅವರು ಮಗನಿಗೆ ತತ್ವ, ಶಾಸ್ತ್ರ ಉಪದೇಶಗಳನ್ನು ಮಾಡಿದರು. ಬದುಕಿನ ನೀತಿ, ಉದ್ದೇಶಗಳ ಬಗ್ಗೆ ಬೋಧಿಸಿದರು. ದೇವರ ಪೂಜೆ ಮತ್ತು ಧ್ಯಾನ, ತ್ರಿಕಾಲ ಸಂಧ್ಯಾವಂದನೆಗಳು ದಿನಚರಿ ಅತ್ಯ ಲೋಕವೇ ಬಾಲಕನಿಗೆ ತಿಳಿದಿರಲಿಲ್ಲ.

ನಿರಂತರ ತಪಸ್ಸು, ನೈಷ್ಠಿಕ ಬ್ರಹ್ಮಚರ್ಯ ದಿಂದ ಆತನಿಗೆ ಅಸಾಧಾರಣ ತೇಜಸ್ಸು ಮೂಡಿತ್ತು. ದಶರಥನ ಆಳ್ವಿಕೆಯಲ್ಲಿ ಒಮ್ಮೆ ಬರಗಾಲ ಬಂದಿತ್ತು. ವಿಭಾಂಡಕ ಋಷಿಗಳ ಆಶ್ರಮದಿಂದ ಋಷ್ಯಶೃಂಗ ನನ್ನು ರಾಜ ಗೌರವದಿಂದ ಕರೆಸಿಕೊಂಡ ಋಷ್ಯ ಶೃಂಗನು ಅಯ್ಯೋಧ್ಯೆ ಗಡಿಯೊಳಗೆ ಕೇವಲ ಕಾಲನ್ನು ಇಟ್ಟ ಕೂಡಲೇ ಧಾರಾಕಾರ ವರ್ಷಧಾರೆ! ರಾಜ್ಯವೆಲ್ಲ ವರುಣನ ಕೃಪೆಯಿಂದ ನಲಿಯಿತು. ವಸುಂಧರೆ ಹಸಿರಾದಳು, ಇದು ಋಷ್ಯಶೃಂಗನ ಅಖಂಡ ಬ್ರಹ್ಮಚರ್ಯ-ತಪಸ್ಸಿನ ದೊಡ್ಡ ಫಲ. ಇಂಥ ಮಗನನ್ನು ನಾಡಿಗೆ ಕೊಟ್ಟ ಕೀರ್ತಿ ವಿಭಾಂಡಕ ಋಷಿಗೆ ಸಲ್ಲುತ್ತದೆ. ಮಕ್ಕಳನ್ನು ಹೇಗೆ ಬೆಳೆಸಬೇಕು ಎಂದು ವಿಭಾಂಡಕರು ಲೋಕಕ್ಕೆ ಈ ಮೂಲಕ ಒಂದು ಆದರ್ಶವನ್ನು ತೋರಿಸಿದ್ದಾರೆ. ಮಕ್ಕಳ ಶಾಲೆ, ಕಲಿಕೆ, ಅಧ್ಯಯನ, ವೃತ್ತಿ, ಉಪನಯನ, ವಿವಾಹ ಸಾಮಾಜಿಕ ಸಂಪರ್ಕ- ಹೀಗೆ ಎಲ್ಲ ಹಂತದಲ್ಲೂ ಸಜ್ಜನರ ಸಹವಾಸವೇ ಆಗುವಂತೆ ನಾವು ಎಂದರೆ ಪಾಲಕರು ಗಮನಹರಿಸ ಬೇಕಿದೆ. ನಾವು ವಿಭಾಂಡಕ ರಂತೆ ಬದುಕು ನಡೆಸಿ, ಜವಾಬ್ದಾರಿ ನಿರ್ವಹಿಸಿದರೆ, ಆದರ್ಶಗಳನ್ನು ಕಲಿಸಿದರೆ, ಧರ್ಮ ಮಾರ್ಗದಲ್ಲಿ ನಡೆದು ತೋರಿಸಿದರೆ ಋಷ್ಯಶೃಂಗ ನಂಥ ಪುತ್ರರತ್ನವನ್ನು ದೇಶಕ್ಕೆ ಕೊಡುಗೆಯನ್ನಾಗಿ ನೀಡಲು ಸಾಧ್ಯ ವಾಗುತ್ತದೆ.

## ವೃಕ್ಷೋ ರಕ್ಷತಿ ರಕ್ಷಿತಃ

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**




# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ
ಚುಕ್ಕಿಯನ್ನು
ಸೇರಿಸಿ ಹಾಗೂ
ಬಣ್ಣವನ್ನು ತುಂಬಿರಿ.




ಬಣ್ಣವನ್ನು
ತುಂಬಿರಿ.






## ಮಾರ್ಗ ಅನ್ವೇಷಣೆ



ಮಕ್ಕಳೇ, ಆನೆಯು ಯಾವ ದಾರಿಯಲ್ಲಿ ಹೋದರೆ ಅದು ತನ್ನ ಆಹಾರವನ್ನು ತೆಗೆದುಕೊಂಡು ತಿನ್ನುತ್ತದೆ. ಎಂದು ಕಂಡು ಹಿಡಿಯಿರಿ ನೋಡೋಣ !






## ಕಂಡು ಹಿಡಿಯಿರಿ ನೋಡೋಣ

ಈ ಚಿತ್ರವನ್ನು ನೋಡಿ ಯಾವ ದೇವರಿಗೆ ಸಂಬಂಧಿಸಿದ
ವಸ್ತುಗಳು ಎಂದು ಕಂಡು ಹಿಡಿಯಿರಿ ನೋಡೋಣ
[illegible]



ತಿರುಮಲೆ ತಿರುಪತಿ ದೇವಸ್ಥಾನಗಳು



## ಮಕ್ಕಳೇ ಇದು ನಿಮಗಾಗಿ

# ರಸ ಪ್ರಶ್ನೆಗಳು

01. ಗಣಪತಿಯ ದೊಡ್ಡ ತಲೆ ಏನನ್ನು ಸೂಚಿಸುತ್ತದೆ?..........
02. ಹಯಗ್ರೀವ ಅವತಾರದಲ್ಲಿ ಯಾವ ತಲೆಯನ್ನು ಹೊಂದಿದ್ದಾನೆ?..........
03. ಅರ್ಜುನನೊಂದಿಗೆ ಯಾವ ರಾಜನು ಯುದ್ಧವನ್ನು ಮಾಡಿದನು? ..........
04. ಕೃಷ್ಣನು ದೇವಕಿಗೆ ಎಷ್ಟನೇ ಸಂತಾನ ?..........
05.ಶ್ರಾವಣ ಮಾಸದಲ್ಲಿ ಯಾರ ಆರಾಧನೆ ಪ್ರಮುಖವಾದುದು?..........
06. ಹಿಮವದ್‌ಗೋಪಾಲಸ್ವಾಮಿ ಆಲಯ ಯಾವ ಜಿಲ್ಲೆಯಲ್ಲಿದೆ? ..........
07. ಯಾರ ಶ್ರೀಕಾರದಿಂದ ಅಕ್ಷರಾಭ್ಯಾಸ ಮಾಡಿಸಿದರು? ..........
08. ವರಗಳ ಕೊಡುವ ತಾಯಿ ಯಾರು? ..........
09. ವಿಮಾನದಲ್ಲಿ ಯಾರನ್ನು ದರ್ಶಿಸಿದರು?..........
10. ಮಾಧವನ್ನೆ ಎನ್ನುವ ಪದಕ್ಕೆ ಮತ್ತೊಂದು ವಿಶೇಷಣ? ..........
11.ಶ್ರೀ ಗೋವಿಂದರಾಜ ಸ್ವಾಮಿಗೆ ಯಾವ ಮಾಸದಲ್ಲಿ ಶೈತ್ಯೋಪಚಾರ ನಡೆಯುತ್ತದೆ? ..........
12. ಆಂಡಾಳ್ ಯಾರಲ್ಲಿ ಐಕ್ಯವಾದರು?..........
13. ಯಾರ ಆಳ್ವಿಕೆಯಲ್ಲಿ ಬರಗಾಲ ಬಂದಿತ್ತು?..........
14. ರಾವಣ ಯಾರ ಕುರಿತು ತಪಸ್ಸು ಮಾಡಿದನು? ..........
15. ಬಾಲಕನ ರೂಪದಲ್ಲಿ ರಾವಣನ ಬಳಿ ಬಂದದ್ದು ಯಾರು? ..........

## ಸೂಚನೆಗಳು

**37 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |


ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

- ಕೃಷ್ಣನ ಮಾವ ಯಾರು?
- ಕೃಷ್ಣನ ಬಾಲ್ಯದ ಗೆಳೆಯ ಯಾರು?
- ಶ್ರೀ ಕೃಷ್ಣನ ರಾಜ್ಯವನ್ನು ಏನೆಂದು ಕರೆಯುತ್ತಾರೆ?
- ಕೃಷ್ಣನ ಅವತಾರ ಎಷ್ಟನೇಯದು?
- ಕೃಷ್ಣನು ಯಾವ ಭಗವಂತನ ಅವತಾರ?
- ಶ್ರೀಕೃಷ್ಣನು ಒಂದು ಕಿರುಬೆರಳಿನಲ್ಲಿ ಎತ್ತಿದ ಪರ್ವತ ಯಾವುದು?
- ಶ್ರೀಕೃಷ್ಣನ ಅಣ್ಣನ ಹೆಸರೇನು?
- ಶ್ರೀ ಕೃಷ್ಣನ ತಾಯಿ ಯಾರು?



1) ಕಂಸ 2) ಸುಧಾಮ 3) ದ್ವಾರಕ 4) ಎಂಟನೇಯ 5) ವಿಷ್ಣು 6) ಗೋವರ್ಧನ
7) ಬಲರಾಮ 8) ದೇವಕಿ

ಮಕ್ಕಳೇ! ಈ ಚಿತ್ರದಲ್ಲಿರುವ ಪುಸ್ತಕದ ಮೇಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಪೆನ್ಸಿಲ್ ಬಾಕ್ಸ್‌ಗೆ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!




1) iv 2) vi 3) i 4) iii 5) ii



ಮಕ್ಕಳೇ, ನಾನು ವೇಗವಾಗಿ ಓಡುತ್ತೇನೆ. ನನ್ನನ್ನು ದೇವರೆಂದು ಪೂಜೆ ಮಾಡುತ್ತಾರೆ. ನಾನು ಹಯಗ್ರೀವ ರೂಪದಲ್ಲಿ ಇರುತ್ತೇನೆ. ಹಾಗೂ ತಿರುಮಲೆಯಲ್ಲಿ ಸ್ವಾಮಿಯವರ ವಾಹನ ಸೇವೆಯಲ್ಲಿ ಕೊನೆಯ ವಾಹನವೇ ನಾನು. ಯಾರು ಎಂದು ಹೇಳಿ ನೋಡೋಣ!

**ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!**


ಕುದುರೆ

ಚಿತ್ರಕಥೆ

# ಮೊದಲು ನಮಸ್ಕಾರ ಮಾಡದಿದ್ದರೆ


ಕಥೆ : ತೆಲುಗು ಮೂಲ : ಡಾ|| ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ





ದೂರದಲ್ಲಿ ಗಣಪತಿ ಒಬ್ಬ ಬ್ರಹ್ಮಚಾರಿಯ ರೂಪದಲ್ಲಿ ಕಾಣಿಸಿಕೊಂಡನು.
ಮಗು! ನನಗೆ ಒಂದು ಉಪಕಾರ ಮಾಡುತ್ತೀಯಾ? ಸೂರ್ಯಾಸ್ತಮಯವಾಗುತ್ತಿದೆ. ಸಂಧ್ಯಾವಂದನೆ ಮುಗಿಸಿ ನಾನು ಬರುತ್ತೇನೆ. ಅಲ್ಲಿಯವರೆಗೆ ಈ ಜ್ಯೋತಿರ್ಲಿಂಗವನ್ನು ಹಿಡಿದುಕೊಂಡು ನಿಲ್ಲು.
ನಾನು ಯಾಕೆ ಹಿಡಿದುಕೊಳ್ಳಬೇಕು. ಅಲ್ಲಿ ಇರುವ ಆ ಕಟ್ಟೆಯ ಮೇಲೆ ಇಟ್ಟು ಹೋಗು!
ಸಾಧ್ಯವಿಲ್ಲ ಮಗು! ಅನ್ಯಥಾ ಮಾಡಿದರೆ ಅದು ದಕ್ಕುವುದಿಲ್ಲ. ಕೈಯಲ್ಲಿ ಹಿಡಿದುಕೊಳ್ಳಬೇಕು.
ಸರಿ ಕೊಡು ಅಮ್ಮಾ ಈ ಲಿಂಗವೇನು ಇಷ್ಟು ಭಾರವಿದೆ?
ಅಯ್ಯಾ! ನಾನು ಎಷ್ಟು ಸಾಧ್ಯವೋ ಅಷ್ಟು ಹೊತ್ತು ಹೊತ್ತುಕೊಂಡು ಇರುತ್ತೇನೆ. ಹೊತ್ತು ಕೊಳ್ಳಲು ಸಾಧ್ಯವಾಗದಿದ್ದಾಗ ನಾನು ಮೂರು ಬಾರಿ ಕೂಗುತ್ತೇನೆ ನೀನು ತಕ್ಷಣ ಬರದಿದ್ದರೆ, ಆ ನಂತರ ಈ ಲಿಂಗಕ್ಕೆ ನಾನು ಜವಾಬ್ದಾರನಾಗಿರುವುದಿಲ್ಲ.
ಕೂಗಿದ ತಕ್ಷಣ ಬರುತ್ತೇನೆ.
ರಾವಣ! ಓ ರಾವಣಾ!
ನಾನು ಕೂಗುತ್ತಿರುವುದು ಇದು ಮೂರನೇ ಬಾರಿ ರಾ...ವ...ಣಾ!
ಶಿವಲಿಂಗವನ್ನು ನೆಲದ ಮೇಲೆ ಇಟ್ಟನು
ಬಾಲಕಾ! ನೀನು ನನ್ನ ಸನ್ನಿಧಿಯಲ್ಲಿ ವಿಘ್ನೇಶ್ವರನಾದ ನೀನು ಆತ್ಮಲಿಂಗವನ್ನು ಭೂಮಿಯ ಮೇಲೆ ಪ್ರತಿಷ್ಠಾಪಿಸಿದ್ದೀಯಾ...
ರಾವಣಾ! ನೀನು ಮೊದಲು ಗಣಪತಿಯನ್ನು ಪೂಜಿಸದ ಕಾರಣ ಇದೆಲ್ಲವೂ ನಡೆಯಿತು. ದೈವವು ನಿನ್ನ ವಿರುದ್ಧ ತಿರುಗಿಬಿದ್ದಿದ್ದಾನೆ. ನೀನು ಏನೂ ಮಾಡಲು ಸಾಧ್ಯವಿಲ್ಲ. ಲಂಕಾನಗರಕ್ಕೆ ಹೊರಡು..
ರಾವಣಾ! ಶುದ್ಧ ಭಕ್ತಿಯಿಂದ ನನ್ನನ್ನು ಸಂತೋಷಪಡಿಸಿ ಆತ್ಮಲಿಂಗವನ್ನು ಪಡೆದ ನಿನ್ನ ಇತಿಹಾಸವು ಅಮರ, ಇಂದಿನಿಂದ ಈ ಗೋಕರ್ಣ ಕ್ಷೇತ್ರವು ಭೂಕೈಲಾಸವಾಗಿ ಪ್ರಸಿದ್ಧಿಯನ್ನು ಪಡೆಯುತ್ತದೆ. ಇಲ್ಲಿಗೆ ಬರುವ ಭಕ್ತರು ಮೊದಲು ವಿಘ್ನೇಶ್ವರನನ್ನು ಪೂಜಿಸುತ್ತಾರೆ.
ಲೋಕಾಸಮಸ್ತಾ ಸುಖಿನೋ ಭವಂತು

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಆನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ


# ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



30-06-2025 ರಂದು ಶ್ರೀನಿವಾಸ ಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಸಾಕ್ಷಾತ್ಕಾರ ವೈಭವೋತ್ಸವಗಳು ಅತ್ಯಂತ ವೈಭವವಾಗಿ ನಡೆಯಿತು. ಮೊದಲನೇ ದಿನ ದೊಡ್ಡಶೇಷ ವಾಹನದಲ್ಲಿ, ಎರಡನೇ ದಿನ ಹನುಮಂತ ವಾಹನದಲ್ಲಿ ಮತ್ತು ಮೂರನೇ ದಿನ ಗರುಡ ವಾಹನದಲ್ಲಿ ಭಕ್ತರಿಗೆ ಸ್ವಾಮಿಯವರು ದರ್ಶನವನ್ನು ನೀಡಿದರು.




23-06-2025 ರಂದು ತಿರುಮಲೆ ಸ್ವಾಮಿಯವರ ಲಡ್ಡುಗಳನ್ನು ಸುಲಭವಾಗಿ ತೆಗೆದುಕೊಳ್ಳಲು ತಿ.ತಿ.ದೇ., ಕಿಯೋಸ್ಕ್ ಎಂಬ ಯಂತ್ರದ ಮುಖಾಂತರ ಲಡ್ಡುಗಳನ್ನು ಪಡೆದು ಕೊಳ್ಳುವ ಅವಕಾಶವನ್ನು ಕಲ್ಪಿಸಿತು.



21-06-2025 ರಂದು ಯೋಗಾ ದಿನೋತ್ಸವ ಸಂದರ್ಭದಲ್ಲಿ ತಿರುಪತಿಯಲ್ಲಿರುವ ತಿ.ತಿ.ದೇ., ಆಡಳಿತ ಭವನದ ಮೈದಾನದಲ್ಲಿ ಯೋಗಾ ಕಾರ್ಯಕ್ರಮವು ನಡೆಯಿತು. ಈ ಸಂದರ್ಭದಲ್ಲಿ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮಂ, ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಶ್ರೀ ಭಾನುಪ್ರಕಾಶ್ ರೆಡ್ಡಿ ಯವರು, ಶ್ರೀಮತಿ. ಪನಬಾಕ ಲಕ್ಷ್ಮೀ ಯವರು ಇತರ ತಿ.ತಿ.ದೇ., ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-07–2025 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/2024-2026" Posting on 5th of Every Month



ಗಣೇಶ ಚತುರ್ಥಿ 27-08-2025